# DR. NIRMALA BALACHANDRA, D.D.S



## Family Dental Care

**Graduate of New York University**
**More than 9 Years of Experience in the US**
**Member-ADA, CDA, Santa Clara Dental Society**


## Great Convenient Location in San Jose
## Easy Access From 680, 280, and 101

Our Services Include: Tooth Colored Fillings (Mercury Free), Root Canals, Crowns and Bridges **Wisdom Teeth Extraction**, Panoramic X-Rays, **ZOOM-2 In office Bleaching, Invisalign**

**NIRMALA BALACHANDRA, D.D.S. 2324 Montpelier Drive, Suite #2 San Jose, CA 95116 (Across from Alexian Brothers Hospital and Close to Jackson Avenue)**

**(408) 929-2002**

**Saturday/ Sunday Appointments Available**



Jaswant Singh EA
" Jessie"

# JESSIE TAX SERVICE

**(408) 736-2451**
**1-800-853-7743**
jsjessie@comcast.net

WE OFFER ELECTRONIC TAX FILING

## " WHY PAY MORE, WE DO IT FOR LESS "

***SPECIALIZING IN:***

- ***COMPUTERIZED TAX RETURN PREPARATION***
- ***INDIVIDUAL, 1040NR & FOREIGN STATES TAXES***
- ***BUSINESS, PARTNERSHIP & CORPORATION TAXES***
- ***BOOK-KEEPING, SALES TAX & PAYROLL TAXES***
- ***AUDIT REPRESENTATION & NOTARY SERVICES***

**OUR GOAL:**
- MINIMIZED TAX
- REASONABLE CHARGES
- OPEN ALL YEAR ROUND
- CUSTOMER SATISFACTION

**CONTACT:**
Jaswant Singh EA
1491 S. Wolfe Road
Sunnyvale, CA-94087
☎ (408) 736-2451

# ಹಾರ್ದಿಕ ಶುಭಾಶಯಗಳು

# Masala Oven Indian Cuisine

**Grand Buffet * Fast Food * Banquet Hall * Company Events * Party Orders**

## Grand Buffet

Salad Bar with variety of Fruits and Ranch Dressing

Snacks with Soups
South Indian Tiffins
North & South Indian Veg & Non-Veg Curries
Dessert Bar with variety of Pastries, Cookies, Sandwiches and Gulab Jamun with Ice-cream

## Specialties

South Indian Tiffins
Tandoori Delights
Soups
Kababs
Desi Chinese
Veg/Chicken/Shrimp Rice Varieties & Biryanis
Special Combos
Special Dinner Thaalis
Veg & Non-Veg Snacks

## Bakery Specials

Egg or Egg-less Cakes
Variety of Pastries
Cashew Cookies
Puddings
Cream Custards

Open Daily 11:30a – 2:30p & 5:30p – 10:00p
544 Lawrence Expy Sunnyvale CA 94085
408-245-6800
www.masalaoven.com

# ಹತ್ತು ಮನಗಳು ಹೆಣೆದ ಕಥೆ

| | |
|---|---|
| ಮಧು ಕೃಷ್ಣಮೂರ್ತಿ | (ಪ್ಯಾರಾ ೧, ೧೯) |
| ವಿಶ್ವನಾಥ್ ಹುಲಿಕಲ್ | (ಪ್ಯಾರಾ ೨, ೧೫) |
| ಮಂಗಳ ಕುಮಾರ್ | (ಪ್ಯಾರಾ ೩, ೧೨) |
| ಸಂಧ್ಯಾ ರವೀಂದ್ರನಾಥ್ | (ಪ್ಯಾರಾ ೪, ೧೬) |
| ರವಿ ಕೃಷ್ಣಾ ರೆಡ್ಡಿ | (ಪ್ಯಾರಾ ೫) |
| ಜ್ಯೋತಿ ಶೇಖರ್ | (ಪ್ಯಾರಾ ೬, ೧೮) |
| ಡಾ. ಮೀನಾ ಸುಬ್ಬರಾವ್ | (ಪ್ಯಾರಾ ೭, ೧೧) |
| ಗಣೇಶ್ ಕಡಬ | (ಪ್ಯಾರಾ ೮, ೧೩) |
| ಅಲಮೇಲು ಅಯ್ಯಂಗಾರ್ | (ಪ್ಯಾರಾ ೯, ೧೪) |
| ಶ್ರೀವತ್ಸ ದುಗ್ಗಾಪುರ | (ಪ್ಯಾರಾ ೧೦, ೧೭) |




*ಒಂದು ಕಥೆಯನ್ನು ಒಬ್ಬ ಬರಹಗಾರ ಬರೆಯುವುದು ವಾಡಿಕೆ. ಕಥೆಯಲ್ಲಿನ ಪಾತ್ರಗಳು ಹಾಗು ಸನ್ನಿವೇಶಗಳು ಲೇಖಕನ ಸೃಷ್ಟಿಯಾಗಿರುತ್ತವೆ. ಪಾತ್ರಗಳು ಒಂದೇ ಬರಹಗಾರನ ಸೂಚನೆಗಳನ್ನು ಅನುಸರಿಸುತ್ತಿರುತ್ತವೆ. ಆದರೆ ನಮಗೆ ತಿಳಿದಂತೆ ನಿಜ ಜೀವನದಲ್ಲಿ ಬರುವ ಸನ್ನಿವೇಶಗಳು ಹತ್ತುಮನಗಳು ಯೋಚಿಸಬಹುದಾದ ಹತ್ತು ದಿಕ್ಕಿನ ನೇರಕ್ಕೆ ತಿರುಗುವ ಸಾಧ್ಯತೆಗಳೇ ಹೆಚ್ಚು. ಈ ನೈಜತೆಯನ್ನು ಒಂದು ಕಥೆಯಲ್ಲಿ ಹೊರತರಬೇಕೆಂಬ ಉದ್ದೇಶದಿಂದ ಕ್ಯಾಲಿಫೋರ್ನಿಯ ಬೇ ಏರಿಯಾದ ಹತ್ತು ಬರಹಗಾರು ಸೇರಿ ಈ ಕಥೆಯನ್ನು ರಚಿಸಿದ್ದೇವೆ. ಸರಣಿಯಂತೆ ಒಬ್ಬ ಬರಹಗಾರರ ನಂತರ ಮತ್ತೊಬ್ಬರು ನಿಗದಿತವಾದಷ್ಟೆ ಕಥೆಯನ್ನು ಬೆಳೆಸುತ್ತ ಬಂದಿದ್ದರೂ ಪಾತ್ರಗಳು ಮತ್ತು ಸನ್ನಿವೇಶಗಳು ಹತ್ತು ಪ್ರತಿಭಾವಂತ ಲೇಖಕರಿಂದ ಪೋಷಿಸಲ್ಪಟ್ಟು ಕಥೆಯ ಸ್ವಾರಸ್ಯವನ್ನು ಹೆಚ್ಚಿಸಿವೆ ಎಂಬುದು ನಮ್ಮ ಅನಿಸಿಕೆ. ಈ ಕಥೆ ತಮಗೂ ಮೆಚ್ಚುಗೆಯಾಗುವುದೆಂದು ಆಶಿಸುತ್ತೇವೆ. ಬರಹಗಾರರ ಹೆಸರಿನ ಜೊತೆಗೆ ನೀಡಿರುವ ಸಂಖ್ಯೆಗಳು ಅವರು ಬರೆದ ಪ್ಯಾರಾಗಳನ್ನು ಸೂಚಿಸುತ್ತವೆ.*

*--ಮಧುಕಾಂತ್ ಕೃಷ್ಣಮೂರ್ತಿ (ಕಥಾ ಸಂಪಾದಕ)*
*(madhukanthk_AT_yahoo.com)*

೧ ಬೆಂಗಳೂರಿನಿಂದ ಸ್ಯಾನ್ ಫ್ರಾನ್ಸಿಸ್ಕೊ ತಲುಪಿದ್ದ ರವಿಯನ್ನು ಅವನ ರೂಮ್‌ಮೇಟ್ ಕಿರಣ್ ಎದುರುಗೊಂಡಿದ್ದ. "ಸೋ..... ಮನೆಯವರು ಯಾರನ್ನಾದ್ರು ಗಂಟು ಹಾಕಿದ್ರಾ?" ಸೂಟ್‌ಕೇಸುಗಳನ್ನು ಕಾರಿನಲ್ಲಿ ಇಡುತ್ತ ಕಿರಣ್ ಕೇಳಿದ. "ಹ್ಹಹ್ಹಾ... ಏನಂದ್ಕೊಂಡಿದಿಯ ನನ್ನ? ಈ ಸಾರಿನೂ ತಪ್ಪಿಸಿಕೊಂಡು ಬಿಟ್ಟೆ." ಎಂದು ಹೇಳಿ ಹೆಮ್ಮೆಯಿಂದ ಬೀಗಿದ ರವಿ. ಮುಕ್ಕಾಲು ಘಂಟೆಯ ಕಾರು ಪ್ರಯಾಣದ ನಂತರ ಸನ್ನಿವೇಲ್‌ನಲ್ಲಿರುವ ತಮ್ಮ ಎರಡು ಕೊಠಡಿಯ ಅಪಾರ್ಟ್‌ಮೆಂಟ್ ಸೇರಿದ್ದರು. ಮನೆ ಸೇರಿದ ಕೂಡಲೆ ಕಿರಣ್, "ತಿಂಡಿ ಕೊಡೋ" ಎಂದನು. "ನೀನೆ ತೊಗೋ." ಎನ್ನುತ್ತ ರವಿ ಅವನ ಕಡೆ ರೊಯ್ಯನೆ ಬೀಗದ ಕೈ ಗೊಂಚಲನ್ನು ಎಸೆದು ಶವರ್ ತೆಗೆದುಕೊಳ್ಳಲು ಹೋದನು. ಹಿಂದಿರುಗಿ ಬಂದಾಗ ಕಿರಣ್ ಹೇಳಿದ: "ಈ ಸೂಟ್‌ಕೇಸ್ ಓಪನ್ ಆಗ್ತಾನೇ ಇಲ್ಲ!" ರವಿ ಬೀಗದಕೈ ಕಿತ್ತುಕೊಂಡು, ಸೂಟ್‌ಕೇಸ್ ಬೀಗ ತೆಗೆಯಲು ಪ್ರಯತ್ನಿಸಿದ. ಊಹುಂ, ತೆಗೆಯಲಾಗಲಿಲ್ಲ. "ಇದು ನಂದೆ ತಾನೆ? ಬ್ಯಾಗೇಜ್ ಟಿಕೆಟ್ ಎಲ್ಲಿ ಕಾಣ್ತಾ ಇಲ್ಲವಲ್ಲ." ಎನ್ನುತ್ತ ಕಿರಣ್ ಕಡೆ ನೋಡಿದ. "ನಾನು ಅದನ್ನ ಹರಿದು ಬಿಸಾಕಿದೆ." ಎಂದ ಕಿರಣ್. ಅಸಮಾಧಾನದಿಂದ ರವಿ ಸೂಟ್‌ಕೇಸಿನ ಮೇಲೆ ಹೆಸರಿಗಾಗಿ ಹುಡುಕಿದ. ಸೂಟ್‌ಕೇಸಿನ ಹಿಡಿಯ ಒಳಭಾಗದಲ್ಲಿ, ಬರೆದುದನ್ನು ಅವರಿಬ್ಬರೂ ಒಕ್ಕೊರಲಿನಿಂದ ಓದಿದರು: "ನಿಶಿಗಂಧ ನಿಶಿಗಂಧ!"

೨ ನಿಶಿಗಂಧಳ ರಮ್ಯ ಕಲ್ಪನೆಯಲ್ಲಿ ಕಿರಣ್ ತೇಲಿಹೋದ. ಬರೆದ ಮುದ್ದಾದ ಅಕ್ಷರಗಳಂತೆ, ಆಕೆಯೂ ಸುರಸುಂದರಿಯಾಗಿರಬೇಕೆಂದು ತರ್ಕಿಸಿದ. ಇತ್ತ ರವಿಗೆ ವಾಸ್ತವಿಕ ಲೋಕಕ್ಕೆ ಮರಳಲು ಕೊಂಚ ಸಮಯವೇ ಹಿಡಿಯಿತು. ಕಳೆದುಹೋದ ಸೂಟ್‌ಕೇಸ್‌ನಲ್ಲಿ ಅಮ್ಮ ಪ್ರೀತಿಯಿಂದ ಮಾಡಿಕೊಟ್ಟಿದ್ದ ಕೋಡುಬಳೆ, ಚಕ್ಕುಲಿ, ಬೇಸನ್‌ಲಾಡು ಇನ್ನಿತರ ತಿಂಡಿಗಳಿದ್ದವು. ಅಷ್ಟೇ ಅಲ್ಲ, ತಾನು ಬೆಂಗಳೂರಿನಲ್ಲಿ ಇಷ್ಟಪಟ್ಟು ಹೊಲಿಸಿಕೊಂಡ ಸೂಟ್ ಸಹ ಇತ್ತು. ಸೂಟ್‌ಕೇಸ್ ಅದುಲುಬದಲಾಗಿದ್ದರೆ ಪರವಾಗಿಲ್ಲ, ಕಳೆದುಹೋಗಿದ್ದರೆ ಏನು ಮಾಡುವುದು ಎಂಬ ಯೋಚನೆ ಅವನನ್ನು ಕಾಡದೆ ಇರಲಿಲ್ಲ. ಚಿಂತೆಯಿಂದ ಹೊರಬಂದ ರವಿ, ಕಿರಣನನ್ನುದ್ದೇಶಿಸಿ ಹೇಳಿದ: "ಏರ್‌ಪೋರ್ಟಿಗೇ ಹೋಗಿ ನೋಡೋಣ?" ತನ್ನ ಕಲ್ಪನಾಲೋಕದಿಂದ ಧರೆಗೆ ಮರಳಿದ ಕಿರಣ್, ವಾಪಸ್ ಏರ್‌ಪೋರ್ಟಿಗೆ ಹೋಗೋಣವೆಂದು ಒಪ್ಪಿಕೊಂಡ; ತಮಗೆ ಅದೃಷ್ಟವಿದ್ದಲ್ಲಿ, ನಿಶಿಯನ್ನೊಮ್ಮೆ ನೋಡಬಹುದೆಂಬ ಆಸೆಯೇ ಅವನು ಒಪ್ಪಿಗೆ ನೀಡುವುದಕ್ಕೆ ಪ್ರೇರಣೆಯಾಗಿತ್ತು! ಮಿತ್ರರೀರ್ವರು ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಹಿಂದಿರುಗಿದರು. ಕಾರನ್ನು ಪಾರ್ಕ್ ಮಾಡಿ, ಸೂಟ್‌ಕೇಸನ್ನು ಎಳೆದುಕೊಂಡು, ನೇರವಾಗಿ ಸಿಂಗಪೂರ್ ಏರ್‌ಲೈನ್ಸ್ ಆಫೀಸಿಗೆ ಹೋದರು. ಅಲ್ಲಿ ನೋಡುತ್ತಾರೆ, ಯೌವನ, ಸೌಂದರ್ಯ ಮತ್ತು ಲಾವಣ್ಯಗಳಿಂದ ಕಂಗೊಳಿಸುತ್ತಿದ್ದ ಚಲುವೆಯನ್ನ!

೩ ಆ ಚೆಲುವೆ ಕೌಂಟರಿನ ಹಿಂದಿದ್ದ ಮಧ್ಯವಯಸ್ಕನೊಂದಿಗೆ ಕೈಬೆರಳುಗಳಿಂದ ಸಂಜ್ಞೆ ಮಾಡುತ್ತ "ಸಂಭಾಷಣೆ" ನಡೆಸಿದ್ದಳು. ಜೊತೆಗೆ ಒಂದು ಹಾಳೆಯಲ್ಲಿ ಇವಳು ಬರೆದ ಸಂದೇಶವನ್ನು ಅವನು ಓದಿ ಮರುತ್ತರ ನೀಡುವುದು, ಅವನ ಉತ್ತರಕ್ಕೆ ಬದಲಾಗಿ ಅವಳು ಇನ್ನೊಂದು ಸಂದೇಶವನ್ನು ಬರೆಯುವುದು ಎಲ್ಲ ನಡೆಯುತ್ತಿದ್ದುದನ್ನು ನೋಡಿ ರವಿ ಆ ಚೆಲುವೆ ಮೂಕಿಯೋ, ಕಿವುಡಿಯೋ ಆಗಿರಬೇಕೆಂದು ಕಿರಣನ ಕಿವಿಯಲ್ಲಿ ಪಿಸುಗುಟ್ಟಿದ. ಕಿರಣ್ ಇನ್ನೇನೂ ಹೇಳದೆ ಭ್ರಮನಿರಸನವಾದವನಂತೆ "ನಾನು ಅಲ್ಲಿ ಕೂತಿರ್ತೀನಿ ಕಣಯ್ಯ. ನಿನ್ನ ವ್ಯವಹಾರ ಮುಗಿಸಿಕೊಂಡು ಬಾ." ಎಂದು ಐವತ್ತು ಮಾರು ದೂರದಲ್ಲಿದ್ದ ಕುರ್ಚಿಗಳ ಸಾಲಿನೆಡೆಗೆ ಹೋಗಿಬಿಟ್ಟ. ಕೆಲವೇ ನಿಮಿಷಗಳಲ್ಲಿ ಆ ಸುಂದರಿ ತನ್ನ ಕೆಲಸ ಮುಗಿಸಿ ಇವರಿಬ್ಬರ ಅರಿವೂ ಇಲ್ಲದ ಹಾಗೆ ಹೋಗಿಬಿಟ್ಟಳು. ಬಾಡಿಹೋದ ಹೂವಿನಂತೆ ಕುಂದಿ ಹೋಗಿದ್ದ ಅವಳ ಸುಂದರ ಮುಖವನ್ನು ಕವಿದಿದ್ದು ದುಃಖವೋ, ವಿಷಾದವೋ, ರವಿಗೆ ತಿಳಿಯಲಿಲ್ಲ. ಅವನ ಸರದಿ ಮುಗಿಯುವ ಹೊತ್ತಿಗೆ ಖಚಿತವಾಗಿ ತಿಳಿದ ವಿಷಯ ಮಾತ್ರ ಆ ಸುಂದರಿ ತಾವು ಬಯಸಿದ ನಿಶಿಗಂಧ ಅಲ್ಲ ಎಂದು. ಜೊತೆಗೆ ರವಿಯ ಸೂಟ್‌ಕೇಸಿನ ಪತ್ತೆಯೂ ಇಲ್ಲ ಎಂದು. ಬಂದ ದಾರಿಗೆ ಸುಂಕವಿಲ್ಲ ಎಂದು ಮನೆಗೆ ವಾಪಸ್ ಮರಳುವಾಗ ಕಿರಣ್ ಮಾತೇ ಇಲ್ಲದೇ ಗಂಭೀರವಾಗಿಬಿಟ್ಟಿದ್ದನ್ನು ನೋಡಿ ರವಿ "ಏನಾಯ್ತು ನಿಂಗೆ? ಗಾಳಿ ಹೋದ ಟೈರ್ ಥರ ಪೆಚ್ಚಾಗಿಬಿಟ್ಟೆಯಲ್ಲ?" ಎಂದ.

೪ ತನ್ನದೇ ಪ್ರಪಂಚದಲ್ಲಿ ಮುಳುಗಿದ್ದ ಕಿರಣನಿಗೆ ರವಿಯ ಪ್ರಶ್ನೆ ಕೇಳೇ ಇರಲಿಲ್ಲ. ಕಿರಣ್ ಹಿಂದಿನ ಘಟನೆಗಳನ್ನು ನೆನೆಯುತ್ತ ಯೋಚನಾಮಗ್ನನಾಗಿದ್ದ. ಬೆಂಗಳೂರಿಗೆ ಹೋದ ರವಿ ಹೇಗಿದ್ದರೂ ತನ್ನ ಜೀವನ ಸಂಗಾತಿಯೊಡನೆಯೇ ಹಿಂತಿರುಗುವನೆಂದು ನಂಬಿದ್ದ ಕಿರಣನನ್ನು ಒಂಟಿತನ ಕಾಡತೊಡಗಿತ್ತು. ಅವನು ಮದುವೆ.ಕಾಮ್‌ಗೆ ಹೋಗಿ ತನಗೆ ಬೇಕಾದ ಹುಡುಗಿಯನ್ನು ಇಲ್ಲೇ ಹುಡುಕಿದರೆ ಹೇಗೆ ಎಂದು ಆಲೋಚಿಸಿ, ಅದನ್ನು ಕಾರ್ಯಗತ ಮಾಡಿಯೂಬಿಟ್ಟಿದ್ದ. ಅವನಿಗೆ ಬಂದ ಉತ್ತರಗಳಲ್ಲಿ ಅವನ ಮನ ಸೆಳೆದಿದ್ದು ಬೇ ಏರಿಯಾದಲ್ಲೇ ಕೆಲಸದಲ್ಲಿದ್ದ ಸುಭಾ ಬರೆದ ಇ-ಮೇಲ್. ಫೋಟೋ ನೋಡಿದೊಡನೆ ಆ ಹುಡುಗಿಯ ಸೌಂದರ್ಯಕ್ಕೆ ಮಾರುಹೋಗಿದ್ದ. ಮುಖತಃ ಭೇಟಿಯಾಗೇ ಬಿಡೋಣವೆಂದು ನಿರ್ಧರಿಸಿ ಭೇಟಿಯಾಗಲು ತಾಣ, ಕಾಲವನ್ನು ಏರ್ಪಾಡುಮಾಡಿದ್ದ. ಹೇಳಿದ ಸಮಯಕ್ಕಿಂತ ಕೊಂಚ ಮುಂಚೆಯೇ ಅಲ್ಲಿಗೆ ಹೋಗಿದ್ದ. ಸುಭಾ ಅಲ್ಲಿಗೆ ಬಂದು ಬಾಗಿಲಲ್ಲಿ ನಿಂತು, ಕಿರಣನನ್ನು ಗುರುತಿಸಿ, ನಗುತ್ತ ಅವನೆಡೆಗೆ ಬರುತ್ತಿದ್ದರೆ, ಕಿರಣ್‌ಗೆ ಸ್ವರ್ಗವೇ ಕೈಗೆ ಸಿಕ್ಕಂತಾಗಿತ್ತು. ಸಂತೋಷದಿಂದ ಎದ್ದು ನಿಂತು ಹೆಲೋ ಎಂದು ಸ್ವಾಗತಿಸಿದಾಗ ಅವಳು ಏನೆಂದಳೋ ಗಮನಿಸದೆ ಅವಳ ನಗೆಯಲ್ಲಿ ತೇಲಿ ಹೋಗಿದ್ದ. ಅವಳು ಕುಳಿತು ತನ್ನ ಪರ್ಸ್‌ನಿಂದ ಒಂದು ನೋಟ್‌ಬುಕ್ ತೆಗೆದು, "ಹೆಲೋ, ಐ ಆಮ್ ಸುಭಾಷಿನಿ. ನೈಸ್ ಟು ಮೀಟ್‌ಯು." ಎಂದು ಬರೆದು ಕಿರಣನ ಕಡೆಗೆ ಹಿಡಿದ್ದಿದ್ದಳು. ಅವನಿಗೆ ಆಗ ಪಕ್ಕನೆ ಹೊಳೆದಿತ್ತು-

ಸುಭಾಗೆ ಮಾತಾಡಲು ಆಗುವುದಿಲ್ಲವೆಂದು. ತಕ್ಷಣ ಗರಬಡಿದಂತಾಗಿತ್ತು. ಈ ಚೆಲುವೆ ಮೂಕಿಯೇ? ಮೂಕಿಯೊಡನೆ ಸ್ನೇಹವೇ? ಪ್ರೇಮವೇ? ಮುಂದೆ ಮದುವೆಯೇ?

೫

ಒಂದು ಕ್ಷಣ ಸುಮ್ಮನೆ ಪೆದ್ದು ಪೆದ್ದಾಗಿ ನಗುತ್ತ ನೋಡುತ್ತ, ಮುಜುಗರವನ್ನು ಮುಚ್ಚಿಟ್ಟುಕೊಂಡಿದ್ದೇನೆ ಎಂಬ ಭ್ರಮೆಯಲ್ಲಿ ಕುಳಿತ. ಮತ್ತೆ ಆಕೆಯೇ ಬರೆಯಲು ಪ್ರಾರಂಭಿಸಿದಳು. "ಭಾರತದಲ್ಲಿ ನಿಮ್ಮ ಊರು ಯಾವುದು?" ಎಂಬ ಪ್ರಶ್ನೆ ತೋರಿಸಿದಳು. ಇವನು ಬೆಂಗಳೂರು ಎಂದವನೇ ಅವಳಿಗೆ ಎಷ್ಟು ಮಾತ್ರ ಅರ್ಥವಾಯಿತು ಎಂಬ ಗೊಂದಲದಲ್ಲಿ ಬಿದ್ದ. ಯಾಕೆಂದರೆ ಮೂಗರು ಸಹಜವಾಗಿಯೋ ಸಾಮಾನ್ಯವಾಗಿಯೋ ಕಿವುಡರೂ ಸಹ ಎಂದು ಎಲ್ಲೋ ಓದಿದ್ದ ನೆನಪಾಯಿತು. ಆದರೆ ಸುಭಾಷಿಣಿ ಅಲ್ಪಸ್ವಲ್ಪ ತುಟಿ-ಓದು ಕಲಿತದ್ದಳು. ಅವಳಿಗೆ ಬೆಂಗಳೂರು ಅಂದದ್ದು ಅರ್ಥವಾಗಿ ಮುಖ ಅರಳಿತು. "ನನ್ನದೂ ಬೆಂಗಳೂರೇ." ಎಂದು ಬರೆದು ತೋರಿಸಿದಳು. ಮತ್ತೆ ಒಂದೆರಡು ಇಂತಹವೇ ಔಪಚಾರಿಕ ಮಾತುಗಳಾಗುವಷ್ಟರಲ್ಲಿ ಕಿರಣನ ಮನಸೆಲ್ಲಾ ಕಲಸುಮೇಲೋಗರವಾಗಿ ಏನು ನೋಡುತ್ತಿದ್ದೇನೆ, ಮಾತನಾಡುತ್ತಿದ್ದೇನೆ ಎಂಬ ಪರಿವೆ ಇಲ್ಲದೆ ಸುಭಾಷಿಣಿಯನ್ನು ನಿರ್ಲಕ್ಷಿಸುವಷ್ಟು ಯೋಚನೆಯಲ್ಲಿ ಮುಳುಗಿದ. ಇವಳನ್ನು ಮದುವೆಯಾಗಬಹುದೇ? ಇಲ್ಲ ಎಂದು ಹೇಗೆ ಹೇಳುವುದು? ಒಬ್ಬರಿಗೆ ಜೀವನ ಸಂಗಾತಿಯಾಗಲು ಇಂತಹ ಒಂದು ಆಯ್ಕೆಯೇ ಸರಿಯಾದ ಆಯ್ಕೆ ಎಂದು ತಿಳಿಯುವುದು ಹೇಗೆ? ಮದುವೆಗೆ ಮುಂಚೆ ಒಂದು ಆಯ್ಕೆ ಸರಿಯೇ ಅಲ್ಲವೇ ಎಂಬ ಸ್ಥಿತಿ ಎದುರಾದರೇ ಹೇಗೋ ಆಗುತ್ತೆ, ಆದರೆ ಮದುವೆಯ ನಂತರ ಆ ಪ್ರಶ್ನೆ ಏನಾದರೂ ಎದುರಾದರೆ ಪಶ್ಚಾತ್ತಾಪ ಅಥವಾ ಸ್ವಮರುಕದಿಂದ ಬಿಡುಗಡೆ ಸಾಧ್ಯವೇ? ಅಂತಹ ಸ್ಥಿತಿ ಎದುರಾಗದ ಹಾಗೆ ತಾನೇನು ಮಾಡಬಹುದು? ತನಗೆ ಈಗ ಆಗುತ್ತಿರುವ ಮುಜುಗರದಲ್ಲೇ ತಾನು ಇವಳ ಜೊತೆ ಕಂಫರ್ಟಬಲ್ ಆಗಿ ಜೀವನ ನಡೆಸುವುದು ಕಷ್ಟ ಎನ್ನಿಸುತ್ತಿಲ್ಲವೇ? ಮದುವೆಯ ನಂತರ ಇಬ್ಬರಲ್ಲಿ ಯಾರಿಗಾದರೂ ಕೀಳರಿಮೆಯೋ ಅಥವ ಎಂತಹುದೋ ಕಾಂಪ್ಲೆಕ್ಸ್ ಸುತ್ತಿಕೊಂಡರೆ ಮದುವೆಯಾಗಿ ಸಾಧಿಸುವುದೇನು? ಮಾತು ಎಲ್ಲೆಲ್ಲಿ ಹೋಗಿತ್ತೋ ಅವನಿಗೆ ಏನೂ ಜ್ಞಾಪಕವಿರಲಿಲ್ಲ. ಆದಷ್ಟು ನಯವಾಗಿ "ಮತ್ತೆ ಸಿಗೋಣ" ಎಂದು ಹೇಳಿ ಎದ್ದು ಬಂದಿದ್ದ. ಭವಿಷ್ಯದ ಭಯದಲ್ಲಿ ಒದ್ದೆಯಾದ ಕಣ್ಣು ತನ್ನದೋ ಅವಳದೋ ಸರಿಯಾಗಿ ತಿಳಿಯಲಿಲ್ಲ. ತನ್ನ ದೇಹವೇ ತನಗೆ ಭಾರವಾದ ಅನುಭವವಾಯಿತು. ತಾನು ಹೀಗೆ ಮಧ್ಯದಲ್ಲೇ ಎದ್ದು ಬಂದ್ದುದ್ದು ಏಕೆ? ತಾನು ಗಂಡಾಗಿದ್ದು ಕಾರಣವೋ, ಅಥವಾ ಅವಳಿಗಿದ್ದ ಕೆಲವು ದೈಹಿಕ ಕೊರತೆಗಳು ತನಗಿಲ್ಲದ್ದು ಕಾರಣವೋ? ಇವನಿಗೆ ತಿಳಿಯಲಿಲ್ಲ. ಈಗ ಅದೇ ಸುಭಾಷಿಣಿ ಇಲ್ಲಿ ಏರ್‌ಪೋರ್ಟನಿಂದ ಹೊರಕ್ಕೆ ಹೋಗುತ್ತಿದ್ದಾಗ ಮತ್ತದೇ ಪ್ರಶ್ನೆಗಳು ಸುತ್ತಿಕೊಂಡು ಸರಿತಪ್ಪುಗಳ ಹುಡುಕಾಟದಲ್ಲಿ ರವಿ ಬಂದು ಮಾತನಾಡಿಸಿದಾಗಲೂ ಪರಿವೆಯೇ ಇರಲಿಲ್ಲ.

೬

ಗಾಢವಾದ ಯೋಚನೆಯಲ್ಲಿದ್ದ ಕಿರಣನ ಭುಜಕ್ಕೆ ಮೆಲ್ಲನೆ ಗುದ್ದಿ ರವಿ ನಗೆಯಾಡಿದ, "ಏನಯ್ಯ ದೊರೆ, ಯಾವ ಅಪ್ಸರೆಯ ಧ್ಯಾನದಲ್ಲಿ ಮುಳುಗಿದ್ದೀಯ?" ಕಿರಣ ಎಚ್ಚೆತ್ತು, "ಅಪ್ಸರೆ ಎಲ್ಬಂತೋ, ಆಫೀಸಿನ ಕೆಲಸದ ಗುಂಗಿನಲ್ಲಿದ್ದೆ, ಅಷ್ಟೆ." ಎನ್ನುತ್ತ ಮಾತು ಹೊರಳಿಸಿ, ಮರುಪ್ರಶ್ನೆ ಎಸೆದ, "ಅದ್ಸರಿ, ನೀನು ಯಾಕೋ ಮದುವೆಯಾಗದೆ ಒಂಟಿಯಾಗಿ ಬಂದ್ಬಿಟ್ಟೆ?" ರವಿಯ ಮುಖ ಗಂಭೀರವಾಯಿತು. "ಮದುವೆ ಮಕ್ಕಳಾಟವಲ್ಲ ಕಿರಣ್. ಕಾಲ ಕೂಡಿ ಬಂದಾಗ ಆಗುತ್ತೆ. ಕೇಳಿಲ್ವೆ, ಋಣಾನುಬಂಧೇನ ಪತಿ ಪತ್ನಿ ಸುತಾಲಯಃ ಎಂದು?" "ಸರಿ, ಶುರುವಾಯಿತು ಇವನ ಫಿಲಾಸಫಿ! ಹೊಟ್ಟೆ ತಾಳ ಹಾಕ್ತಾ ಇದೆ, ಊಟ ಮಾಡೋಣ ಬಾ." ಎಂದು ಗೊಣಗುತ್ತಾ ಕಿರಣ ಮನೆಯ ಕಡೆಗೆ ಕಾರು ಚಲಾಯಿಸಿದ. ರವಿಯ ಮನಸ್ಸು ಅಪ್ರಯತ್ನವಾಗಿ ಕೆಲ ವರ್ಷಗಳ ಹಿಂದೆ ಭಾರತದಲ್ಲಿ ನಡೆದ ತನ್ನ ಬದುಕಿನ ಅತಿ ಕಹಿ ಘಟನೆಯನ್ನು ಮೆಲುಕು ಹಾಕತೊಡಗಿತು. ಫಿಲಾಸಫಿಯ ಆಧಾರವಿಲ್ಲದೆ ನಂದಿತ ತನ್ನ ಮನಸ್ಸಿಗೆ ಕೊಟ್ಟ ಪೆಟ್ಟನ್ನು ತಡೆದುಕೊಳ್ಳಲು ಆಗುತ್ತಿತ್ತೆ? ಒಂದು ವರ್ಷ ನಿತ್ಯ ವಿರಸದ ಸಹಬಾಳ್ವೆಯ ನಂತರ ವಿಚ್ಛೇದನ ಬೇಕೆಂದು ಪಟ್ಟು ಹಿಡಿದಾಗ, ತಾನು ಒಪ್ಪಿಗೆ ನೀಡದೆ ವಿಧಿಯೇ ಇರಲಿಲ್ಲವಲ್ಲ? ನಂದಿತಾಳ ರೂಪರಾಶಿಗೆ ಮರುಳಾಗಿ, ಅವಳ ತುಚ್ಛ ವ್ಯಕ್ತಿತ್ವದ ಸುಳಿವೂ ತಿಳಿಯದೆ ದುಡುಕಿಬಿಟ್ಟೆ ಎಂದು ಪದೇ ಪದೇ ಮನಸ್ಸು ಕುಟುಕುತ್ತಿತ್ತು. ದಾಂಪತ್ಯ ಜೀವನದ ಬಗ್ಗೆ ಕಟ್ಟಿದ್ದ ಹೊಂಗನಸೆಲ್ಲ ನುಚ್ಚುನೂರಾಗಿ, ಇನ್ನೆಂದೂ ಈ ಮದುವೆಯೆಂಬ ನರಕದ ಕೂಪಕ್ಕೆ ಬೀಳಲಾರೆ ಎನ್ನಿಸಿತ್ತು. ಹೊಸ ತಾಣ, ಹೊಸ ಗೆಳೆಯರ ಮಧ್ಯೆ, ನಡೆದುದೆಲ್ಲ ಮರೆಯಬಹುದೆಂಬ ಆಸೆಯಲ್ಲಿ ತಾನೆ ಅಮೇರಿಕಕ್ಕೆ ಹಾರಿ ಬಂದಿದ್ದು? ಛೇ! ಈ ದರಿದ್ರ ಮನಸ್ಸಿಗೆ ಕಡಿವಾಣ ಹಾಕದಿದ್ದರೆ ಮತ್ತೆ ಅಲ್ಲೇ ಲಗ್ಗೆ ಹಾಕುತ್ತೆ! ಆ ವೇಳೆಗೆ ಮನೆ ತಲುಪಿಯಾಗಿತ್ತು. ತಲೆ ಕೊಡಹುತ್ತಾ ರವಿ ತನ್ನ ಕಂಪ್ಯೂಟರ್ ಮುಂದೆ ಕುಳಿತ. ಗುಡ್ಡೆಗಟ್ಟಿದ್ದ ಆಫೀಸಿನ ರಾಶಿ ಇ-ಮೇಲುಗಳ ಮಧ್ಯೆ "ಡಾಕ್ಯುಮೆಂಟೇಶನ್ ಟೀಮ್" ಮ್ಯಾನೇಜರ್ ಕಳುಹಿಸಿದ್ದ "ಪ್ಲೀಸ್ ವೆಲ್ಕಮ್ ಅವರ್ ನ್ಯು ಹೈರ್" ಎಂಬ ಶೀರ್ಷಿಕೆ ಹೊತ್ತ ಸುದ್ದಿ ತನ್ನ ಸರದಿಗಾಗಿ ಸಹನೆಯಿಂದ ಕಾಯುತ್ತಿತ್ತು.

೭

ನಿದ್ರಾದೇವಿ ಸ್ವಾಗತಿಸಿ ಕರೆಯುತ್ತಿದ್ದರೂ ರವಿ ಈ-ಪತ್ರವನ್ನು ಓದತೊಡಗಿದ. ನ್ಯೂ ಹೈರ್ ಬಗ್ಗೆ ಅಟ್ಯಾಚ್ ಆಗಿರುವ ಪರ್ಸನಲ್ ಫೈಲ್ ಮೇಲೆ ಕಣ್ಣಾಡಿಸಿದ. ಅದನ್ನು ನೋಡುತ್ತಿದಂತೆಯೆ, ರವಿಯ ಮನಸಿನ್ನಲ್ಲಿ ಆಶ್ಚರ್ಯ, ಅನುಮಾನಗಳು, ಏನೋ ಒಂದು ರೀತಿಯ ಅಸ್ಪಷ್ಟತೆ ಎಲ್ಲವೂ ಒಟ್ಟಿಗೇ ಮೂಡಿತು. ನ್ಯೂ ಹೈರ್ ಒಬ್ಬ ದೇಸೀ ಅಷ್ಟೇ ಅಲ್ಲ, ಬೆಂಗಳೂರ್ ಆಸಾಮಿನೇ ಆಗಿದ್ದು ಅವನ ಹೆಸರು "ನಿಶಾಂತ್ ಜೀ ಧನರಾಜ್" ಎಂದು ಅಲ್ಲಿತ್ತು. ಈ ವ್ಯಕ್ತಿಯೇ ಇರಬಹುದೇ ನಿಶಿಗಂಧ? ಒಂದು ಪಕ್ಷ ಹಾಗೇ ಆಗಿದ್ದರೆ, ಈ "ನಿಶಿಗಂಧ" ಒಂದು ಲಲನಾಮಣಿಯಾಗಿರದೆ ಒಬ್ಬ ಯುವಕನೆ? ಹೀಗೆ ಅನೇಕಾನೇಕ ಪ್ರಶ್ನೆಗಳು ರವಿಯನ್ನು ಕಾಡುತ್ತಿರಲು, ಕಿರಣ್ "ಏ ಗುರೂ, ರಾತ್ರಿ ಹನ್ನೆರಡಾಯಿತಲ್ಲೊ! ಸಾಕು ನಿನ್ನ ಬ್ರೌಸಿಂಗ್! ಮಲಕ್ಕೋ ಸುಮ್ನೆ." ಎಂದನು. ರವಿಯು ಆಕಳಿಸುತ್ತಲೇ "ನಿಶಿಗಂಧಳ ಬಗ್ಗೆ ಸ್ವಲ್ಪ ಕ್ಲೂ ಸಿಕ್ಕಿದೆ ಗುರು ನನಗೆ" ಎಂದ. ಉತ್ಸಾಹದಿಂದ ಕಿರಣ್ ಕೇಳಿದ "ನಿನ್ನ ಕ್ಲೂ ನಿಶಿಗಂಧಳ ಮ್ಯಾರಿಟಲ್ ಸ್ಟೇಟಸ್ ಬಗ್ಗೆ ಏನಾದರೂ ಹೇಳುತ್ತೇನೋ? ಮೈ ಡಿಯರ್". ರವಿಯಾದರೋ, "ನಿಶಿಗಂಧ ಒಂದು ಯುವತಿಯಲ್ಲದಿರಲೂಬಹುದು" ಎಂದು ಮನಸಿನ್ನಲ್ಲೆ ನಗುತ್ತ ಸುಮ್ಮನಿದ್ದನು. ಕಿರಣ್ "ಈ ಮೌನವಾ ತಾಳೆನು..." ಎಂದು ಹಾಡತೊಡಗಿದ.

೮

ರವಿ ಕಿರಣನಿಗೆ "ಮಹರಾಯ, ಸಾಕು ಮಾಡೋ ನಿನ್ನ ಗಾರ್ದಭ ರಾಗವನ್ನು. ಪಕ್ಕದಲ್ಲಿರೋ ಅಪಾರ್ಟ್ಮೆಂಟಿನವರು ಪೋಲೀಸರಿಗೆ ಫೋನು ಮಾಡಿಬಿಡುತ್ತಾರೆ ನೋಡು!" ಎಂದ. ಆಗ ಕಿರಣ್ "ಸರಿ. ನಾನು ಹೋಗಿ ಮಲಗುತ್ತೇನೆ" ಎಂದು ಎದ್ದು ತನ್ನ ರೂಮಿಗೆ ಹೋಗಿ ಹಾಸಿಗೆಯ ಮೇಲೆ ಉರುಳಿದ. ಇವತ್ತು ಯಾಕೋ ಅವನ ಧ್ಯಾನದಲ್ಲಿ ಸುಭಾಳೇ ಬರುತ್ತಿದ್ದಳು. ಅವಳ ಸುಂದರ ಸೌಮ್ಯ ರೂಪ, ಅವಳ ನಗೆ, ಅವಳ ಮೈಮಾಟ, ಅವನ ಕಣ್ಣ ಮುಂದೆ ಕಟ್ಟಿದಂತಿತ್ತು. ಅವಳು ಮೂಕಿಯಾದರೇನು, ಒಳ್ಳೆಯ ಜೀವನ ಸಂಗಾತಿಯಾಗಲಾರಳೇ? ಗಂಡಂದಿರ ಮೇಲೆಲ್ಲ ಎಗರಾಡುತ್ತಿದ್ದ ಅನೇಕ ಗೆಳೆಯರ ಗಯ್ಯಾಳಿ ಹೆಂಡತಿಯರಿಗೆ ಹೋಲಿಸಿದರೆ ಅವಳ ಮೂಕತನ ಒಂದು ಅಡ್ವಾಂಟೇಜೇ! ಹಾಗೆಯೇ ಮೂಕಿಗೊಂದು ಜೀವನ ಮಾಡಿಕೊಟ್ಟ ಪುಣ್ಯ ತನಗೆ ದೊರೆಯುವುದಲ್ಲವೇ? ಆ ಕೃತಜ್ಞತಾ ಭಾವದಿಂದ ಅವಳು ಜೀವನದುದ್ದಕ್ಕೂ ತನ್ನನ್ನು ಇನ್ನೂ ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುವಳಲ್ಲವೇ? ಒಳ್ಳೆಯ ಸ್ಪೀಚ್ ತೆರಪಿಸ್ಟ್‌ಗೆ ತೋರಿಸಿ ಅವಳ ಈ ಕೊರತೆಯನ್ನು ಮುಂದೆ ಗುಣಪಡಿಸಲೂ ಪ್ರಯತ್ನ ಪಡಬಹುದು. ಹೀಗೆ ಏನೇನೋ ಯೋಚನೆಗಳ ಲಹರಿಯಲ್ಲಿ ಸಿಲುಕಿ ಬೆಳಿಗ್ಗೆಯೆಲ್ಲಾ "ನಿಶಿಗಂಧಾ ನಿಶಿಗಂಧಾ" ಎನ್ನುತ್ತಿದ್ದವನು ಈಗ "ಸುಭಾ ಸುಭಾ" ಎಂದುಕೊಳ್ಳುತ್ತಾ ಪಕ್ಕದಲ್ಲಿದ್ದ ಮೆತ್ತನೆಯ ದಿಂಬನ್ನು ತಬ್ಬಿಕೊಂಡು ನಿಧಾನವಾಗಿ ನಿದ್ರಾದೇವಿಯ ಆಲಿಂಗನದಲ್ಲಿ ಕರಗಿಹೋದ.

೯

ಬಾಗಿಲಲ್ಲಿ ನಿಂತು ಡೋರ್ ಬೆಲ್ ಒತ್ತಿ ಒತ್ತಿ ಬೇಸತ್ತ ಅನಂತ್ ಕೊನೆಗೆ ಫೋನ್ ಮಾಡಿಯಾದರೂ ಮಲಗಿದ್ದ ಆ ಕುಂಭಕರ್ಣರನ್ನು ಎಬ್ಬಿಸಲು ಸಾಧ್ಯಗಬಹುದೇನೊ ಎಂದು ಕಾಲ್ ಮಾಡಿದ. ಅವನ ಮತ್ತೊಂದು ಕೈ ಡೋರ್ ಬೆಲ್ಲನ್ನೂ ಸಹ ಒತ್ತುತ್ತಿತ್ತು. ಕರೆ ಘಂಟೆಗಳ ಈ ಧಾಳಿಯಿಂದ ಬೆಚ್ಚಿ ಎಚ್ಚೆತ್ತ ಕಿರಣ್‌ಗೆ ಸದ್ದು ಎಲ್ಲಿಂದ ಬರುತ್ತಿದೆ ಎಂದು ತಿಳಿಯುವುದಕ್ಕೇ ಸ್ವಲ್ಪ ಕಾಲ ಹಿಡಿಯಿತು. ದಡಬಡಿಸಿಕೊಂಡು ಬಾಗಿಲು ತೆಗೆದಾಗ ಹೊರಗೆ ನಿಂತಿದ್ದ ಅನಂತನನ್ನು ಕಂಡು "ಯಾಕೋ ಹೀಗೆ ಹೊಡ್ಕೋತಿದ್ದೀಯ? ಬೆಳಿಗ್ಗೆ ಎದ್ದು ಬೇರೆ ಕೆಲ್ಸ ಇಲ್ವ?"

"ಬೆಳಿಗ್ಗೆ ಅಂತೆ, ಘಂಟೆ ಹನ್ನೆರಡಾಗ್ತಿದೆ. ರವಿಗೇನೋ ಜೆಟ್ ಲ್ಯಾಗು. ನಿನಗೇನೊ ಕೇಡು?" ಎಂದ ಅನಂತ. ಉತ್ತರವಾಗಿ ಕಿರಣ್ ನುಡಿದ "ಅದಿರ್ಲಿ, ನೀನೇನು ಇಷ್ಟು ಬೇಗ ಒಳ್ಳೇ ವರಪೂಜೆ ಗಂಡು ತರ ಡ್ರೆಸ್ ಮಾಡ್ಕೊಂಡು ನಿಂತಿದ್ದೀಯಲ್ಲ?" ಅನಂತ ಮರುನುಡಿದ "ಮೊದಲು ರವೀನ ಎಬ್ಬಿಸೋಣ. ಅಮೇಲ್ ಹೇಳ್ತೀನಿ." ಕಿರಣ್ ರೇಗಿದ "ನೀನ್ ಮಾಡ್ತಿರೋ ಗಲಾಟೇಲಿ ರವಿ ಯಾಕೆ, ಸತ್ತು ಸ್ವರ್ಗದಲ್ಲಿರೋ ನಮ್ ತಾತಾನೂ ಎದ್ದು ಬರ್ತಾರೆ." ಆ ಗಲಾಟೆಯನ್ನು ಕೇಳಿ ಮೈಮುರಿಯುತ್ತಾ ಹೊರಗೆ ಬಂದ ರವಿಯನ್ನು ಅನಂತ ಕೇಳಿದ. "ಅದೆಲ್ಲ ಇರ್ಲಿ. ನನ್ನ ಸೂಟ್ ಕೇಸ್ ಎಲ್ಲೋ?" ಅನಂತನು ರವಿಗೆ ಸಹಾಯವಾಗಲೆಂದು ತನ್ನ ಸೂಟ್‌ಕೇಸನ್ನು ಎರವಲು ನೀಡಿದ್ದನು. ಅದೇ ಸೂಟ್‌ಕೇಸ್ ಈಗ ಕಳುವಾಗಿತ್ತು. ರವಿ ನುಡಿದ "ಸಾರಿ ಅನಂತ್. ನಿನ್ನ ಸೂಟ್‌ಕೇಸ್ ನನ್ನ ಹತ್ತಿರ ಇಲ್ಲ." ಅನಂತ್ ಉತ್ತರಿಸಿದ "ಡೋಂಟ್ ವರೀ. ಆಸ್ ಏ ಮ್ಯಾಟರ್ ಆಫ್ ಫ್ಯಾಕ್ಟ್, ಲಗೇಜ್ ಎಕ್ಸ್ಚೇಂಜ್ ಮಾಡಿದ್ದಕ್ಕೆ ತುಂಬ ಥ್ಯಾಂಕ್ಸ್." ನಗುತ್ತಾ ಹೇಳಿದ ಅನಂತನಿಗೆ ಹೇಗೆ ಗೊತ್ತಾಯಿತು ಎಂದು ಅರ್ಥವಾಗದೆ ಕಿರಣ್, ರವಿ ಒಬ್ಬರ ಮುಖ ಒಬ್ಬರು ನೋಡಿದರು. "ಅದಕ್ಕಿಂತ ಹೆಚ್ಚಾಗಿ, ಲಗ್ಗೇಜ್ ಮೇಲಿದ್ದ ನನ್ನ ಹೆಸರು ವಿಳಾಸವನ್ನು ಕಿತ್ತು ಹಾಕ್ದೆ ಹಾಗೆ ಇಟ್ಟಿದ್ದಕ್ಕೆ ಇನ್ನೂ ಥ್ಯಾಂಕ್ಸು." ಗೆಳೆಯರ ಬಗೆ ನೋಡಿ ಉತ್ತೇಜಿತನಾದ ಅನಂತ ನಾಟಕ ಮುಂದುವರೆಸಿದ.

ಪರಿಸ್ಥಿತಿ ಅರ್ಥವಾಗಿ "ಓ, ನಿಶೀಗಂಧ ಕಾಂಟಾಕ್ಟ್ ಮಾಡಿದ್ಲೇನೊ?" ಎಂದ ಕಿರಣ್. ಅನಂತ ಹೇಳಿದ "ಹೌದು. ಸೂಟ್‌ಕೇಸ್ ಮೇಲಿದ್ದ ನನ್ನ ವಿಳಾಸ ನೋಡಿ ನನ್ನನ್ನ ಕಾಂಟ್ಯಾಕ್ಟ್ ಮಾಡಿದಳು." ತನ್ನ ಸಾಮಾನು ಕಳೆದು ಹೋಗಲಿಲ್ಲವಲ್ಲಾ ಎಂಬ ಸಂಭ್ರಮದಿಂದ ರವಿ, "ಬೆಳಗೆದ್ದು ನಿನ್ನ ಗಲಾಟೆ ಕೇಳಿ ಕೊಂದು ಬಿಡೋ ಅಷ್ಟು ಕೋಪ ಬಂದಿತ್ತು, ಒಳ್ಳೇ ನ್ಯೂಸ್ ತಂದು ಬಚಾವ್ ಆದೆ. ಅವ್ಳ ಫೋನ್ ನಂಬರ್ ಕೊಡು ಮಾರಾಯ. ನನ್ನ ಹೊಸ ಸೂಟ್ ನಾಳೆ ಕೆಲಸಕ್ಕೆ ಹಾಕ್ಕೊಂಡು ಹೋಗ್ಬೇಕು ನಾನು."

"ಅಲ್ಲ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿರುವಾಗ, ಅದನ್ನ ನಿನ್ನ ಕೈಗೆ ಕೊಡೋಕೆ ನಾನೇನು ಪೆದ್ದನೇನೊ? " ವಾಚ್ ನೋಡಿಕೊಂಡು, "ಅವಳ ಸೂಟ್ ಕೇಸ್ ಕೊಡು, ಇನ್ನು ಹತ್ತು ನಿಮಿಷಕ್ಕೆ ಅವಳನ್ನ ಮೀಟ್ ಮಾಡ್ಬೇಕು ನಾನು. ಅಷ್ಟಕ್ಕೂ ನನ್ನ ಹತ್ತಿರ ಅವಳ ಫೋನ್ ನಂಬರ್ ಇಲ್ಲ. "

"ಮತ್ತೆ ಹೇಗ್ ಕಾಂಟಾಕ್ಟ್ ಮಾಡಿದ್ಲು? " ಕೇಳಿದ ರವಿ.

"ಲಗೇಜ್ ಟ್ಯಾಗ್ನಲ್ಲಿ ಈಮೈಲ್ ಐಡೀನೂ ಇತ್ತು. ಅಡ್ರೆಸ್ ಇದ್ರೂನೂ ಮನೇಗ್ ಬರೋಕೆ ಒಪ್ಪಲಿಲ್ಲ. ನಾನೇ ತೊಗೊಂಡು ಬರ್ತೀನಿ ಅಂತ ಮೈಲ್ ಕಳಿಸ್ದೆ, ಒಪ್ಪಲಿಲ್ಲ. ಪಬ್ಲಿಕ್ ಪ್ಲೇಸ್ನಲ್ಲಿ ಮೀಟ್ ಮಾಡೋಣಾ ಅಂದ್ಲು. ಅದಕ್ಕೆ ವೆಸ್ಟ್ ಗೇಟ್ ಮಾಲಿನ ಸ್ಟಾರ್ ಬಕ್ಸ್ನಲ್ಲಿ ಮೀಟ್ ಮಾಡ್ತಿದ್ದೀನಿ. ಒಳ್ಳೇ ಮೂವಿ ತರ ಸೆಟಪ್ಪು ಕಣಮ್ಮಾ, ಅವಳು ಕೆಂಪು ಬಟ್ಟೆ ಹಾಕಿಕೊಂಡಿರ್ತಾಳಂತೆ, ನಾನು ಫ್ರೆಂಚ್ ಬ್ಲೂ ಡ್ರೆಸ್ ಷರ್ಟ್ ಅಂತ ಹೇಳಿದ್ದೀನಿ. ಇದೇ ತಾನೆ ಸೂಟ್ ಕೇಸು?" ಅಲ್ಲಿಯೇ ಇದ್ದ ಸೂಟ್ ಕೇಸನ್ನು ನೋಡಿ ಕೇಳಿದ.

"ಅವಳು.. ಅವಳೂ ಅಂತ ಹೊಡ್ಕೋತಿದ್ದೀಯಲ್ಲ, ನಿನಗೆ ಹೇಗೊ ಗೊತ್ತೊ ಅವಳು ಹುಡುಗೀ ಅಂತ? " ಎಂದ ರವಿ ತನ್ನ ಹಿಂದಿನ ರಾತ್ರಿಯ ಈಮೇಲ್ ನೆನೆದು.

ಅನಂತ ಹೇಳಿದ "ನನಗೂ ಮೊದಲು ಸ್ವಲ್ಪ ಅನುಮಾನ ಇತ್ತು, ಈ ಈಮೇಲ್ ಐಡಿ ಗಳನ್ನೆಲ್ಲ ನಂಬೋಕೆ ಆಗೋಲ್ಲಾ ಅಂತ. ಆದ್ರೆ ಕೆಂಪು ಬಟ್ಟೆ ಅಂದ ತಕ್ಷಣ, ಹುಡುಗೀ ಅಂತ ಕನ್‌ಫರ್ಮ್ ಆಗಿಹೋಯ್ತು." "ಡ್ರೆಸ್ ಅಂದ್ಲಾ, ಇಲ್ಲ ಸುಮ್ನೆ ಬಟ್ಟೆ ಅಂದ್ಲಾ?" ಯಾವಾಗಲೂ ಅನುಮಾನ ಪ್ರಕೃತಿಯ ಕಿರಣನ ಪ್ರಶ್ನೆಗೆ ಉತ್ತರಿಸದೆ, ಅನಂತ ಸೂಟ್ ಕೇಸನ್ನು ಕೈಗೆ ತೆಗೆದುಕೊಂಡ. ಒಡನೆಯೇ ರವಿ, "ಲೋ ಅವಳು ಯಾರಿರಬಹುದು, ಹೇಗಿರಬಹುದೂ ಅಂತ ಊಹಿಸೀ, ಊಹಿಸಿ ರಾತ್ರಿಯೆಲ್ಲ ಜಾಗರಣೆ ಮಾಡಿದ್ದೀನಿ, ನಾನು ಬಂದು ದೂರದಿಂದ ನೋಡಿದ್ರೆ ನಿಂದೇನು ಅಬ್ಜೆಕ್ಷನ್ ಇಲ್ಲ ತಾನೆ? "

"ಸ್ಟಾರ್ ಬಕ್ಸ್‌ಗೆ ಹೋಗೋಕೆ ಅವನನ್ನೇನೊ ಕೇಳೋದು? ನಡಿ ನಾನೂ ಬರ್ತೀನಿ" ಎಂದ ಕಿರಣ್, ಅಲ್ಲೇ ಇದ್ದ ಕನ್ನಡಿಯಲ್ಲಿ ಮುಖ ಹೇಗಿದೆ ಎಂದು ನೋಡಿಕೊಂಡ. ಅವನು ಮತ್ತು ರವಿ ಆತುರಾತುರವಾಗಿ ಅಲ್ಲೇ ತಗುಲುಹಾಕಿದ್ದ ಷರ್ಟ್ ಹಾಕಿಕೊಂಡು ಹೊರಡಲನುವಾದರು,

"ನೀವಿಬ್ರು ಬೇರೆ ಕಾರಲ್ಲಿ ಬನ್ನಿ. ಅಲ್ಲಿ ಬಂದು ಏನಾದ್ರು ತರಲೆ ಮಾಡಿದ್ರೆ ನಾನು ಸುಮ್ನೆ ಇರೊಲ್ಲ" ಒಲ್ಲದ ಮನಸ್ಸಿನಿಂದ ಒಪ್ಪಿಗೆ ಕೊಟ್ಟ ಅನಂತ್ ಮನೆಯ ಮುಂದೆ ನಿಲ್ಲಿಸಿದ್ದ ಕಾರಿನತ್ತ ನಡೆದ, ಸಧ್ಯ ಒಪ್ಪಿದನಲ್ಲ ಮಹರಾಯ ಎಂದುಕೊಡು ಅವನ ಹಿಂದೆ ರವಿಯೂ, ಕಿರಣನೂ ಹೊರಟರು. ಮೂರು ಯುವಕರ ಮನಸ್ಸೂ ಮತ್ತೆ ಹಗಲುಗನಸಿನ ಲೋಕದಲ್ಲಿ ಮುಳುಗುತ್ತಿರುವಂತೆ, ಕಾರುಗಳು ವೆಸ್ಟ್ ಗೇಟ್ ಮಾಲಿನತ್ತ ಚಲಿಸಲಾರಂಭಿಸಿದವು.

## ೧೦

ಗಿಜಿಗಿಜಿಗುಡುತ್ತಿದ್ದ ಸ್ಟಾರ್‌ಬಕ್ಸ್‌ನ ಒಳಗೆ ಕಾಲಿಟ್ಟ ಮೂವರ ಕಣ್ಣುಗಳೂ ಕಾತುರತೆಯಿಂದ ಕೆಂಪು ಡ್ರೆಸ್ಸನ್ನು ಅರಸತೊಡಗಿದವು. ಕೆಫೆಯ ಅಂಗುಲ ಅಂಗುಲವನ್ನು ಶೋಧಿಸಿದರೂ ಕೆಂಪು ಬಣ್ಣದ ಸುಳಿವು ಕಾಣದಿದ್ದಾಗ ನಿರಾಶೆಯು ಕಾತುರತೆಯ ಜಾಗವನ್ನು ತುಂಬತೊಡಗಿತು. ಅನಂತ ಸ್ಟಾರ್‌ಬಕ್ಸ್‌ನ ಹೊರಗೊಮ್ಮೆ ಹೋಗಿ ಸುತ್ತ ಮುತ್ತ ಕಣ್ಣು ಹಾಯಿಸಿ, ನಿಟ್ಟುಸಿರು ಬಿಡುತ್ತಾ, ಗೆಳೆಯರೆಡೆಗೆ ಪೆಚ್ಚು ನಗೆ ಬೀರಿದ. ಕಿರಣ ಕಾಫಿಗೆ ಸಕ್ಕರೆ ಬೆರೆಸಿಕೊಳ್ಳುತ್ತಾ, "ಈಮೇಲ್‌ನಲ್ಲಿ ನಿನ್ನ್ ಫೋಟೋ-ಗೀಟೋ ಕಳಿಸಿರ್ಲಿಲ್ಲಾ ತಾನೆ? ನಿನ್ ಮುಖ ನೋಡಿ ಅವಳು ಮನಸ್ಸು ಬದಲಾಯ್ಸಿದ್ಲೋ ಏನೋ!" ಎಂದು ಅನಂತನನ್ನು ಛೇಡಿಸಿದ. ಈ ಬಾರಿ ಅನಂತ ನಗಲಿಲ್ಲ. ಸುಮಾರು ಇಪ್ಪತ್ತು ನಿಮಿಷದಿಂದ ಹರಟೆ ಹೊಡೆಯುತ್ತಾ ಕುಳಿತಿದ್ದರೂ, ಮೂವರ ಗಮನವು ಬಾಗಿಲಿನ ಕಡೆಗೇ ಇತ್ತು. ಕೊನೆಗೆ ರವಿ ಆಕಳಿಸಿ, ಮೈಮುರಿಯುತ್ತಾ ನಿಂತು, "ನೀನು ಹೀಗೇ ಕಾಯ್ತಾ ಇರು ಗುರೂ, ನಾನೂ, ಕಿರಣ ಒಂದು ರೌಂಡ್ ಹೋಗ್ಬರ್ತೀವಿ" ಎಂದು ಕಿರಣನನ್ನು ಮಾಲ್‌ನ ಒಳಗೆ ಎಳೆದುಕೊಂಡು ಹೊರಟ. ಕೆಫೆಯ ಅಂಗಳದಲ್ಲಿ ಶತಪಥ ತಿರುಗುತ್ತಿದ್ದ ಅನಂತನ ಎಳೆಗೋಪ ಅಗಲೇ ಬಲಿಯತೊಡಗಿತ್ತು. "ಅನಂತ್? ಸಾರಿ, ತುಂಬಾ ಕಾಯಿಸಿದ ಹಾಗಾಯ್ತು" ಎಂಬ ಗೊಗ್ಗರು ದನಿ ಕಿವಿಗೆ ಅತೀ ಸಮೀಪವಾಗಿ ಕೇಳಿದಾಗ, ಬೆಚ್ಚಿ ಹಿಂತಿರುಗಿ ನೋಡಿದ. ಸಾಂತಾಕ್ಲಾಸ್! ಮಿರಿಮಿರಿ ಮಿಂಚುತ್ತಿದ್ದ ಕೆಂಪು ರೇಶಿಮೆಯ ದೊಗಲೆ ಷರಟು, ಪೈಜಾಮ. ದೇಹಕ್ಕೆ ತೀರಾ ದೊಡ್ಡದೇ ಅನ್ನಿಸುವಂತಿದ್ದ ಹೊಟ್ಟೆಯನ್ನು ಬಿಗಿದು ಕಟ್ಟಿದ್ದ ಬೆಲ್ಟು, ತಲೆಯ ಮೇಲಿನ ಕೆಂಪು ಉಣ್ಣೆಯ ಟೋಪಿ, ಬಿಳಿ ಹೊಳಪುಗೂದಲಿನ ಉದ್ದನೆಯ ಗಡ್ಡ. "ನನ್ನ ಹೆಸರು ಗಂಗಾಧರ್, ಕಾದಿದ್ದಕ್ಕೆ ಥ್ಯಾಂಕ್ಸ್" ಎಂದು ಕೈಚಾಚಿದ ಮಧ್ಯವಯಸ್ಸಿನ ವ್ಯಕ್ತಿಯನ್ನು ನೋಡಿದಾಗ ಅನಂತನ ಅಳಿದುಳಿದ ಉತ್ಸಾಹವೂ ಜರ್ರನೆ ಇಳಿಯಿತು. "ಕಳೆದ ಹನ್ನೊಂದು ವರ್ಷಗಳಿಂದ ಹೀಗೇ ಕ್ರಿಸ್‌ಮಸ್ ಟೈಮ್‌ನಲ್ಲಿ ವೇಷ ಹಾಕ್ತಾ ಇದೀನಿ. ಮಾಲ್‌ಗೆ ಬರೋ ಮಕ್ಕಳು ನನ್ನ್ ಜೊತೆ ಫೋಟೋ ತೆಗೆಸ್ಕೋತಾರೆ. ಅವು ಖುಷಿಪಡೋದನ್ನ ನೋಡಿದ್ರೆ ಏನೋ ನೆಮ್ಮದಿ ಅನ್ನಿಸುತ್ತೆ" ಎಂದು ಅಂಟಿಸಿದ್ದ ಗಡ್ಡವನ್ನು ತೆಗೆಯುತ್ತಾ ಹೇಳಿದಾಗ ಅನಂತ ಅವನ ಕಡೆಗೆ ನೋಡದೇ ನಿರಾಸಕ್ತಿಯಿಂದ ಹೂಂಗುಟ್ಟಿದ. ಆಗ..., ಇದು ನಡೆದದ್ದು ಆಗ. ಅನಂತನಿಗೆ ಅದ್ಭುತ ಲಾವಣ್ಯವತಿ ಅನ್ನಿಸಿದ ಹುಡುಗಿಯೊಬ್ಬಳು ಎರಡೂ ಕೈಗಳಲ್ಲಿ ಷಾಪಿಂಗ್ ಬ್ಯಾಗುಗಳನ್ನು ಹಿಡಿದುಕೊಂಡು, ಗಂಗಾಧರನ ಪಕ್ಕದಲ್ಲಿ ಬಂದು ನಿಂತದ್ದು!... ಗಂಗಾಧರ್, "ನನ್ನ ಮಗಳು" ಎಂದು ಪರಿಚಯಿಸಿದಾಗ, ಅನಂತನ ಉತ್ಸಾಹದ ಥರ್ಮಾಮೀಟರ್ ರೊಯ್ಯನೆ ಏರಿ, ಹಿಂದಿರದಿದ್ದ ಹುರುಪಿನಿಂದ "ಹಾಯ್, ಐ ಆಮ್ ಅನಂತ್" ಎಂದ. ಅವಳು ನಸುನಕ್ಕಳಷ್ಟೇ. ಹೆಸರೇನೂ ಹೇಳಲಿಲ್ಲ. ಅನಂತನಿಗೆ ಈಗ ಗಂಗಾಧರ್ ಆಡುವ ಮಾತುಗಳಲ್ಲಿ ಇದ್ದಕ್ಕಿದ್ದಂತೆ ಆಸಕ್ತಿ ಬಂದಿತ್ತು. ಅಂಗಳದ ಆ ಕೊನೆಯಲ್ಲಿ ರವಿಯೊಡನೆ ಹಿಂತಿರುಗುತ್ತಿದ್ದ ಕಿರಣನಿಗೆ ಆ ಹುಡುಗಿಯ ಗುರುತು ತಕ್ಷಣ ಸಿಕ್ಕಿತು. "ಜಾಕ್‌ಪಾಟ್, ಗುರೂ!" ಎಂದು ರವಿಯ ಕಿವಿಯಲ್ಲಿ ಕಿರುಚಿದ.

## ೧೧

ಅನಂತ್ (ಕಿರಣ, ರವಿ ಹತ್ತಿರವಾಗುತ್ತಿರುವುದನ್ನು ನೋಡಿ, ಇನ್ನು ಈ ಚೆಲುವೆಯನ್ನು ನನ್ನಿಂದ ಅವರ ವಶಕ್ಕೆ ಕದ್ದಾರು ಎಂದು ಭಾವಿಸಿ) ನಗು ಮುಖದಿಂದ ಸಂತಾಕ್ಲಾಸ್ ಮತ್ತು ಅವನ ಮಗಳ ಕೈಕುಲುಕಿ "ಮತ್ತೆ ಸಿಗೋಣ." ಎಂದು ಅವಸರದಿಂದ ಹೇಳಿ ಅವರನ್ನು ಕಳುಹಿಸಿಕೊಟ್ಟು ಕಿರಣ, ರವಿಯನ್ನು ಸೇರಿದ. "ಏನೊ ಗುರು, ನನ್ನ ಸೂಟ್‌ಕೇಸ್ ಬದಲಾವಣೆಯ ನೆಪದಿಂದಲೆ ಅದೃಷ್ಟವನ್ನು ದಕ್ಕಿಸಿಕೊಂಡು ಜಾಕ್ಪಾಟ್ ಹೊಡೆದೆ." ಎಂದು ರವಿ ಅನಂತನನ್ನು ಚೇಡಿಸಿದ. ಅನಂತ ಕೈಗೆ ಬಂದಿದ್ದು ಬಾಯಿಗೆ ಬರದೇ ಹೋದರೆ ಎಂಬ ಆತಂಕದಿಂದ ರವಿಯೊಡನೆ ಮಾತಾಡದೆ "ತಗೊ ಸೂಟ್ಕೇಸು. ಸಾಮಾನು ಖಾಲಿ ಮಾಡಿ ಬೇಗ ಹಿಂದಿರುಗಿಸು." ಎಂದು ಹೇಳಿ ಹೊರಟುಹೋದನು. ಕಿರಣ ಮತ್ತು ರವಿ ತಮ್ಮ ಕಾರಿನಲ್ಲಿ ಹೊರಟರು. ನಂಗ್ಯಾಕೊ ನಿದ್ದೆ ಬರುತ್ತಿದೆ ಎನ್ನುತ್ತ ಕಿರಣ ಹಗಲುಗನಸು ಕಾಣತೊಡಗಿದ. ರವಿಯ ಮನಸ್ಸಿನಲ್ಲಿ "Its a small world ಎನ್ನುವುದು ನಿಜ, ರಾತ್ರಿಯಷ್ಟೆ ಶುರುವಾಗಿದ್ದ ನಿಶಿಗಂಧಳ ಪತ್ತೆ ಹಚ್ಚುವ ದಾರಿಯಲ್ಲಿದ್ದ ಚ್ಯಾಪ್ಟರ್ ಕ್ಲೋಸ್ ಆಗಿ ಮುಗಿದೇ ಹೋಯಿತು. ಅದಿರಲಿ, ಸಂತಾಕ್ಲಾಸ್ ಪಕ್ಕದಲ್ಲಿದ್ದ ಮುಗುಳ್ನಗೆಯ ಲಾವಣ್ಯವತಿಯಾದರೋ ಅಂದು ನಾನು ಏರ್‌ಪೋರ್ಟ್ನಲ್ಲಿ ನೋಡಿದ ಮುಗ್ಧ ಮೋಹಕ ಮಾನಿನಿ ತರಾನೆ ಕಾಣಿಸುತ್ತಿದ್ದಾಳಲ್ಲ, ಇವಳೇ ಅವಳಾ? ಅವಳೇ ಇವಳಾ? ಅಂದು ಮೂಕಿ ಇರಬೇಕೆಂದು ಕೊಂಡಿದ್ದೆ. ಇಂದು ಅದನ್ನು ಸ್ಪಷ್ಟೀಕರಿಸುವ ಅವಕಾಶ ದೊರೆತಿದ್ದರೂ ಈ ಮೂರನೆಯವನಿಂದ ಅದು ಮೂರುನಾಮವಾಯಿತೆ?" ಅಷ್ಟರಲ್ಲಿ ಹಿಂದಿನ ಕಾರಿನಲ್ಲಿದ್ದ ಮಹಿಳೆ ಹಾಂಕ್ ಮಾಡುತ್ತಿದ್ದುದು ರವಿಯ ಕಿವಿಯನ್ನು ಸೀಳಿ ಮೆದುಳಿನ ಮೂಲಕ ಕೈಗೆ ಕಾಲ್ಗೆ ಬುದ್ಧಿ ಹೇಳಿತು ಮತ್ತು ಚಲಿಸಿ ಚಾಲಕರೆ ಎಂದಂತಾಗಿ ಕಾರ್ ಚಲಾಯಿಸಿದ.

## ೧೨

ನಂತರ ಒಂದು ವಾರ ಮೂವರು ಗೆಳೆಯರಲ್ಲೂ ಒಂದೇ ಚರ್ಚೆ. "ಏರ್ ಪೋರ್ಟಿನಲ್ಲಿ ನೋಡಿದ ಸುಂದರಿ ಮೂಕಿ, ಗಂಗಾಧರನ ಸುಂದರಿ ಮಗಳೂ ಮೂಕಿಯೇ? ಇನ್ನೊಮ್ಮೆ ಏನಾದರೂ ನೆಪಮಾಡಿಕೊಂಡು ಗಂಗಾಧರನನ್ನು ಸಂಪರ್ಕಿಸಬೇಕು." ಎಂದು ಅನಂತ್ ಹೇಳಿದಾಗ, ಕಿರಣನಿಗೆ ಸುಮ್ಮನಿರಲಾಗಲಿಲ್ಲ. ಸುಭಾಷಿಣಿಯ ಬಗ್ಗೆ ಅವನ ಮನಸ್ಸಿನಲ್ಲಿ ಹುದುಗಿದ್ದ ಎಲ್ಲ ಭಾವನೆಗಳೂ ಹೊರಬಂದು ರವಿ, ಅನಂತ ಇಬ್ಬರಿಗೂ ಎಲ್ಲವನ್ನೂ ಹೇಳಿಬಿಟ್ಟ. "ಏರ್ ಪೋರ್ಟಿನಲ್ಲಿ ನೋಡಿದ ಸುಂದರಿ ಅವಳೇ. ಅವಳು ಮೂಕಿ ಎನ್ನುವ ಸಂಗತಿಯನ್ನು ಎದುರಿಸುವ ಧೈರ್ಯವಿಲ್ಲದೇ ಹಿಂಜರಿದೆ. ಈ ಗಂಗಾಧರನ ಮಗಳ ಬೆನ್ನು ಹತ್ತಿ ಹೋಗುವ ಮುನ್ನ ನೀವಿಬ್ಬರೂ ಸ್ವಲ್ಪ ಯೋಚನೆ ಮಾಡಿ. ಸುಭಾಷಿಣಿಯೊಂದಿಗೆ ಸ್ನೇಹವನ್ನೂ ಮುಂದುವರೆಸದೇ ಪೂರ್ಣ ಸಂಪರ್ಕವನ್ನೇ ಕಡಿದುಬಿಟ್ಟೆ ಎನ್ನುವ ಅಪರಾಧ ಪ್ರಜ್ಞೆ ಈಗಲೂ ನನ್ನನ್ನು ಬಾಧಿಸುತ್ತದೆ." ಎಂದ ಕಿರಣನ ಮಾತುಗಳನ್ನು ಕೇಳಿ ರವಿಯೂ ಬಾಯಿಬಿಟ್ಟ. "ಸುಂದರಿಯೊಬ್ಬಳ ಬೆನ್ನು ಹತ್ತಿ ಒಂದು ಬಾರಿ ಕೈಸುಟ್ಟು ಕೊಂಡಿದ್ದೇನೆ. ಹೊರನೋಟಕ್ಕೆ ನಿಮ್ಮ ಜೊತೆ ಪಡ್ಡೆಹುಡುಗನ ಹಾಗೆ ನಡೆದುಕೊಂಡರೂ ಒಳಗಿನ ಗಾಯ ಮಾಗಿಲ್ಲ. ಅದಕ್ಕೇ ಮದುವೆಯನ್ನೂ ಮಾಡಿಕೊಳ್ಳದೇ ಇಂಡಿಯಾದಿಂದ ಓಡಿ ವಾಪಸ್ ಬಂದಿದ್ದು. ಅನಂತ್, ನಮ್ಮಿಬ್ಬರ ಅನುಭವಗಳನ್ನು ಕೇಳಿದ ಮೇಲೂ ನಿನಗೆ ಗಂಗಾಧರನನ್ನು ಸಂಪರ್ಕಿಸುವ ಆಸೆ ಇದ್ದರೆ ನಿನ್ನಿಷ್ಟ."

## ೧೩

ಅವರಿಬ್ಬರ ಮಾತನ್ನು ಆಸಕ್ತಿಯಿಂದ ಕೇಳುತ್ತಿದ್ದ ಅನಂತ ನಕ್ಕುಬಿಟ್ಟ. "ಇರೋಳು ಒಬ್ಳು ಹುಡುಗಿ. ಅವಳ ಹಿಂದೆ ನಾವು ಮೂರು ಹುಡುಗ್ರು. ಒಳ್ಳೇ ಕುತೂಹಲಕಾರಿಯಾದ ಕನ್ನಡ ಸಿನೇಮಾದ ಕಥೆಯಂತಿದೆ! ಆಲ್ ರೈಟ್. ನಮಗೆ ಮೂರೂ ಜನರಿಗೆ ಆ ತರುಣಿಯ ಬಗ್ಗೆ ಆಸಕ್ತಿ ಉಂಟಾಗಿದೆ. ಯಾರಿಗೆ ಅದೃಷ್ಟ ಕಾದಿದೆಯೊ ನೋಡೋಣ. ಇದಕ್ಕೆ ನಿಮ್ಮ ಅಭಿಪ್ರಾಯ ಏನು?" ಎಂದ ಅನಂತ. ಸ್ವಲ್ಪ ಯೋಚಿಸಿದ ರವಿ "ಹೌದು ಅನಂತು. ನಂದಿತಾಳಿಂದ ಒಮ್ಮೆ ನನಗೆ ಪೆಟ್ಟು ಬಿದ್ದಿತೆಂದು ನಾನು ಎಲ್ಲಾ ಹುಡುಗಿಯರೂ ಹೀಗೆಯೇ ಎಂದು ನಿರಾಶಾಭಾವದಿಂದ ಜೀವನ ಕಳೆಯುವುದು ತಪ್ಪು. ನೀ ಹೇಳಿದಂತೆ ಆಗಲಿ." ಎಂದ. ಕಿರಣ ತನ್ನ ಮನಸ್ಸಿನಲ್ಲಿಯೆ ಯೋಚಿಸಿದ "ಸುಭಾಳಿಗೆ ನಾನಾಗಲೇ ಮನಸ್ಸನ್ನು ಒಪ್ಪಿಸಿದ್ದೇನೆ. ಅವಳನ್ನು ನಾನು ಖಂಡಿತಾ ಪಡೆಯುತ್ತೇನೆ ಎಂಬ ನಂಬಿಕೆ ನನಗಿದೆ. ಆದರೆ ಈ ತರಲೆಗಳು ಏನೂ ಅವಾಂತರ ಮಾಡದಿದ್ದರೆ ಸಾಕು."

# ಹಾದಿ ಹಗುರಾಗಲಿ


## ಡಾ. ಕೆ. ಎಲ್. ವಸಂತ್

ಗೈಥೆರ್ಸ್ಬರ್ಗ್, ಮೇರಿಲ್ಯಾಂಡ್


ನನ್ನ ಹಾದಿ ಹಗುರವಾಗಲಿ
ನಿನ್ನ ಕೃಪೆಯ ನೆರಳಿನಲಿ
ನನ್ನ ಕನಸು ನಿಜವೆನಿಸಲಿ
ನಿನ್ನ ಪ್ರೀತಿಯ ಬೆಂಬಲದಲಿ

ನಿನ್ನ ವೇಣು ನನ್ನ ಗಾನಕೆ
ಶ್ರುತಿಯ ಸೇರಿಸಿ ಬೆರೆಯಲಿ
ನಾನು ಬರೆದ ಚಿತ್ರಗಳೆಲ್ಲಾ
ನಿನ್ನ ಸೊಬಗನು ಬೆಳಗಲಿ

ನಾನು ಎಡವಿದ ಕಲ್ಲುಗಳು
ನನಗೆ ಹಾದಿಯ ತೋರಲಿ
ನನ್ನ ತೋಟದ ಹೂಗಳು
ನಿನ್ನ ಪಾದವ ಸೇರಲಿ

ನನ್ನ ಜೀವನದ ಕಹಿಗಳೆಲ್ಲ
ಅನುಕಂಪದ ಬಾಗಿಲ ತೆರಸಲಿ
ನನ್ನದೆಯನಾವರಿಸಿದ ಕತ್ತಲು
ನಿನ್ನ ಜ್ಯೋತಿಯಿಂದ ಬೆಳಗಲಿ.

## ೧೪

ಇನ್‌ಸ್ಟಂಟ್ ಮೆಸ್ಸೇಜ್‌ನಲ್ಲಿ ಸುಭ ಲಾಗ್ ಆಗಿರುವುದನ್ನು ನೋಡಿದೊಡನೆಯೆ ನಿಶಿ, "ಏ ನಿನಗೂ ಅಂಕಲ್‌ಗೂ ತುಂಬ ಥ್ಯಾಂಕ್ಸ್ ಕಣೆ, ನನ್ನ ಲಗ್ಗೇಜ್ ಪಿಕ್ ಮಾಡಿದ್ದಕ್ಕೆ. ನನಗೇ ಹೋಗಿ ತರೋಕೆ, ಯಾರೋ ಏನೋ ಅಂತ ಭಯವಾಗಿತ್ತು. ಹೇಗಿತ್ತು ಭೇಟಿ, ನಮ್ಮ ಲಾಸ್ಟ್ ಲಗೇಜ್ ಹೀರೋ ಜೊತೆ?" ಎಂದು ಟೈಪ್ ಮಾಡಿದಳು.

"ನಿಶಿ, ಒಬ್ಬನೇ ಹೀರೋ ಅಲ್ಲ ಕಣೇ, ಬಂದಿದ್ದು ಮೂರು ಜನ ಮನ್ಮಥರು! ಅದರಲ್ಲಿ ಒಬ್ಬನ ಜೊತೆ ನಾನು ಬ್ಲೈಂಡ್ ಡೇಟ್‌ಗೆ ಬೇರೆ ಹೋಗಿದ್ದೆ." ಸುಭಳ ಕೈ ಪಟಪಟನೆ ಕೀ ಬೋರ್ಡ್ ಮೇಲೆ ಓಡಿತು.

"ನಿಜವಾಗ್ಲೂ? ನೀನು ನನಗೆ ಹೇಳೇ ಇರಲಿಲ್ಲ."

"ಹೇಳಿಕೊಳ್ಳೋ ಅಂಥಾದ್ದು ಏನು ನಡೀಲಿಲ್ಲ. ನನಗೆ ಮಾತಾಡೋಕೆ ಆಗೊಲ್ಲ ಅಂತ ತಿಳಿದ ತಕ್ಷಣ, ನನ್ನ ಡೇಟ್ ಮೂಗ ಆಗಿ ಹೋದ."

"ಆದ್ರೆ, ಲಗ್ಗೇಜ್ ಅವನ್ದಲ್ಲ. ಅವನ ಸ್ನೇಹಿತ ಅನಂತ್‌ದು. ತುಂಬಾ ಹ್ಯಾಂಡ್‌ಸಮ್ ಆಗಿದ್ದಾನೆ."

"ಸಾರಿ ಕಣೆ, ನನಗೆ ಸಹಾಯ ಮಾಡೋಕೆ ಹೋಗಿ ನಿನಗೆ ಎಂಬೆರಾಸ್ ಆಯಿತು." ಎಂದ ನಿಶಿಗೆ "ಅದರಲ್ಲಿ ನಿಂದೇನು ತಪ್ಪಿಲ್ಲ ಬಿಡು. ಅಪ್ಪ ನಿನ್ನ ಲಗ್ಗೇಜ್ ತರಲು ಹೊರಟಾಗ, ನಾನೇ ಅವರು ಬೇಡಾ ಅಂದರೂ, ಕುತೂಹಲಕ್ಕಾಗಿ ಅವರ ಜೊತೆ ಹೋದೆ, ಅದೂ ಅಲ್ಲದೆ ನನ್ನ ಡೇಟ್ - ಕಿರಣ್ ಅಂತ ಅವನ ಹೆಸರು - ಹತ್ತಿರ ಬರಲಿಲ್ಲ, ಎಲ್ಲೋ ದೂರದಲ್ಲಿ ಇನ್ನೊಬ್ಬನೊಡನೆ ನಿಂತಿದ್ದ. ಅನಂತ್ ಅವರಿರುವ ಕಡೆಗೆ ವಾಪಸ್ ಹೋದಾಗಲೇ ನಾನು ಅವನನ್ನು ನೋಡಿದ್ದು. ಅವನು ನನ್ನನ್ನು ನೋಡಲಿಲ್ಲ ಅಂತ ಕಾಣಿಸುತ್ತೆ." ಎಂದು ಮೆಸೇಜ್ ಕಳಿಸಿದಳು ಸುಭಾ. "ಆದರೂ ಈ ಬ್ಲೈಂಡ್ ಡೇಟುಗಳ ಸಹವಾಸ ಕಷ್ಟಮ್ಮ." ಎಂದ ನಿಶಿಗೆ, "ಅವನನ್ನ ಕೆಟ್ಟವನೂ ಅಂತ ಹೇಳೋಕಾಗೊಲ್ಲ ಕಣೆ, ತಪ್ಪು ನನ್ನದೇ, ಮೊದಲೇ ಅವನಿಗೆ ನನ್ನ ವಿಷಯ ಸೂಕ್ಷ್ಮವಾಗಿಯಾದರೂ ತಿಳಿಸಬೇಕಾಗಿತ್ತು." ನಿಶಿ ಅದಕ್ಕೆ ಉತ್ತರಿಸುವ ಮೊದಲೇ ಮತ್ತೆ ಸುಭಾಳ ಕೈ ಟೈಪು ಮಾಡಲಾರಂಭಿಸಿತು: "ಟೋಟಲ್ ಸರ್ಪ್ರೈಸ್ ಆಗಿಹೋಯ್ತು, ಪಾಪ. ಅವನ ಕಣ್ಣಲ್ಲಿ, ಗೊಂದಲ, ಮರುಕ ಮುಂತಾದ ಬಾವನೆಗಳು ಪ್ರತಿಫಲಿಸಿ, ನನ್ನನ್ನು ಕಂಡೊಡನೆ ಮಿಂಚಿದ್ದ ಮೆಚ್ಚುಗೆಯ ನೋಟದ ಮೇಲೆ ಒಂದು ಪರದೆಯನ್ನು ಎಳೆದುಬಿಟ್ಟಂತೆ ತೋರುತ್ತಿತ್ತು." "ಅಂದರೆ ಪರದೆ ತೆರೆದರೆ ಮೆಚ್ಚುಗೆ ಗ್ಯಾರಂಟೀ ಅನ್ನು" ಕೀಟಲೆ ಮಾಡಿದಳು ನಿಶಿ." ಆ ಲಾಸ್ಟ್ ಲಗೇಜ್ ಹೀರೋದು ಈಮೇಯ್ಲ್ ಐಡಿ ಹೇಗಿದ್ರೂ ಇದೆ, ಅವನನ್ನ ವಿಚಾರಿಸಲಾ ನಿನ್ನ ಕಿರಣ್ ಬಗ್ಗೇ?" ಗೆಳತಿಯ ಪ್ರಶ್ನೆಗೆ ಏನೆಂದು ಉತ್ತರಿಸಬೇಕೆಂದು ಸುಭ ಯೋಚಿಸುತ್ತಿರುವಾಗ, ಅವಳು ಮತ್ತೆ ಐ ಎಮ್ ಮಾಡಿದಳು. "ಏ, ಅನಂತ್‌ನಿಂದ ಈ ಮೈಲ್ ಬಂದಿದೆ. ಅವನು ನಿನ್ನನ್ನ ನಾನೂ ಅಂತ ತಿಳಿದುಕೊಂಡಿದ್ದಾನೆ. ನನ್ನನ್ನೂ ನನ್ನ ತಂದೆ (ಅಂಕಲ್) ನೂ ನಾಳೆ ಟೀಗೆ ಕರೆದಿದ್ದಾನೆ, ಪರಿಸ್ಥಿತಿ ತುಂಬ ಇಂಟೆರೆಸ್ಟಿಂಗ್ ಆಗ್ತಿದೆ."

## ೧೫

ಅವರಿಬ್ಬರ ಸಂಭಾಷಣೆ ಇನ್ಸ್ಟಂಟ್ ಮೆಸ್ಸೇಜ್ ಮೂಲಕ ಓತಪ್ರೋತವಾಗಿ ಮುಂದುವರೆಯಿತು. "ಇದು ಒಳ್ಳೆ ಸಿನಿಮೀಯವಾಗಿ ನಡೀತಿದೆಯಲ್ಲೆ? ಈಗೇನು ಮಾಡ್ತೀಯೇ?" ಎಂಬ ಸುಭಾಳ ಪ್ರಶ್ನೆಗೆ ಏನು ಉತ್ತರಿಸಬೇಕೆಂದು ನಿಶಿಗೆ ಕೂಡಲೆ ಹೊಳೆಯಲಿಲ್ಲ. ಸ್ವಲ್ಪ ಚೇತರಿಸಿಕೊಂಡು ನಿಶಿ ಹೇಳಿದಳು, "ನನಗಂತೂ ಗೊತ್ತಿರದೇ ಇರೋ ಅವನನ್ನು ಒಂಟಿಯಾಗಿ ಭೇಟಿಮಾಡೋಕೆ ಹೆದರಿಕೆಯಾಗ್ತಿದೆ. ನಿನ್ನ ದಮ್ಮಯ್ಯ, ಇದೊಂದು ಸಲ ನೀನೂ ಮತ್ತೆ ಅಂಕಲ್ ಅವರ ಮನೆಗೆ ಹೋಗಿ ಬನ್ರೇ." ಸುಭ ತಟಕ್ಕನೆ ಹೇಳಿದಳು, "ಇದೊಳ್ಳೇ ಕತೆಯಾಯ್ತಲ್ಲ. ಏನೋ ಒಂದು ಸಲ ಲಗೇಜ್ ವಾಪಸ್ ತಂದುಕೊಡೋಕೆ ಸಹಾಯ ಮಾಡಿದ್ರೆ, ನಮ್ಮನ್ನೇ ಬಿಗಿಯಾಗಿ ಹಿಡ್ಕೊಂಡುಬಿಟ್ಟಿದೀಯಲ್ಲೇ? ಈ ತರ ಪ್ರತಿ ಸಲ 'ಇಮ್‌ಪರ್ಸೊನೇಟ್' ಮಾಡೋಕೆ ನಮ್ಮ ಕೈಲಂತೂ ಆಗೊಲ್ಲ!" ನಿಶಿಗೆ ಅವಳ ಉತ್ತರದಿಂದ ನಿರಾಶೆ ಆದರೂ ತನ್ನ ಪ್ರಯತ್ನ ಬಿಡಲಿಲ್ಲ. ಮತ್ತೊಮ್ಮೆ ನಾಟಕೀಯವಾಗಿ ಬೇಡಿಕೊಂಡಳು, "ನೋಡಮ್ಮ, ಈ ನಾಟಕಾನ ನೀವೇ ಶುರು ಮಾಡಿದ್ದರಿಂದ, ದಯವಿಟ್ಟು ಅದನ್ನು ಮುಗಿಸಿಕೊಟ್ಟು ನನ್ನನ್ನು ಕೃತಾರ್ಥಳನ್ನಾಗಿ ಮಾಡಿ." ಸುಭ ನಿಶಿಯ ಮಾತಿಗೆ ಜಗ್ಗಲಿಲ್ಲ. "ನಾನಾಗ್ಲೇ ಹೇಳಿದೆನಲ್ಲ, ಅನಂತ ತುಂಬಾ ಹ್ಯಾಂಡ್‌ಸಮ್ ಆಗಿದಾನೆ. ನೀನು ಅವನನ್ನು ನೋಡಿದ್ದರೆ, ಹೀಗೆ ನನ್ನನ್ನ ಕೇಳ್ತಾನೇ ಇರಲಿಲ್ಲ! ಹೋಗಿ ಮಾತಾಡಿಸಿಕೊಂಡು ಬಾ." ನಿಶಿ ಇನ್ನೊಮ್ಮೆ ಕೇಳಿಕೊಂಡಳು,

"ಸುಭಾ, ನನ್ನನ್ನ ನಡುನೀರಿನಲ್ಲಿ ಕೈಬಿಡಬೇಡ ಕಣೇ. ಅಟ್‌ಲೀಸ್ಟ್ ನನ್ನ ಜೊತೆ ಬರೋಕೆ ಆಗುತ್ತ?" ಸುಭಳ ನಿರ್ಧಾರ ಅಚಲವಾಗಿತ್ತು: "ನೀನೇ ಹೋಗೆ, ಅವನೇನೂ ನಿನ್ನನ್ನ ತಿನ್ನಲ್ಲ!" ಕೊನೆಗೆ ನಿಶಿ ಮನಸ್ಸಿಲ್ಲದ ಮನಸ್ಸಿನಿಂದ, ತಾನು ಅನಂತನ ಆಹ್ವಾನವನ್ನು ಸ್ವೀಕರಿಸಿರುವುದಾಗಿ ಸುಭಾಳಿಗೆ ತಿಳಿಸಿದಳು.

## ೧೬

ಗಂಗಾಧರ್ ಅಂಕಲ್ ಜೊತೆ ಕಾರಿನಲ್ಲಿ ಅನಂತನ ಮನೆಗೆ ಹೋಗುತ್ತಿದ್ದ ನಿಶಿಯ ತಲೆಯಲ್ಲಿ ಯೋಚನೆಗಳ ಸುರುಳಿಯೇ ಎದ್ದಿತ್ತು. ಈ ಲಗೇಜ್ ಗಲಾಟೆಯಿಂದ ಅವನ ಭೇಟಿ ಮತ್ತೆ ಆಗುವುದೇ? ತನ್ನ ಜೀವನದ ಆ ಅಧ್ಯಾಯವನ್ನು ಮರೆಯಲೆಂದೇ ಅವಳು ಬೆಂಗಳೂರು ಬಿಟ್ಟು ಬಂದಿದ್ದಳು. ಸಾಮರಸ್ಯವಿಲ್ಲದ ದಾಂಪತ್ಯದಿಂದ ಏನು ಪ್ರಯೋಜನ ಎಂದು ಅವಳು ಅವನಿಂದ ವಿಚ್ಛೇದನ ಪಡೆದಿದ್ದಳು. ಗಂಡನದೋ ಹೆಂಡತಿಯದೋ ಯಾರದೇ ತಪ್ಪಿರಲಿ ಡೈವೋರ್ಸ್ ಆಗಲು ಕಾರಣ ಹೆಣ್ಣು ಎಂದು ಬೆರಳು ತೋರಿಸುವವರೇ ಜಾಸ್ತಿ. ಮದುವೆಯಾದಮೇಲೆ ತಮ್ಮ ಜವಾಬ್ದಾರಿ ಕಳೆಯಿತು ಎನ್ನುವಂತೆ ವರ್ತಿಸಿದರು ತಂದೆ ತಾಯಿ. "ಅವಳು ಡೈವೋರ್ಸ್ ಮಾಡಿದಳಂತೆ." ಅನ್ನುವ ಗುಸುಗುಸು ಪಿಸುಪಿಸು ಮಾತಿನಿಂದ ತಪ್ಪಿಸಿಕೊಂಡು ಅಮೇರಿಕಾದಲ್ಲಿ ಅನಾನಿಮಸ್ ಆಗಿರಲು ಹೊರಟು ಬಂದಿದ್ದಳು. ಈಗ ಹೊಸ ದೇಶ, ಹೊಸ ಪರಿಸರ, ಹೊಸ ಕೆಲಸ, ಹೊಸ ಐಡೆಂಟಿಟಿಯಿಂದ ತನ್ನ ಬಾಳನ್ನು ಮುಂದುವರೆಸಲು ಹೊರಟಿದ್ದಳು. ತನ್ನ ಹಿಂದಿನ ಕಥೆಯನ್ನು ಆತ್ಮೀಯ ಗೆಳತಿ ಸುಭಾಳಿಗೆ ಕೂಡ ತಿಳಿಸಿರಲಿಲ್ಲ. ಆ ಲಗೇಜ್ ಟ್ಯಾಗಲ್ಲಿ ಅನಂತನ ಹೆಸರು ವಿಳಾಸವಿದ್ದರೂ, ಅದರ ಹಿಂದೆ ನೇತಾಡುತ್ತಿದ್ದ ಸಿಂಗಪೂರ್ ಏರ್ಲೈನ್ಸ್ ಟ್ಯಾಗಲ್ಲಿ ಕಂಡಿತ್ತು ಅವನ ಹೆಸರು - ರವಿ ಕುಪ್ಪೇನಹಳ್ಳಿ. ಅವನನ್ನು ಮತ್ತೆ ಕಾಣಲು ಇಷ್ಟವಿಲ್ಲದೆ ಲಗೇಜ್ ಪಿಕ್ ಅಪ್ ಮಾಡಲು ಸುಭಾಳ ಮೊರೆ ಹೋಗಿದ್ದಳು. ಈಗ ತಾನು ಹೋಗೋದು ಅನಂತನ ಮನೆಗಾದರೂ, ಸ್ನೇಹಿತ ಅಂದ ಮೇಲೆ ರವಿ ಕೂಡ ಅಲ್ಲಿ ಇದ್ದೇ ಇರುತ್ತಾನೆ. ಛೆ, ನಾನು ಹೋಗೋಕೆ ಒಪ್ಪಿಕೋ ಬಾರದಿತ್ತು. ಸುಭಾಳನ್ನೇ ಮತ್ತೆ ಕಳಿಸಬೇಕಾಗಿತ್ತು. ಅವಳಿಗೂ ಆ ಇನ್ನೊಬ್ಬ ಸ್ನೇಹಿತ, ಕಿರಣನನ್ನು ಕಂಡರೆ ಇಷ್ಟ ಇರುವ ಹಾಗಿದೆ. ಅಷ್ಟರಲ್ಲಿ ಮನೆ ಬಂದಿತ್ತು. ಕರೆಗಂಟೆಗೆ ಉತ್ತರ ನೀಡಿದ ಅನಂತನಿಗೆ, ಹಿಂದೆ ಭೇಟಿ ಮಾಡಿದ್ದ ಹುಡುಗಿಯ ಬದಲು ಗಂಗಾಧರ್ ಜೊತೆ ನಿಂತಿದ್ದ ಹೊಸ ಹುಡುಗಿಯನ್ನು ನೋಡಿ ತಬ್ಬಿಬ್ಬಾಯಿತು. ಅವನ ಹಿಂದೆಯೇ ನಿಂತಿದ್ದ ರವಿ ನಿಶಿಯನ್ನು ಕಂಡೊಡನೆ "ನಂದಿತ" ಎಂದು ತೊದಲಿದ.

## ೧೭

ಒಳಗೆ ಬರುತ್ತಾ ಮೂವರ ಪರಿಚಯ ಮಾಡಿಕೊಂಡ ಗಂಗಾಧರ್, ನಿಶಿಯ ಕಡೆಗೆ ನಾಟಕೀಯವಾಗಿ ಎರಡೂ ಕೈಗಳನ್ನು ತೋರಿಸಿ, "ನಿಶಿಗಂಧಾ... ನನ್ನ ಮಗಳು ಸುಭಾಷಿಣಿಯ ಕ್ಲೋಸ್ ಫ್ರೆಂಡ್..." ಎನ್ನುತ್ತಾ ಸೋಫಾದ ಮೇಲೆ ಒರಗಿದರು. ಅವಳೊಂದಿಗೆ ಅನಂತ, ಕಿರಣನ ಪರಿಚಯ ಮುಗಿದ ಮೇಲೆ ನೆಲೆಸಿದ್ದು ಒಂದೆರಡು ಕ್ಷಣದ ದಟ್ಟ ಮೌನ. ವೈಮನಸ್ಯದ ಬಿರುಗಾಳಿಯ ನಂತರ, ವರ್ಷಕ್ಕೂ ಮೀರಿದ ಅಗಲುವಿಕೆ ಮೂಡಿಸಿದ್ದ ಗಾಢ ಮೌನ. ರವಿ, ನಿಶಿಗೆ ಈ ನಿಶ್ಶಬ್ದದ ಸಾಂದ್ರತೆ ತೀರಾ ಅಸಹನೀಯವೆನಿಸಿ, ಇಬ್ಬರೂ "ಹಾಯ್" ಎಂದರು. ಒಂದೇ ಸಮಯಕ್ಕೆ ಹೇಳಿದ್ದರಿಂದ ಮತ್ತೂ ಸಂಕೋಚವೆನಿಸಿ ಇಬ್ಬರೂ ಸಪ್ಪೆ ನಗೆ ನಕ್ಕರು. ಗಂಗಾಧರ್, ತಾನು ಚಳಿಗಾಲವನ್ನು ಏಕೆ ಇಷ್ಟಪಡುತ್ತೇನೆ ಎಂದು ಸುಮಾರು ಹತ್ತು ನಿಮಿಷಗಳಾಗೂ ಮೀರಿ ಒಬ್ಬರೇ ಹರಟುತ್ತಿದ್ದರು. ಸುಮ್ಮನೆ ಅವರ ಕಡೆ ತಿರುಗಿ ತಲೆಯಲ್ಲಾಡಿಸುತ್ತಿದ್ದ ರವಿಗೆ ನಡೆಯುತ್ತಿದ್ದದ್ದು ಏನೂ ಅರ್ಥವಾದಂತಿರಲಿಲ್ಲ. ನಂದಿತಾಳನ್ನು ಅಮೇರಿಕಾದಲ್ಲಿ ಹೀಗೆ ಹಠಾತ್ತನೆ ನೋಡುವುದೆಂದರೆ? ಕೆಲಸದ ಮೇಲೆ ಬಂದಿದ್ದಾಳೇನೋ? ಮತ್ತೆ ಮದುವೆಯೇನಾದರೂ ಆಗಿ...? ಒಂದು ಕ್ಷಣ ಕದ್ದು ಅವಳೆಡೆಗೆ ನೋಡಿ ಮತ್ತೆ ಗಂಗಾಧರ್ ಕಡೆಗೆ ತಿರುಗಿದ ರವಿಗೆ ನಂದಿತಾ ಸಾಕಷ್ಟು ಬದಲಾದವಳಂತೆ ಕಂಡಿದ್ದಳು. ಬೈತಲೆ ತೆಗೆದು ಎತ್ತಿ ಕಟ್ಟಿದ್ದ ಹೆರಳು, ಆಡಂಬರವೆನಿಸದ ಉಡುಗೆ, ಅನುಭವ ಕಲಿಸಿಕೊಟ್ಟಿದ್ದಂತಿದ್ದ ಗಾಂಭೀರ್ಯದ ಸೊಬಗು... ಯಾರೋ ಹೊಸ ವ್ಯಕ್ತಿಯನ್ನು ನೋಡಿದಂತೆನಿಸತೊಡಗಿತು. ಎದುರುಗಡೆ, ಗಂಗಾಧರ್ ಅವರ ವಾಚಾಳಿತನ ಹುಡುಗರಿಗೆ ಆಗಲೇ ಬವಳಿ ಬರಿಸಿತ್ತು. ಅನಂತ ನಿಶಿಯತ್ತ ತಿರುಗಿ, "ನಿಮ್ಮ ಬಗ್ಗೆ ಏನು ಹೇಳಲೇ ಇಲ್ಲ...?" ಎಂದ.

## ೧೮

ಅನಂತನ ಪ್ರಶ್ನೆಗೆ ಉತ್ತರಿಸಲು ನಂದಿತ ಬಾಯಿ ತೆರೆಯುವಷ್ಟರಲ್ಲಿ ರವಿ "ಒಂದ್ನಿಮಿಷ ನಿನ್ನ ಜೊತೆ ಪ್ರೈವೇಟಾಗಿ ಮಾತನಾಡಬೇಕು, ಬಾ" ಎಂದು ಅವಳನ್ನು ಕರೆದುಕೊಂಡು ಮೆಟ್ಟಲು ಹತ್ತಿ ಮಹಡಿಯ ಕಡೆ ನಡೆದೇಬಿಟ್ಟ. ಮೇಲಿನ ಕೋಣೆಯ ಬಾಗಿಲನ್ನು ಸರಿಸುತ್ತಿದ್ದ ರವಿಯೆಡೆಗೆ ನಂದಿತ ಓರೆನೋಟ ಬೀರಿದಳು. ಅಬ್ಬಾ! ಅದೇ ಬಿರುಸು ನಡೆ, ನುಡಿ. ಆದರೆ ಇದೇ ಗುಣ ತನ್ನನ್ನು ಮೊದಲು ಅವನೆಡೆಗೆ ಆಕರ್ಷಿಸಿದ್ದು, ನಂತರ ತಮ್ಮಿಬ್ಬರ ನಡುವಣ ಘರ್ಷಣೆಗೆ ಕಾರಣವಾಗಿದ್ದು. ತನ್ನ ಸ್ತ್ರೀ ಸಹಜ ಮೃದು ಭಾವನೆಗಳು ಅವನಿಗೆಂದೂ ಅರ್ಥವಾಗಿರಲಿಲ್ಲ. ಬದಲಿಗೆ, ಅವೆಲ್ಲವೂ ಸಿನಿಮೀಯವೆಂದು ಗೇಲಿ ಮಾಡುತ್ತಿದ್ದ ಅವನನ್ನು ತಾನೆಷ್ಟು ಬಾರಿ, "ಅನ್‌ರೊಮ್ಯಾಂಟಿಕ್ ಫೂಲ್!" ಎಂದು ಬೈದು ದೂರ ತಳ್ಳಿರಲಿಲ್ಲ? ಆಗೆಲ್ಲಾ ಅವನು ತನ್ನನ್ನು ಬಾಹುಗಳಲ್ಲಿ ಬಂಧಿಸಿ ಕಾಡಿಸುತ್ತಿದ್ದ ರೀತಿ... ಓಹ್! ನನಗೇನಾಗಿದೆ? ರವಿಯ ನೆನಪು ಸಂಪೂರ್ಣ ಸುಟ್ಟು ಬೂದಿಯಾಗಬೇಕೆಂದು ತಾನು ಈ ಮನಸ್ಸಿಗೆ ಅವನ ಅಣುಅಣುವನ್ನೂ ದ್ವೇಷಿಸಲು ಕಲಿಸಿರಲಿಲ್ಲವೇ? ಈಗೇಕೆ ಅವನ ಸಾಮಿಪ್ಯದಿಂದ ಸುಪ್ತ ಕಾಮನೆಗಳು ಕೆರಳುತ್ತಿವೆ? ಒಂದು ಕ್ಷಣ ಅಧೀರಳಾಗಿ ನಂದಿತ ತಲೆ ತಗ್ಗಿಸಿದಳು. ರವಿಯೇ ಮೌನ ಮುರಿಯುತ್ತ, "ಹೇಗಿದ್ದೀಯ?" ಎಂದು ಕೇಳಿದ. "ನೀನೇ ನೋಡುತ್ತಿದ್ದೀಯಲ್ಲ?" ಎಂದುಸುರಿ ಶುಷ್ಕನಗೆ ಬೀರಿದ ನಂದಿತಾಳನ್ನು ರವಿಯೊಮ್ಮೆ ದಿಟ್ಟಿಸಿದ. ಸಂಜೆಯ ಕುಳಿರ್‌ಗಾಳಿಗೆ ಸಿಲುಕಿ ಹಾರಾಡುತ್ತಿದ್ದ ಮುಂಗುರುಳು, ತನ್ನನ್ನು ಮೋಡಿ ಮಾಡಿ ಕರಗಿಸುತ್ತಿದ್ದ ಅದೇ ಭಾವುಕ ಕಣ್ಣುಗಳು, ನಕ್ಕಾಗ ಕಂಡೂ ಕಾಣದಂತೆ ಮಿಂಚುತ್ತಿದ್ದ ಗುಳಿಗಲ್ಲ, ನೀಳವಾದ ಮೂಗಿನಡಿಯಲ್ಲಿ ಸದಾ ಕೆಂಪು ಛಾಯೆ ಬೆರೆತ ಪುಟ್ಟ ಚೆಂದುಟಿ. ಮೈಮೇಲೆ ಆಭರಣಗಳನ್ನು ಹೇರಿಕೊಂಡು ಕೃತಕ ನಗೆ ಚೆಲ್ಲುತ್ತ, ಆಡಂಬರ, ಒಣಪ್ರತಿಷ್ಠೆಗೆ ಗೌರವ ಕೊಡುತ್ತಿದ್ದ ಟೊಳ್ಳು ವ್ಯಕ್ತಿತ್ವದ ನಂದಿತ ಎಲ್ಲಿ, ಥಳುಕು, ಬಳುಕು, ವೈಯಾರಗಳಿಲ್ಲದೆ, ಗಾಂಭೀರ್ಯವೇ ಮೂರ್ತಿವೆತ್ತಂತೆ ನಿರಾಭರಣ ಸುಂದರಿಯಾಗಿ ನಿಂತಿರುವ ನಿಶಿಗಂಧ ಎಲ್ಲಿ?

ರವಿಗೆ ಪಾಪ, ಹುಡುಗಿ ತೀರ ಸೋತಿದ್ದಾಳೆ ಎನ್ನಿಸಿತು. ಅವಳನ್ನು ಬರಸೆಳೆದು ಎದೆಗಾನಿಸಿಕೊಂಡು ನೋವ ಮರೆಸುವಾಸೆ. ಸಂಯಮ ತಂದುಕೊಂಡು ನುಡಿದ, "ನೀನು ಹೆಸರು ಬದಲಾಯಿಸಿದ್ದು, ಸೂಟ್‌ಕೇಸನ್ನು ಸುಭಾಷಿಣಿಯ ಮೂಲಕ ಕಳಿಸಿದ್ದು, ನನ್ನನ್ನು ಅವಾಯ್ಡ್ ಮಾಡಲೆಂದು ನನಗೆ ಚೆನ್ನಾಗಿ ಗೊತ್ತು. ಬಟ್, ಐ ಡೋಂಟ್ ಬ್ಲೇಮ್ ಯು. ಹಿಂದೆ, ವಿವೇಚನೆಯಿಲ್ಲದೆ ಬಹಳಷ್ಟು ನಿನ್ನ ಮನ ನೋಯಿಸಿದ್ದೇನೆ, ನಂದಿತ. ಐಯಾಮ್ ರಿಯಲಿ ಸಾರಿ ಫಾರ್ ದಟ್." ರವಿಯ ಪಶ್ಚಾತ್ತಾಪದ ಧ್ವನಿ ಕೇಳಿ ನಂದಿತಾಳ ಕಣ್ಣು ಹನಿಗೂಡಿತು. "ನನಗೂ ನನ್ನ ಪಾಲಿನ ತಪ್ಪು ಏನೆಂದು ಅರಿವಾಗಿದೆ, ರವಿ. ಐ ಹೋಪ್ ಯು ವಿಲ್ ಫರ್ಗಿವ್ ಮಿ ಸಮ್ ಡೇ ಫಾರ್ ದಟ್"""ಎಂದಳು. ದಿಗಂತದೆಡೆ ದೃಷ್ಟಿನೆಟ್ಟು ರವಿ ಹೇಳಿದ "ನಿಂಗೆ ಗೊತ್ತಲ್ಲ, ಇಫ್ ಯು ಲವ್ ಸಮ್ಥಿಂಗ್, ಲೆಟ್ ಇಟ್ ಬಿ ಅಂಡ್ ಸೆಟ್ ಇಟ್ ಫ್ರೀ. ಇಫ್ ಇಟ್ ಕಮ್ಸ್ ಬ್ಯಾಕ್ ಟು ಯು, ಇಟ್ಸ್ ಮೆಂಟ್ ಟು ಬಿ. ನಾವಿಬ್ಬರೂ ಒಬ್ಬರಿಂದೊಬ್ಬರು ಬಿಡುಗಡೆ ಹೊಂದಿದ ಮೇಲೆ, ಈಗ ಮತ್ತೆ ಹೀಗೆ ಆಕಸ್ಮಿಕವಾಗಿ ಭೇಟಿಯಾಗಿರುವುದು ಎಷ್ಟು ಐರಾನಿಕಲ್ ಅನ್ಸುತ್ತೆ ಅಲ್ಲವೇ?" ತತ್ವಜ್ಞಾನಿಯಂತೆ ಮಾತನಾಡುತ್ತಿದ್ದ ರವಿಯನ್ನು ಕಂಡು ನಂದಿತಾಳಿಗೆ, ಬದುಕಿನ ಪ್ರತಿ ಘಟನೆಯೂ

ಮನುಷ್ಯನನ್ನು ಒಂದಲ್ಲ ಒಂದು ರೀತಿಯಲ್ಲಿ ಬದಲಿಸುತ್ತೆ, ಪಕ್ವಗೊಳಿಸುತ್ತೆ ಎಂಬ ಭಾವನೆ ಮೂಡಿತು. ವಿಧಿಯು ಕವಲೊಡೆದ ದಾರಿಯಲ್ಲಿ ನಡೆಯುತ್ತಿದ್ದ ನಮ್ಮಿಬ್ಬರ ಹಾದಿಗಳನ್ನು ಮತ್ತೆ ಬೆಸೆದು, ಮುಂದಿನ ಪಯಣ ಹೇಗೆ ಎಂದು ಕುತೂಹಲದಿಂದ ನಿರೀಕ್ಷಿಸುತ್ತ ಕಾದು ಕುಳಿತಿದೆ. ಹಿಂದೆಂದೋ ಕೇಳಿದ ಹಾಡಿನ ಸಾಲು ಜ್ಞಾಪಕಕ್ಕೆ ಬಂತು. *ಕೇ ಸೆರಾ ಸೆರಾ, ವಾಟೆವರ್ ವಿಲ್ ಬಿ ವಿಲ್ ಬಿ. ದಿ ಫ್ಯೂಚರ್ ಇಸ್ ನಾಟ್ ಫಾರ್ ಅಸ್ ಟು ಸೀ.* ಹೌದು, ನಮ್ಮಿಬ್ಬರ ಸಂಬಂಧ ಹೇಗೆ ಮುಂದು ವರೆಯುತ್ತದೋ ಯಾರಿಗೆ ಗೊತ್ತು. ಅತ್ತ ರವಿ ನಂದಿತಾಳ ಮೌನಕ್ಕೆ ಅರ್ಥ ಹುಡುಕುತ್ತ ನಿಂತಿದ್ದ.

ಗಾಢ ಯೋಚನೆಗಳ ಸುಳಿಯಲ್ಲಿ ಸಿಲುಕಿದಂತಾಗಿ ನಿಶಿ ಮತ್ತು ರವಿ ಮಾತಾಡಲಾರದೇ ಕಿಟಕಿಯಾಚೆ ನೋಡುತ್ತ ನಿಂತರು. ನಿರ್ಮಲ ಶ್ವೇತ ಬಣ್ಣದ ಹಂಸಗಳು ಕೊಳದಲ್ಲಿ ನಿಶ್ಚಿಂತೆಯಿಂದ ಮಂದಗತಿಯಲ್ಲಿ ತೇಲುತ್ತಿದ್ದವು. ಕೊಳದ ಸುತ್ತಲೂ ದಟ್ಟವಾಗಿ ಬೆಳೆಸಲ್ಪಟ್ಟ ಮರಗಳ ಎಲೆಗಳು ತಂಗಾಳಿಗೆ ಮಿತವಾಗಿ ತೂಗಾಡುತ್ತಿದ್ದವು. ಸಂಜೆಯ ರಂಗು ಕೊಳದ ನೀರೊಂದಿಗೆ ಬೆರೆತು ರಮ್ಯ ನೋಟವನ್ನು ಸೃಷ್ಟಿಸಿತ್ತು. ಕೊಳದಲ್ಲಿ ಮೂಡಿದ್ದ ಸೂರ್ಯನ ಪ್ರತಿಬಿಂಬವು ನಿಶಿಯನ್ನು ತನ್ನೆಡೆಗೆ ಆಕರ್ಷಿಸಿತ್ತು. ಇವೆಲ್ಲವನ್ನು ನೋಡುತ್ತ ನಿಶಿಗೆ ತಾನು ರವಿಯೊಂದಿಗೆ ಕಳೆದ ಮಧುರ ಕ್ಷಣಗಳು ನೆನಪಾಗತೊಡಗಿದವು. ತಮ್ಮ ಮೊದಲ anniversaryಗೆ ಗೋವಕ್ಕೆ ಹೋದಾಗಲೂ ಈ ರೀತಿಯ ಸುಂದರ ಸಂಜೆಗೆ ಮನಸೋತಿದ್ದಳು. ಆನಂದದ ಆ ದಿನಗಳು ಮತ್ತೊಮ್ಮೆ ಬರುವುದೆ ಎಂಬ ಆಸೆಯನ್ನು ಅವಳ ಕಣ್ಣುಗಳು ಸೂಸುತ್ತಿದ್ದವು. ರವಿಗೆ ಏನೂ ಹೇಳಲು ತೋರದೆ ಮೌನವಾಗಿ ಕಿಟಕಿಯಾಚೆ ನೋಡುತ್ತ ನಿಂತ. ನಿಶಿಯು ತನ್ನ ಕಲ್ಪನಾಲೋಕದಿಂದ ಹೊರಬರುತ್ತ ಕಿಟಕಿಯಾಚೆ ನೋಡುತ್ತಲೆ ಹೇಳಿದಳು "ಚಳಿ ಆಗ್ತ ಇದೆ. ಕಿಟಕಿ ಮುಚ್ಚೋಣವಾ?" ರವಿಯು ಕೂಡಲೆ ಕಿಟಕಿ ಮುಚ್ಚಿದ. ಕಿಟಕಿಯ ಗಾಜಿನ ಮೂಲಕ ನೋಡಿದಾಗ ನಿಶಿಗೆ ಸಂಜೆಯ ರಂಗು ತುಸು ಪೇಲವವಾದಂತೆ ಕಂಡಿತು. ಅವಳು ನೋಡುನೋಡುತ್ತಿದ್ದಂತೆಯೆ ಕೊಳದಲ್ಲಿ ಮೂಡಿದ್ದ ಸೂರ್ಯ ಮಾಯವಾಗಿದ್ದ. ದಿಗಂತದಲ್ಲಿ ಸೂರ್ಯ ಮುಳುಗಿದ್ದ. ಮೋಡಗಳ ಮೇಲಿದ್ದ ಹೊಂಬಣ್ಣ ಅಳಿಸಿ ನಿಶೆಯ ಛಾಯೆ ಆವರಿಸಿತ್ತು.

ನಿಶಿ ರವಿಯತ್ತ ನೋಡದೆ ಹೇಳಿದಳು "ರವಿ. ನಾನು ಹಿಂದಿನದೆಲ್ಲವನ್ನು ಮರೆಯಬೇಕು. ಈ ಕೆಲ ದಿನಗಳಿಂದ ನಿನ್ನ ಬರುವಿಕೆಯಿಂದ ಹಳೆಯ ನೋವುಗಳು ಮತ್ತೆ ಕಾಡತೊಡಗಿವೆ. ನಾವು ಇದನ್ನು ಇಲ್ಲಿಗೆ ನಿಲ್ಲಿಸಬೇಕು." ಅವಳ ಮಾತು ಕೇಳಿ ರವಿ ಮನಸ್ಸಿನಲ್ಲಿಯೆ ಯೋಚಿಸಿದ "ಅಬ್ಬಾ! ಇನ್ನೂ ಆ ಕಠೋರತೆ ಹೋಗಿಲ್ಲ!" ಇವರನ್ನು ಹುಡುಕಿಕೊಂಡು ಬಂದಿದ್ದ ಅನಂತ, ಇವರ ಮಾತು ಕೇಳುತ್ತ ಹತ್ತಿರದಲ್ಲಿಯೆ ನಿಂತಿದ್ದ. ಅವನ ಮುಖ ಪೆಚ್ಚಾಗಿತ್ತು. ಇಬ್ಬರನ್ನು ಉದ್ದೇಶಿಸಿ "ಇನ್ನು ಏನ್ ನೋಡ್ತ ಇದೀರ. ಸೂರ್ಯ ಮುಳುಗಾಯ್ತು. ಬನ್ನಿ ತಿಂಡಿ ತಿನ್ನೋಣ." ಎನ್ನುತ್ತ ಹೊರಟ. ನಿಶಿ ಕೂಡಲೇ ಅವನ ಹಿಂದೆ ನಡೆದಳು. ಅವಳ ಹಿಂದೆ ರವಿ ಮೌನವಾಗಿ ನಡೆದ.

ನಿಶಿ, ರವಿ ಮತ್ತು ಅನಂತ ಮಾತಾಡದೆ ತಿಂಡಿ ಕಾಫಿ ಮುಗಿಸಿದರು. ಗಂಗಾಧರ್‌ಗೆ ಮಾತ್ರ ತನ್ನ ಸುತ್ತಲೂ ಆವರಿಸಿದ್ದ ಮೌನವಾಗಲಿ ಅದರ ಹಿಂದಿದ್ದ ದುಗಡವಾಗಲಿ ಅರ್ಥವಾದಂತೆ ಕಾಣಲಿಲ್ಲ. ಸಮಯವನ್ನು ಖುಶಿಯಿಂದ ಕಳೆದೆನೆಂಬ ಹೆಮ್ಮೆಯನ್ನು ಬೀಗುತ್ತ, ನಿಶಿಯನ್ನು ಹೊರಡಿಸಿಕೊಂಡು ಹೊರಟೇ ಬಿಟ್ಟರು. ನಿಶಿ ಕತ್ತಲೆಯಲ್ಲಿ ಮರೆಯಾಗುವುದನ್ನೆ ನೋಡುತ್ತ ನಿಂತಿದ್ದ ರವಿ, ನಿಟ್ಟುಸಿರು ಬಿಡುತ್ತ ಒಳಬಂದ.

ಅತ್ತ ಕಿರಣನಿಗೆ ಸುಭಾಳ ವಿಷಯದಲ್ಲಿ ಯೋಚನೆ ಮಾಡಿ ಮಾಡಿ ತಲೆ ಕೆಟ್ಟು ಮೊಸರು ಗಡಿಗೆಯಾಗಿತ್ತು. ಅವನಿಗೆ ಇನ್ನು ಈ ದೊಡ್ಡ ಹೊರೆಯನ್ನು ಹೊತ್ತು ಓಡಾಡುವುದು ಕಷ್ಟವೆನಿಸತೊಡಗಿತ್ತು. ಕೊನೆಗೆ ದೃಢ ಮನಸ್ಸಿನಿಂದ ಒಂದು ನಿರ್ಧಾರಕ್ಕೆ ಬಂದ.

ತಾನು ಅತ್ಯಂತ ಪ್ರೀತಿಯಿಂದ ತಂದು ಬೆಳೆಸಿದ್ದ ಮಲ್ಲಿಗೆ ಗಿಡಕ್ಕೆ ನೀರು ಹಾಕುತ್ತಿದ ಸುಭ ಮನೆಯ ಮುಂದೆ ಬಂದು ನಿಂತ ಕಾರನ್ನು ಕುತೂಹಲದಿಂದ ನೋಡತೊಡಗಿದಳು. ಅದರಿಂದ ಕಿರಣ್ ಇಳಿದು ತನ್ನೆಡೆಗೆ ಬರ ತೊಡಗಿದಾಗ ಅವಳ ಹೃದಯದ ಬಡಿತ ಏರಿ, ನಿರೀಕ್ಷೆ ಮತ್ತು ಕಾತುರತೆಯೇ ತಾನಾದಂತೆ ಕಿರಣನ ಬರುವಿಕೆಯನ್ನೇ ನೋಡುತ್ತ ನಿಂತಳು. ಬಾಗಿಲಾಚೆಯೆ ಸುಭಾಳಾನ್ನು ಕಂಡ ಕಿರಣನಲ್ಲಿ ಸ್ವಲ್ಪ ಹಿಂಜರಿಕೆ ಕಂಡಿತು. ಆಷ್ಟರಲ್ಲಿ ಅವಳೆದುರಿಗೆ ಬಂದು ನಿಂತಿದ್ದ. ಸುಭಾ ಸಂತಸದಿಂದ ಅವನನ್ನು ನಗುಮುಖದಿಂದ ಸ್ವಾಗತಿಸಿದಳು. ಕಿರಣ ತನ್ನ ಜೇಬಿನಿಂದ ಒಂದು ಪತ್ರವನ್ನು ಅವಳ ಕೈಲಿಟ್ಟು ಬಂದಷ್ಟೇ ನೇರವಾಗಿ ಹೋಗಿ ಕಾರಲ್ಲಿ ಕೂತು ಹೊರಟೆ ಹೋದ.

ಮಲ್ಲಿಗೆ ಗಿಡಗಳನ್ನು ಅಲ್ಲಿಗೇ ಬಿಟ್ಟು ಸುಭ ಮನೆಯೊಳಗೆ ಓಡಿ ಮುಚ್ಚಿದ ಬಾಗಿಲಿಗೆ ಒರಗಿ ಪತ್ರ ತೆರೆದು ಓದತೊಡಗಿದಳು. ಕಿರಣನ ಕೈ ಬರಹದಲ್ಲಿ ಮೂಡಿದ್ದ ಪತ್ರ ಈ ರೀತಿ ಇತ್ತು.

*ಆತ್ಮೀಯಳಾದ ಸುಭಾಷಿಣಿ,*

*ನಿನ್ನಂತಹ ಚೆಲುವೆ ಹಾಗು ಗುಣವತಿಯಾದ ಹುಡುಗಿಯನ್ನು ನಾನು ಇದುವರೆಗೂ ಎಲ್ಲಿಯೂ ಕಂಡಿಲ್ಲ. ನಿನ್ನನ್ನು ಬಾಳ ಸಂಗಾತಿಯಾಗಿ ಪಡೆಯುವುದಕ್ಕೆ ನೂರು ಜನ್ಮದ ಪುಣ್ಯ ಮಾಡಿರಬೇಕು. ಹೀಗಿದ್ದರು ನನಗೆ ತೀವ್ರವಾಗಿ ಕಾಡುವ ಒಂದು ಆತಂಕವಿದೆ. ಮುಂದೆ ನಾವಿಬ್ಬರೂ ಬಾಳಸಂಗಾತಿಗಳಾದಾಗ ನಾನು ನಿನ್ನನ್ನು ನೋವಿಗೆ ಗುರಿ ಮಾಡಿಬಿಡುತ್ತೇನೆ ಎನ್ನುವುದೇ ನನ್ನ ಭಯ. ನಾನು ಎಲ್ಲರಂತೆ ಮನುಷ್ಯಮಾತ್ರನಾದುದರಿಂದ ಪುಟವಿಟ್ಟ ಚಿನ್ನದಂತಹ ನಿನ್ನನ್ನು ವರಿಸಲು ಯೋಗ್ಯನೇ ಎನಿಸತೊಡಗಿದೆ. ದಯವಿಟ್ಟು ನನ್ನನ್ನು ಕ್ಷಮಿಸು. ನಿನಗೆ ಯೋಗ್ಯ ಸಂಗಾತಿ ಸಿಗುವಂತಾಗಲಿ ಎಂದು ಆಶಿಸುತ್ತಾ,*

*ಇತಿ*
*ಕಿರಣ್.*

ಉಕ್ಕಿಬರುತ್ತಿದ್ದ ಕಣ್ಣೀರನ್ನು ತಡೆಯುತ್ತ ಸುಭಾ ಸೋಫಾಕ್ಕೆ ಒರಗಿದಳು.

ರಾತ್ರಿಯಿಡಿ ಕಿರಣನಿಗೆ ನಿದ್ದೆ ಬಾರದೆ ಹಾಸಿಗೆಯಲ್ಲಿ ತೊಳಲಾಡುತ್ತಿದ್ದ. ಆ ದಿನ ತಾನು ಸುಭಾಳೊಂದಿಗೆ ವ್ಯವಹರಿಸಿದ ರೀತಿಯ ಬಗ್ಗೆ ಅವನಿಗಾಗಲೆ ದುಃಖ ಮತ್ತು ಪಶ್ಚಾತ್ತಾಪದ ಭಾವನೆಗಳು ಮೇಲಿಂದ ಮೇಲೆ ಬರತೊಡಗಿದ್ದವು. ಅವನಿಗೆ ಬಂದ ಅಲ್ಪಸ್ವಲ್ಪ ನಿದ್ದೆಯ ಮಂಪರಿನಲ್ಲೂ ಆ ದಿನದ ಘಟನಾವಳಿಗಳು ಬೇರೆ ಬೇರೆ ರೀತಿಯಲ್ಲಿ ಮರುಕಳಿಸಿ ಬರುತ್ತಿದ್ದವು. ಸುಭ ತನ್ನ ಬಗ್ಗೆ ಏನೆಂದುಕೊಂಡಿರಬಹುದು? ತಾನು ದುಡುಕಿಬಿಟ್ಟೆನೆ? ನಾನು ಈಗಾಗಲೆ ಅವಳಿಗೆ ನೋವುಂಟು ಮಾಡಿಬಿಟ್ಟೆನೆ? ಹೀಗೆಯೆ ರಾತ್ರಿಯೆಲ್ಲ ಕಳೆದು ಬೆಳಗಾಗಿ ಹೋಯಿತು. ಎದ್ದು, ಕೆಲಸಕ್ಕೆ ಹೋಗಲು ಸಿದ್ಧವಾದನು. ಅನ್ಯಮನಸ್ಕನಾಗಿ ಕಾರಿನ ಕೀ ತಿರುಗಿಸುತ್ತ ಮನೆಯ ಬಾಗಿಲು ತೆರೆದನು. ಅವನೆದುರಿಗೆ ತನ್ನ ಸರಳವಾದ ಸೌಂದರ್ಯವನ್ನು ಸೂಸುತ್ತ ನಿಂತಿದ್ದಳು ಸುಭಾಷಿಣಿ.

ಕಿರಣನಿಗೆ ಅವಳನ್ನು ಕಂಡ ಸಂತಸ ಒಂದೆಡೆಯಾದರೆ ಹಿಂದಿನ ದಿನದ ತನ್ನ ವರ್ತನೆಯ ಬಗ್ಗೆ ತಪ್ಪಿತಸ್ಥ ಭಾವನೆ ಇನ್ನೊಂದೆಡೆ. ಉತ್ಸಾಹದಿಂದಲೆ ಅವಳನ್ನು "ಬಾ ಒಳಗೆ." ಎಂದು ಕರೆದನು.

ಒಳಗೆ ಬಂದ ಸುಭಾಳಿಗೆ ಕಿರಣ ಉಪಚಾರಗಳನ್ನು ಬಡಬಡಿಸತೊಡಗಿದ. ಅವನನ್ನು ಮಧ್ಯದಲ್ಲೆ ತಡೆದು ಸನ್ನೆಯ ಮೂಲಕ ಕೇಳಿದಳು "ನಾನು ಬಂದಿದ್ದು ನಿನಗೆ ಖುಷಿಯಾಯಿತಾ?" ಉತ್ಸಾಹದಿಂದ ಮತ್ತು ಸಹಜವಾದ ಸಂತಸದಿಂದ ಕಿರಣ ತಲೆದೂಗಿದ. ಅವನ ಪ್ರತಿಕ್ರಿಯೆಯಿಂದ ಉತ್ತೇಜಿತಳಾದ ಸುಭ ತಾನೂ ನಿಷ್ಕಲ್ಮಷವಾದ ಮೋಹಕ ನಗೆ ನಕ್ಕಳು. ತನ್ನ ಪುಟ್ಟ ಪರ್ಸ್‌ನಿಂದ ಒಂದು ಪತ್ರವನ್ನು ಕಿರಣನ ಕೈಗಿತ್ತು ಓದು ಎಂದು ಸಂಜ್ಞೆ ಮಾಡಿದಳು. ಕಿರಣ ಮೋಡಿಗೊಳಗಾದಂತೆ ಓದತೊಡಗಿದ.

*ಪ್ರೀತಿಯ ಕಿರಣ್,*
*ನಿನ್ನಂತಹ ಅಪ್ಪಟ ಅಪರಂಜಿಯನ್ನು ನಾನು ಇದುವರೆಗೂ ಕಂಡಿಲ್ಲ. ನನಗೆ ನಿನ್ನ ಮನಸ್ಸಿನ್ನಲ್ಲಿ ಇರುವುದೆಲ್ಲ ಚೆನ್ನಾಗಿ ತಿಳಿದಿದೆ. ನೀನು ನನ್ನಿಂದ ಓಡಿ ಹೋದರೂ ನಾನೇಕೆ ಇಲ್ಲಿ ಬಂದಿದ್ದೇನೆ ಎಂದು ಯೋಚಿಸುತ್ತಿರಬೇಕಲ್ಲವೆ? ನೀನು ನನ್ನನ್ನು ನೋಯಿಸುವುದಿಲ್ಲ ಎಂಬ ಭರವಸೆ ನನಗಿದೆ ಎಂದು ತಿಳಿಸಲು ನಾನು ಇಲ್ಲಿ ಬಂದಿದ್ದೇನೆ. ನಿನ್ನ ಒಳ್ಳೆಯ ಗುಣಗಳ ಮೇಲೆ ನನಗೆ ಅಪಾರ ಭರವಸೆ ಇದೆ. ಈಗ ನೀನೆ ನಿನ್ನ ಮೇಲೆ ಭರವಸೆ ತಂದುಕೊಳ್ಳಬೇಕು. ಒಬ್ಬ ಒಳ್ಳೆಯ ಮನುಷ್ಯನಾಗಿ ನೀನು ಯಾವ ಮಟ್ಟಕ್ಕೆ ಏರಬಲ್ಲೆ ಎಂಬುದು ನಿನಗೆ ತಿಳಿದಿಲ್ಲ. ನಾವಿಬ್ಬರು ಜೊತೆಯಾದರೆ ಜೀವನದಲ್ಲಿ ಏನು ಬೇಕದರೂ ಎದುರಿಸಬಹುದು. ನನ್ನನ್ನು ನಂಬು. ನಿನ್ನ ಜೀವನದಲ್ಲಿ ಸಾರ್ಥಕತೆಯನ್ನು ಹೊಂದುವ ಈ ಸುಮಹೂರ್ತದಲ್ಲಿ ಹೆಜ್ಜೆ ಹಿಂದಿಡಬೇಡ.*

*ಮಿಕ್ಕಿದ್ದು ನಿನಗೆ ಬಿಟ್ಟಿದ್ದು!*

*ಇತಿ ಪ್ರೀತಿಯಿಂದ*
*ಸುಭಾ*

ಇದನ್ನು ಓದಿ ಕಿರಣನಿಗೆ ಒಮ್ಮೆಲೇ ಹೊರೆ ಎಲ್ಲ ಇಳಿದಂತಾಯಿತು. ತಾನು ಆಕಾಶದೆತ್ತರ ತಲೆಯೆತ್ತಿ ಮೋಡಗಳ ನಡುವಿನಲ್ಲಿ ಸೂಪರ್‌ಮ್ಯಾನ್‌ನಂತೆ ಓಡಾಡಿದಂತೆ ಭಾಸವಾಯಿತು. ಸುಭಾ ಅವನನ್ನೆ ದಿಟ್ಟಿಸಿ ನೋಡುತ್ತಿದ್ದಳು. ತನ್ನಂತೆ ಪತ್ರ ಕೈಲಿಟ್ಟು ಓಡಿಹೋಗಲಿಲ್ಲ ಎಂಬುದು ಕಿರಣನ ಮನಸ್ಸಿಗೆ ಹೊಳೆಯದೆ ಇರಲಿಲ್ಲ. ಹೀಗೆಯೆ ಒಬ್ಬರನ್ನೊಬ್ಬರು ದಿಟ್ಟಿಸುತ್ತಿದ್ದರು. ಕಿರಣನಿಗೆ ಸುಭಾಳ ಬಗೆಗಿದ್ದ ಆದರ ಅಪಾರವಾಗಿ ಬೆಳೆದಿತ್ತು. ಅವಳು ತನ್ನ ಬಗ್ಗೆ ತೋರಿದ್ದ ನಂಬಿಕೆ ಅವನಿಗೆ ಬೆಟ್ಟದಷ್ಟು ಬಲವನ್ನು ನೀಡಿತ್ತು. ಸಹಜವಾಗಿಯೆ ಚೆಲುವೆಯೂ ಆಗಿದ್ದ ಸುಭಾ ಅವನ ಮುಂದೆ ಕಂಗೊಳಿಸುತ್ತ ನಿಂತಿರಲು ಅವನಿಗೆ ಸುಭಾಳ ಮೇಲೆ ಒಮ್ಮೆಲೆ ಪ್ರೀತಿ ಉಕ್ಕಿ ಬರತೊಡಗಿತ್ತು. ಸುಭಾಳಂತವಳು ತನ್ನ ಬಾಳಸಂಗಾತಿಯಾದರೆ, ತಾನು ಏನನ್ನು ಬೇಕಾದರೂ ಜಯಿಸುವೆ ಎನ್ನುವ ದೃಢ ವಿಶ್ವಾಸ ಅವನಲ್ಲಿ ಮೂಡಿತು. ಆ ಕ್ಷಣದಲ್ಲಿ ಅವನಿಗೆ ಬೇರಾವುದೂ ಬೇಡವೆಂಬಂತೆ ಸುಭಾಳನ್ನೆ ನೋಡುತ್ತಿದ್ದ. ಸುಭಾಳ ಮನಸ್ಸು ಕಿರಣ್ ಏನು ಹೇಳುತ್ತಾನೊ ಎಂದು ತವಕಿಸುತ್ತಿತ್ತು. ಸುಭಾಳ ಶಾಂತ ನೋಟದ ಹಿಂದಿದ್ದ ಕಾತರವನ್ನು ಗ್ರಹಿಸಿದ ಕಿರಣ ಬಾಯಿ ತೆರೆದು ಏನೋ ಹೇಳಬೇಕೆನ್ನುವಷ್ಟರಲ್ಲಿ ಸುಭಾ ತನ್ನ ತೋರ್ಬೆರಳನ್ನು ಅವನ ತುಟಿಗೆ ತಾಕಿಸಿ ಅವನನ್ನು ಸುಮ್ಮನಾಗಿಸಿದಳು.

ಮಾತಿಲ್ಲದೆ ಆ ಮನಗಳೆರಡೂ ಒಂದಾಗಿದ್ದವು.

◈



# ಪರದೇಶದಲ್ಲಿ ಆಪತ್ತು

## ಡಾ|| ಗೀತ ಕೃಷ್ಣಪ್ರಿಯ
**ಕುಪರ್ಟೀನೊ, ಕ್ಯಾಲಿಫೋರ್ನಿಯ, *krishnapri_AT_member.ams.org***

***ಯಾವುದೇ ಔಷಧಿಯಾದರೂ, ಅದರಲ್ಲಿ ಏನೇನಿದೆ, ಇರುವ ಪದಾರ್ಥಗಳು ಅದರಲ್ಲಿರುವ ಉದ್ದೇಶ ಏನು ಎಂದು ತಿಳಿದುಕೊಳ್ಳದೆ ತೆಗೆದುಕೊಳ್ಳುವುದು ಅಪಾಯ ಎಂದು ಕಾಣುತ್ತದೆ.***

ನನ್ನ ತಮ್ಮನ ಸ್ನೇಹಿತ ಒಬ್ಬ, ಇಲ್ಲೇ ಬೇ ಏರಿಯಾದಲ್ಲಿದ್ದಾಗ ನನ್ನನ್ನು ವ್ಯಾವಹಾರಿಕವಾಗಿಯೂ ನೋಡುತ್ತಿದ್ದವನು, ಅಂತರ್ಜಾಲದ ಬುದ್ಬುದ ಒಡೆದ ನಂತರ ಅವನ ಹೊಸ ಕೆಲಸಕ್ಕಾಗಿ ಅಟ್ಲಾಂಟಿಕ್ ಸಾಗರದ ತೀರದ ಒಂದು ಊರಿಗೆ ಹೋಗಿ ನೆಲಸಿದ್ದ. ಆದರೂ ಆಗಾಗ ಫೋನ್ ಮಾಡಿ ಯೋಗಕ್ಷೇಮ ವಿನಿಮಯ ಮಾಡಿಕೊಳ್ಳುತ್ತಿದ್ದ. ಹಬ್ಬದ ದಿನಗಳಲ್ಲಿ ಮಾತನಾಡಿ ಶುಭ ಕೋರುತ್ತಿದ್ದ.

ಕೆಲವು ದಿನಗಳ ಹಿಂದೆ ಅವನು ತುರ್ತಾಗಿ ಶಿಕಾಗೋಗೆ ಹೋದದ್ದು ತಿಳಿಯಿತು. ಹೋದ ಕಾರಣ, ಅವನಿಗೆ ಭಾರತದ ಅವನ ಮನೆಯವರಿಂದ ಫೋನ್ ಬಂದು, ಅವನ ೫೦ ವರ್ಷ ವಯಸ್ಸಿನ ಅಣ್ಣನವರು, ಆಗಾಗ ಶಿಕಾಗೋಗೆ ವ್ಯವಹಾರಕ್ಕಾಗಿ ಬರುತ್ತಿದ್ದವರು, ಶಿಕಾಗೋನಲ್ಲೇ ಇದ್ದಕ್ಕಿದ್ದ ಹಾಗೆ ಸಖತ್ ಖಾಯಿಲೆ ಬಿದ್ದ  ಸಮಾಚಾರ ತಿಳಿದದ್ದು. ಯಾವ ಆಸ್ಪತ್ರೆ, ಯಾರು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು, ಒಂದೂ  ಮೊದಲು ತಿಳಿಯಲಿಲ್ಲವಂತೆ. ಅವನ ಸ್ನೇಹಿತ ಒಬ್ಬ ಅವನು ಅಲ್ಲಿ ಹೋಗುವಷ್ಟರಲ್ಲಿ ಹತ್ತಾರು ಆಸ್ಪತ್ರೆಗಳಿಗೆ ಫೋನ್ ಮಾಡಿ ಅಣ್ಣನವರನ್ನು ಅವರ ಸಹೋದ್ಯೋಗಿ ಒಬ್ಬರು ಯಾವ ಆಸ್ಪತ್ರೆಗೆ ಸೇರಿಸಿದ್ದರು ಎನ್ನುವುದನ್ನು ಕಂಡುಹಿಡಿದಿದ್ದ.

ಶಿಕಾಗೋಗೆ ಹೋದ ನಂತರ, ಅವನ ಅಣ್ಣನವರಿಗೆ ಇದ್ದಕ್ಕಿದ್ದ ಹಾಗೆ ಪ್ರಜ್ಞೆ ತಪ್ಪಿತೆಂದೂ, ಪುನಃ ತಿಳಿವು ಬಂದಾಗ ಅವರ ಸಹೋದ್ಯೋಗಿ ಅವರನ್ನು ಎಮರ್ಜೆನ್ಸಿ ರೂಮಿಗೆ ಕರೆದುಕೊಂಡು ಹೋದರೆಂದೂ ತಿಳಿಯಿತು. ಎಮರ್ಜೆನ್ಸಿ ರೂಮಿಗೆ ಹೋದಾಗ ಅವರಿಗೆ ಇನ್ನೂ ಪೂರ್ತಿ ಎಚ್ಚರವಿರಲಿಲ್ಲ. ತಬ್ಬಿಬ್ಬಾದ ಸ್ಥಿತಿಯಲ್ಲೇ ಇದ್ದ ಅವರಿಂದ ವೈದ್ಯರಿಗೆ ಉಪಯೋಗಕ್ಕೆ ಬರುವಂತಹ ಹಿನ್ನೆಲೆ ಏನೂ ತಿಳಿದುಕೊಳ್ಳಲು ಆಗಲಿಲ್ಲ.

ವೈದ್ಯರು ಅವರಿಗೆ ತಕ್ಷಣ ಸ್ಥಿಮಿತಕ್ಕೆ ತರಲು ಬೇಕಾದ ಚಿಕಿತ್ಸೆ ನಡೆಸಿ, ಆಸ್ಪತ್ರೆಗೆ ಸೇರಿಸಿಕೊಂಡರು. ಪ್ರಜ್ಞೆ ತಪ್ಪಿದ ಕಾರಣ ತಿಳಿಯದೆ ಇದ್ದದ್ದರಿಂದಲೂ, ಅದಕ್ಕೆ ಒಂದು ಸಲ ಔಷಧ ಕೊಡಲು ಆರಂಭಿಸಿದರೆ ನಂತರ ಸುಮಾರು ದಿವಸ ವಾಹನ ನಡೆಸುವುದಕ್ಕೆ ತೊಂದರೆಯಾಗುವುದರಿಂದಲೂ, ಆ್ಯಂಟಿ~ಕನ್ವಲ್ಸೆಂಟ್ ಔಷಧಿಗಳನ್ನು ಕೊಡಲು ಆರಂಭಿಸಲಿಲ್ಲ. ಆಗ ತಾನೇ ಭಾರತದಿಂದ ಬಂದಿದ್ದರಿಂದ ಮಲೇರಿಯವೋ, ಮೆನಿಂಜೈಟಿಸ್ಸೋ ಆಗಿರಬಹುದು ಎಂದು ಊಹಿಸಿದರು. ಕುಷ್ಠರೋಗ ಇದ್ದರೂ ಇರಬಹುದೇನೋ ಎಂದುಕೊಂಡು ಇವೆಲ್ಲಕ್ಕೂ ಪರೀಕ್ಷೆ ಮಾಡಲು ಪ್ರಾರಂಭಿಸಿದರು. ತಕ್ಷಣ ಆ್ಯಂಟಿಬಯಾಟಿಕ್ಕುಗಳನ್ನು ಕೊಟ್ಟು, ರಕ್ತನಾಳಕ್ಕೆ ನೇರವಾಗಿ ದ್ರವ್ಯ ಹರಿಸಿ, ಅನಿಮಿಯಕ್ಕಾಗಿ ರಕ್ತದಾನ ಕೂಡ ಮಾಡಿದರು.

ಮಾರನೆಯ ದಿನ ಅವರು ಮತ್ತೊಮ್ಮೆ ಪ್ರಜ್ಞೆ ತಪ್ಪಿದ ನಂತರ ಆ್ಯಂಟಿ~ಕನ್ವಲ್ಸೆಂಟ್ ಔಷಧಿಗಳನ್ನು ಆರಂಭಿಸಿದರು. ಅವರ ರೋಗ ವೈದ್ಯರಿಗೆ ಇನ್ನೂ ಒಗಟಾಗಿಯೇ ಇದ್ದಿತು. ಸಧ್ಯಕ್ಕೆ ವೈರಲ್ ಮೆನಿಂಜೈಟಿಸ್ ಇರಬಹುದು ಎಂದು ನಿರ್ಧರಿಸಿಕೊಂಡು, ಅದರ ಪ್ರಕಾರ ಚಿಕಿತ್ಸೆ ಮಾಡುವುದಾಗಿ ಇಟ್ಟುಕೊಂಡರು.

ಅಷ್ಟರಲ್ಲಿ ಈ ಒಗಟನ್ನು ಬಿಡಿಸಲು ಒಂದು ಸುಳಿವು ದೊರಕಿತು! ಮಲೇರಿಯ ಇದೆಯೋ ಇಲ್ಲವೋ ನೋಡಲು ಕಳಿಸಿದ್ದ ರಕ್ತದ ಆಲೇಪನವನ್ನು ಒಬ್ಬ ಬುದ್ಧಿವಂತ ಲ್ಯಾಬಿನ ತಂತ್ರಜ್ಞೆ ನೋಡುತ್ತಿದ್ದಾಗ, ಅವಳಿಗೆ ಒಂದಷ್ಟು ಸಂದರ್ಭಗಳಲ್ಲಿ ಮಾತ್ರ ಕಾಣುತ್ತಿದ್ದ ಒಂದು ಜೀವಕಣಗಳ ಬದಲಾವಣೆ ಕಣ್ಣಿಗೆ ಬಿದ್ದಿತು. ಈ ಸಂದರ್ಭಗಳಲ್ಲಿ ಒಂದು, ಸೀಸ ಮೈ ಸೇರುವುದು. ತಕ್ಷಣ ರೋಗಿಯ ಮೈಯಲ್ಲಿನ ಸೀಸದ ಪ್ರಮಾಣವನ್ನು ಕಂಡುಹಿಡಿಯುವ ಪರೀಕ್ಷೆಗಳನ್ನು ನಡೆಸಿದರು. ಸೀಸದ ಪ್ರಮಾಣ ೧೬೫ ಎಂದು ತಿಳಿಯಿತು. ಅರೋಗಿ ವಯಸ್ಕರಲ್ಲಿ ಇದರ ಗರಿಷ್ಠಮಿತಿ ೨೫.

ಸಾಮಾನ್ಯವಾಗಿ ಸೀಸ ಮನುಷ್ಯರ ಮೈಸೇರುವುದು, ಗೋಡೆ, ಬಾಗಿಲುಗಳಿಗೆ ಬಳಿಯುವ ಒಂದು ರೀತಿಯ ಬಣ್ಣಗಳ ಮೂಲಕ. ಅದೂ ಚಿಕ್ಕ ಮಕ್ಕಳು, ಹಳೆಯ ಮನೆಗಳಲ್ಲಿ ಈ ಬಣ್ಣ ಗೋಡೆಗಳಿಂದ ಹಳೆಯದಾಗಿ ಕಿತ್ತುಬಂದಾಗ ತಿಳಿಯದೆ ಬಾಯಿಗೆ ಹಾಕಿಕೊಳ್ಳುವುದರಿಂದ. ಈ ವಿಷಯ ತಿಳಿದ ನಂತರ ಈ ಬಣ್ಣಗಳ ತಯಾರಿಕೆಯಲ್ಲಿ ಸೀಸ ಬಳಸಬಾರದು ಎಂಬ ಕಾನೂನುಗಳು ಬಂದು, ಈ ಮೂಲಕ ಸೀಸ ಮೈಸೇರುವುದು ಕಡಿಮೆಯಾಗಿದೆ. ಇನ್ನೊಂದು ರೀತಿ ಮೈಸೇರುವುದು, ಪಿಂಗಾಣಿ ತಟ್ಟೆ, ಕಪ್ಪುಗಳ ತಯಾರಿಕೆಯಲ್ಲಿ ಸೀಸ ಬಳಸುವುದರಿಂದ. ಈ ಬಳಕೆಯೂ ಈಗ ಅಮೆರಿಕದಲ್ಲಿ ನಿಂತಿದೆ. ಆದರೆ ಇಲ್ಲನಷ್ಟು ಕಾನೂನಿನ ಪ್ರಾಬಲ್ಯವಿರದ ದೇಶಗಳಲ್ಲಿ ಇನ್ನೂ ಚಾಲ್ತಿಯಲ್ಲಿದೆಯಂತೆ.

ಶಿಕಾಗೋನಲ್ಲಿ ಚಿಕಿತ್ಸೆ ನಡೆಸುತ್ತಿದ್ದ ವೈದ್ಯರು ರೋಗಿ ಈ ರೀತಿಯ ಪಿಂಗಾಣಿ ತಟ್ಟೆ, ಬಟ್ಟಲು ಬಳಸುತ್ತಿದ್ದನೇನೋ, ಅವರ ಭಾರತದ ಮನೆಯ ಗೋಡೆಯ ಬಣ್ಣದ ತುಣುಕುಗಳು ಉಸಿರಾಡುವಾಗ ಅವರ ಮೈಹೊಕ್ಕು ಅವರ ಈ ಸ್ಥಿತಿಗೆ ಕಾರಣವಾದವೋ ಎಂದೆಲ್ಲಾ ಊಹಿಸಲಾರಂಭಿಸಿದರು.

ನನ್ನ ತಮ್ಮನ ಸ್ನೇಹಿತ ಇದೆಲ್ಲಾ ನಡೆಯುತ್ತಿದ್ದಾಗ, ದಿನವೂ ನನಗೆ ಏನಾಗುತ್ತಿದೆ ಎಂದು ತಿಳಿಸಿ ನನ್ನ ಸಲಹೆ ಕೇಳುತ್ತಿದ್ದ. ಅಲ್ಲಿನ ವೈದ್ಯರಿಗೂ ನನ್ನ ಪರಿಚಯ ಮಾಡಿಕೊಟ್ಟು, ಅವರೊಡನೆ ಆಗಾಗ ವಿಚಾರವಿನಿಮಯ ಮಾಡಿಸುತ್ತಿದ್ದ. ನನಗೆ ಈ ಹೊಸ ಸಂಗತಿ ತಿಳಿದ ತಕ್ಷಣ ಒಂದೆರಡು ತಿಂಗಳ ಹಿಂದೆ ಜರ್ನಲ್ ಅಫ್ ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ನಿನಲ್ಲಿ ಓದಿದ ಒಂದು ಲೇಖನ ಜ್ಞಾಪಕಕ್ಕೆ ಬಂದಿತು. ಅದರ ಪ್ರಕಾರ ಬಾಸ್ಟನ್ ನಗರದ ಸುತ್ತುಮುತ್ತಲ ಭಾರತದ ಅಂಗಡಿಗಳಲ್ಲಿ ಕೊಂಡುಕೊಂಡ ಆಯುರ್ವೇದದ ಔಷಧಿಗಳು ಕೆಲವಲ್ಲಿ ಶೇಕಡ ೨೫ರಷ್ಟು ಸೀಸ ಕಂಡುಬಂದಿತ್ತು. ಅದರ ವಿಚಾರ ಆ ವೈದ್ಯರಿಗೆ, ನನ್ನ ತಮ್ಮನ ಸ್ನೇಹಿತನಿಗೆ ಹೇಳಿದೆ. ಅವನು, ತಕ್ಷಣ ಅವನ ಅಣ್ಣನವರ ಸೂಟ್‌ಕೇಸು ತೆಗೆದು ನೋಡಿದ. ಅದರಲ್ಲಿ ೫ ಬಾಟಲು ಆಯುರ್ವೇದದ ಔಷಧಗಳು ಸಿಕ್ಕವು. ಅವನ್ನು ತಕ್ಷಣ ಪರೀಕ್ಷೆಗೆ ಕಳಿಸಿದರು. ಅವುಗಳಲ್ಲಿ ಕೆಲವಲ್ಲಿ ಸೀಸ ಇದ್ದದ್ದು ತಿಳಿಯಿತು.



ರೋಗಿಗೆ ಸೀಸವನ್ನು ರಾಸಾಯನಿಕವಾಗಿ ಕಟ್ಟಿಕೊಂಡು ಮೂತ್ರದ ಮೂಲಕ ಮೈಯಿನ ಹೊರಗೆಹಾಕುವ ಔಷಧ ಕೊಡಲು ಪ್ರಾರಂಭಿಸಿದರು. ಆಸ್ಪತ್ರೆಗೆ ಸೇರಿಸಿದ ಕಾರಣದಿಂದಲೇ ಉಂಟಾದ ಒಂದೆರಡು ತೊಡಕುಗಳುಂಟಾದರೂ, ಅವರ ಸ್ಥಿತಿ ನಿದಾನವಾಗಿ ಉತ್ತಮವಾಯಿತು. ಆಸ್ಪತ್ರೆ ಬಿಟ್ಟಾಗ ನಡೆಸಿದ ಪರೀಕ್ಷೆಯ ಪ್ರಕಾರ ಸೀಸದ ಪ್ರಮಾಣ ೧೮ ಆಗಿತ್ತು.

ಈ ಸಂಗತಿ ಆಯುರ್ವೇದದ ಔಷಧಗಳನ್ನು ಬಳಸುವಾಗ ಎಚ್ಚರಿಕೆಯಿಂದಿರಬೇಕಾದ ಅವಶ್ಯಕತೆಯನ್ನು ತೋರಿಸುತ್ತದೆ. ಅಮೆರಿಕದಲ್ಲಿ, ಭಾರತದಲ್ಲಿ ಕೊಳ್ಳುವ ಈ ಔಷಧಗಳಲ್ಲಿ, ಸೀಸದ, ಪಾದರಸದ ಪ್ರಮಾಣ ಹೆಚ್ಚಾಗಿರುವ ಸಂಭವ ಇದೆ. ಯಾವುದೇ ಔಷಧಿಯಾದರೂ, ಅದರಲ್ಲಿ ಏನೇನಿದೆ, ಇರುವ ಪದಾರ್ಥಗಳು ಅದರಲ್ಲಿರುವ ಉದ್ದೇಶ ಏನು ಎಂದು ತಿಳಿದುಕೊಳ್ಳದೆ ತೆಗೆದುಕೊಳ್ಳುವುದು ಅಪಾಯ ಎಂದು ಕಾಣುತ್ತದೆ.

*(ಕನ್ನಡದಲ್ಲಿ ಬರೆದದ್ದು: ಹಂ. ಕ. ಕೃಷ್ಣಪ್ರಿಯ)*

◈



*ಲಾಸ್‌ಏಂಜಲೀಸ್ ನಗರದಲ್ಲಿ, ನಗರದ ಜನಸಂಖ್ಯೆಯ ಮೂರು ಪಟ್ಟು ವಾಹನಗಳಿವೆ!*

# ಅಮೇರಿಕನ್ ಮೇಯ್ಡ್

*ಇಲ್ಲಿ ಎಲ್ಲ ಸೌಕರ್ಯಗಳಿದ್ದು ಒತ್ತುಗುಂಡಿಯ ಜೀವನವಾಗಿದ್ದರೂ ಮುಸುರೆ ತಿಕ್ಕುವ, ಮನೆ ಗುಡಿಸುವ, ಬಟ್ಟೆಗಳನ್ನು ಒಗೆಯುವ ಅಡಿಗೆ ಮಾಡುವ ಕೆಲಸಗಳನ್ನು ಅವರವರೇ ಮಾಡಬೇಕಲ್ಲವೇ?*

**ಅಶ್ವತ್ಥ ಎನ್. ರಾವ್**
ಸೇಂಟ್ ಲೂಯಿಸ್, ಮಿಸ್ಸೂರಿ, *gsv1415_AT_aol.com*

ಆ ದಿನ ಅನುಪಮಾ ಕೆಲಸ ಮಾಡುವ ಡಿಪಾರ್ಟ್‌ಮೆಂಟ್ ಸ್ಟೋರಿನಲ್ಲಿ ಕ್ರಿಸ್‌ಮಸ್ ಹಬ್ಬದ ಉಡುಗೊರೆಗಳನ್ನು ಕೊಳ್ಳುವ ಜನಗಳ ಸಂಭ್ರಮ, ಸಡಗರಕ್ಕೆ ಮಿತಿಯೇ ಇಲ್ಲ. ಅನುಪಮಾಳಿಗೆ ಉಸಿರಾಡಲೂ ವಿರಾಮವಿಲ್ಲದಷ್ಟು ಕೆಲಸ. ಕೊನೆಗೂ ಕೆಲಸ ಮುಗಿಸಿ ಮನೆಗೆ ಬಂದಾಗ ಸಂಜೆ ಆರು ಘಂಟೆ. ಬಾಗಿಲು ತೆರೆದು ಮನೆ ಒಳಗೆ ಕಾಲಿಟ್ಟದ್ದೇ ತಡ, ತನ್ನ ಪರ್ಸನ್ನು ಅಡಿಗೆಮನೆಯ ಕೌಂಟರ್ ಮೇಲೆಸೆದು ದಿವಾನಖಾನೆಯ ಸೋಫಾದ ಮೇಲೆ ಕುಸಿದಳು. ಬಿಸಿಬಿಸಿ ಕಾಫಿ ಕುಡಿಯಲು ನಾಲಿಗೆ ಬಯಸುತ್ತಿದ್ದರೂ ಎದ್ದು ನೀರು ಕುದಿಸಿ ಕಾಫಿ ಮಾಡುವಷ್ಟು ಚೈತನ್ಯ ಮತ್ತು ಸಹನೆ ಅವಳಿಗಿರಲಿಲ್ಲ. ಸಂಜಯ ಇನ್ನೂ ಬಂದಿರಲಿಲ್ಲ. ಆತ ಸಂಜೆ ಏಳರ ಮುಂಚೆ ಬರುವುದು ಅಪರೂಪ. ಅಡುಗೆಮನೆಯ ಸಿಂಕಿನಲ್ಲಿ ಮುಸುರೆ ಪಾತ್ರೆಗಳ ರಾಶಿ. ಹಸಿದು ಬರುವ ಸಂಜಯನಿಗೆ ರಾತ್ರಿಯೂಟ ತಯಾರಿಸುವ ವಿಚಾರ ಬಂದಾಗ ಅನುಪಮಾಳಿಗೆ ಮತ್ತಷ್ಟು ಆಯಾಸ. ಆ ಆಯಾಸದ ಅರನಿದ್ರೆಯಲ್ಲಿ ಆಕೆಯ ಮನಸ್ಸು ಮದುವೆಗೆ ಮುಂಚಿನ ಕಾಲಕ್ಕೆ ಹಿಂದೋಡಿತು.

ಅನುಪಮಾ ಅಮೇರಿಕಾಕ್ಕೆ ಬಂದು ಆಗಲೇ ಎರಡು ವರ್ಷಗಳಾಯ್ತು. ಆಕೆಗೆ ನೆನ್ನೆ ತಾನೇ ಬಂದಂತೆನಿಸಿತು. ಇಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಒಳ್ಳೆಯ ವರಮಾನ ಬರುವ ಕೆಲಸದಲ್ಲಿದ್ದ ಸಂಜಯ ಮದುವೆಯಾಗಲು ಹೆಣ್ಣನ್ನು ಹುಡುಕಿ ಭಾರತಕ್ಕೆ ಬಂದಿದ್ದ. ಅನುಪಮಾಳನ್ನು ನೋಡಿ ಒಪ್ಪಿಕೊಂಡಾಗ ಆಕೆಯ ತಂದೆತಾಯಿಗಳ ಸಂತೋಷ ಹೇಳತೀರದು. ಅನುಪಮಾ ಕೂಡಾ ಬೆಳೆಯುತ್ತಿರುವಾಗ ಅಮೇರಿಕದಲ್ಲಿನ ಜೀವನದ ಕನಸು ಕಂಡಿದ್ದಳು. ದೊಡ್ಡದೊಡ್ಡ ಕಾರುಗಳು, ಮನೆಗೆಲಸಗಳನ್ನು ಕ್ಷಣಮಾತ್ರದಲ್ಲಿ ನೆರವೇರಿಸುವ ಯಾಂತ್ರಿಕ ಸಲಕರಣೆಗಳು, ಇವನ್ನೆಲ್ಲ ಟಿ. ವಿ.ಯಲ್ಲಿ ನೋಡಿ ಮ್ಯಾಗಜ಼ೀನುಗಳಲ್ಲಿ ಓದಿ ಸೋಜಿಗಪಟ್ಟಿದ್ದಳು. ಈ ರೀತಿಯ ಮಾಯಾಲೋಕದಲ್ಲಿ ಜೀವಿಸುವ ಭವಿಷ್ಯದ ಕನಸು ಕಂಡಿದ್ದಳು. ಆಕೆಯ ಗೆಳತಿಯರು "ನೀನು ಎಷ್ಟು ಅದೃಷ್ಟವಂತೆ, ಕಂಗ್ರ್ಯಾಜ್ಯುಲೇಷನ್ಸ್". ಎಂದು ಅಸೂಯೆಯ ಧ್ವನಿ ತೆಗೆದು ಹೇಳಿದ್ದು ಅವಳಿಗೆ ಒಂದು ರೀತಿ ಅವ್ಯಕ್ತ ಸಂತೋಷ, ತೃಪ್ತಿಯನ್ನು ಕೊಟ್ಟಿತ್ತು.

ಅಮೇರಿಕಾಕ್ಕೆ ಬಂದ ಕೆಲವೇ ದಿನಗಳಲ್ಲಿ ಇಲ್ಲಿಯ ನಿತ್ಯಜೀವನದ ನಿಜಸ್ಥಿತಿ ಅನುಪಮಾಳಿಗೆ ಅರಿವಾಯ್ತು. ಬೆಳಿಗ್ಗೆ ಎಂಟಕ್ಕೆ ಮನೆ ಬಿಟ್ಟರೆ ಸಂಜಯ ಮನೆಗೆ ಬರಲು ಸಂಜೆ ಏಳು ಘಂಟೆ ಆಗುತ್ತಿತ್ತು. ಇಲ್ಲಿ ಎಲ್ಲರೂ ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿರುವುದರಿಂದ ಆಕೆಗೆ ಇನ್ನೂ ಬಹಳ ಜನಗಳ ಪರಿಚಯವಾಗಿರಲಿಲ್ಲ. ಬಂದ ಕೆಲವು ತಿಂಗಳಲ್ಲೆ ಸಂಜಯನನ್ನು ಒತ್ತಾಯಪಡಿಸಿ ಡ್ರೈವಿಂಗ್ ಕಲಿತಿದ್ದಳು. ಮನೆಯಿಂದ ಕೇವಲ ಹತ್ತು ನಿಮಿಷ ದೂರದಲ್ಲಿರುವ ಡಿಪಾರ್ಟ್‌ಮೆಂಟ್ ಸ್ಟೋರಿನಲ್ಲಿ "SALES PERSON WANTED" ಎನ್ನುವ ಜಾಹೀರಾತನ್ನು ಕಂಡು ಪ್ರಯತ್ನಿಸಿನೋಡೋಣ ಎಂದು ಅರ್ಜಿ ಭರ್ತಿಮಾಡಿದ್ದಳು. ಕೆಲಸ ಸಿಕ್ಕಾಗ ಖುಷಿಯೋ ಖುಷಿ. ಸಂಜಯ ಕೆಲಸದಲ್ಲಿದ್ದಾಗ ಬೆಳಿಗ್ಗೆ ಕಾಲ ಕಳೆಯಲು ಅವಕಾಶ. ತನ್ನ ಖರ್ಚಿಗೆ ಹಣ, ಮತ್ತಲ್ಲದೆ ಆ ಸ್ಟೋರಿನಲ್ಲಿ ಆಕೆ ಏನು ಕೊಂಡರೂ ಡಿಸ್ಕೌಂಟಿನ ದರದಲ್ಲಿ ಸಿಗುವುದು!

ಬರುಬರುತ್ತ ಹೊರಗಿನ ಕೆಲಸದಿಂದ ದಣಿದು ಬರುತ್ತಿದ್ದ ಅನುಪಮಾಳಿಗೆ ಮನೆಗೆಲಸದಲ್ಲಿ ಆಸಕ್ತಿ ಕಡಿಮೆಯಾಯ್ತು. ಆಕೆ ಈ ಕೆಲಸಗಳಲ್ಲಿ ಹಿಂದುಳಿದುದನ್ನು ಸಂಜಯನೂ ಗಮನಿಸಿದ್ದ. ಇಲ್ಲಿ ಎಲ್ಲ ಸೌಕರ್ಯಗಳಿದ್ದು ಒತ್ತುಗುಂಡಿಯ ಜೀವನವಾಗಿದ್ದರೂ ಮುಸುರೆ ತಿಕ್ಕುವ, ಮನೆ ಗುಡಿಸುವ, ಬಟ್ಟೆಗಳನ್ನು ಒಗೆಯುವ ಅಡಿಗೆ ಮಾಡುವ ಕೆಲಸಗಳನ್ನು ಅವರವರೇ ಮಾಡಬೇಕಲ್ಲವೇ? ಊರಿನಲ್ಲಿ ಆಕೆಯ ತಂದೆ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರೂ ಮನೆಗೆಲಸಕ್ಕೆ ಆಳುಗಳು, ಅಡಿಗೆ ಮಾಡಲು ಶಾರದಮ್ಮನವರೂ ಇದ್ದರು. ಅಮೇರಿಕಾಕ್ಕೆ ಬಂದು ಆ ಜವಾನರ ಚಾಕರಿಗಳನ್ನೆಲ್ಲ ಅವಳೇ ಮಾಡಬೇಕು. ಅಮೇರಿಕಾದಲ್ಲಿನ ಜೀವನದ ವಿಚಾರದಲ್ಲಿ ಕಲ್ಪಿಸಿಕೊಂಡಿದ್ದ ಕನಸು ಛಿದ್ರಛಿದ್ರವಾಗಿ ಆಕೆಗೆ ತುಂಬಾ ಆಶಾಭಂಗವಾಗಿತ್ತು.

ಮನೆಕೆಲಸಕ್ಕೆ ಮೇಯ್ಡನ್ನು ಇಟ್ಟುಕೊಳ್ಳುವ ವಿಚಾರದಲ್ಲಿ ಅನುಪಮಾ ಸಂಜಯನಿಗೆ ಸೂಕ್ಷ್ಮವಾಗಿ ಸಲಹೆ ಕೊಟ್ಟಿದ್ದಳು, ಚರ್ಚಿಸಿದ್ದಳು, ಗೋಗರೆದು ಕೇಳಿದ್ದಳು. ಕೋಪದಿಂದ ಮುನಿಸಿಕೊಂಡು ಕೆಲವು ದಿನ ಮಾತೂ ಬಿಟ್ಟಿದ್ದಳು. ಸಂಜಯ ಈ ವಿಚಾರದಲ್ಲಿ "ಸಾಧ್ಯವಿಲ್ಲ" ಎಂದು ಸ್ಥಿರವಾದ ನಿಲುವನ್ನು ತೋರಿದ್ದ.

ಸಂಜಯ ಮನೆಗೆ ಬಂದು ಸೋಫಾದಲ್ಲಿ ಕುಳಿತು ಕನಸು ಕಾಣುತ್ತಿದ್ದ ಅನುಪಮಾಳ ಹೆಗಲು ಮುಟ್ಟಿ ಅಲುಗಿಸಿದಾಗ ಮಂಪರಿನಿಂದ ಎಚ್ಚೆತ್ತಳು.

"ಮನೆಗೆ ಯಾವಾಗ ಬಂದೆ? ಕೆಲಸದಿಂದ ಬಹಳ ದಣಿದಂತೆ ಕಾಣುತ್ತದೆ? ತುಂಬಾ ಹಸಿವಾಗುತ್ತಿದೆ, ಏಳು ಊಟ ಮಾಡೋಣ" ಎಂದ. ಎದ್ದು ಆಕಳಿಸುತ್ತ "ನಾನು ಬಂದು ಒಂದು ಘಂಟೆ ಆಗಿರಬೇಕು. ಊಟ ತಯಾರಿಲ್ಲ." ಎಂದಳು. ಇದೇ ಸರಿಯಾದ ಸಂದರ್ಭ ಎಂದು ನಿರ್ಧರಿಸಿ "ನೋಡಿ ಸಂಜಯ್, ಇನ್ನು ಈ ಮನೆಯಲ್ಲಿ ಮನೆಕೆಲಸಕ್ಕೆ ಮೇಯ್ಡ್ ಇಲ್ಲದೇ ನಾವು ಜೀವಿಸಲು ಸಾಧ್ಯವೇ ಇಲ್ಲ. ಊರಿನಲ್ಲಿ ರಾಜಕುವರಿಯಂತಿದ್ದ ನನ್ನನ್ನು ನೀವೇ ಇಲ್ಲಿ ಎಳೆದುಕೊಂಡು ಬಂದದ್ದು. ಇಲ್ಲಿಯ ಜೀವನ ನನಗೆ ಸಾಕಾಗಿ ಹೋಗಿದೆ." ಎಂದು ಕೊನೆಯ ನಿರ್ಧಾರವನ್ನು ಸ್ಪಷ್ಟವಾಗಿ ತಿಳಿಸಿದಳು. "ಹಾಗೇ ಆಗಲಿ ಮಹಾರಾಣಿ, ನಾಳೆಯೇ ಒಬ್ಬ ಮೇಯ್ಡನ್ನು ಹುಡುಕೋಣ. ಈಗ ಊಟಕ್ಕೆ ಪೀಟ್ಜಾ ಆರ್ಡರ್ ಮಾಡಿ ತರಿಸಿದರೆ ಆಯಿತು." ಎಂದಾಗ ಅನುಪಮಾಳಿಗೆ ಆತ ಇಷ್ಟು ಸುಲಭವಾಗಿ ಒಪ್ಪಿದನಲ್ಲ ಎಂದು ಆಶ್ಚರ್ಯ ಮತ್ತು ಸಂತೋಷ ಆಯಿತು.

Yellow Pageನಲ್ಲಿ Maid Service ವಿಭಾಗದಲ್ಲಿ ಜಾಹೀರಾತುಗಳನ್ನು ಓದುತ್ತಿದ್ದಳು ಅನುಪಮಾ. ದೊಡ್ಡ ಅಕ್ಷರಗಳಲ್ಲಿದ್ದ "SUNSHINE MIRACLE MAID SERVICE" ಎಂಬ ಬರಹ ಕಣ್ಣಿಗೆ ಬಿತ್ತು. ಓದಿದಳು, "After we finish cleaning your house, it will be soooo bright you may need sunglasses inside the house!"ಎಂದಿತ್ತು. ಆ ನಂಬರಿಗೆ ಫೋನ್ ಮಾಡಿ ಅಪಾಯಿಂಟ್‌ಮೆಂಟು ತೆಗೆದುಕೊಂಡಳು. ಮರುದಿನ, ಅತ್ಯಂತ ಆಧುನಿಕ ಮಾದರಿಯ ಲಿಮೋಸಿನಿನಂತೆ ಕಾಣುವ ವಾಹನ ಅವಳ ಮನೆ ಎದುರಿಗೆ ಬಂದು ನಿಂತಿತು. ಎತ್ತರವಾಗಿ ನೀಲಿ ಸಮವಸ್ತ್ರ, ಚೂಪು, ಎತ್ತರದ ಹಿಮ್ಮಡಿ ಇರುವ ಪಾದರಕ್ಷೆಗಳನ್ನು ಧರಿಸಿದ್ದ, ವಿಮಾನದಲ್ಲಿ ಆತಿಥ್ಯ ನೀಡುವ ಯುವತಿಯಂತೆ ಕಾಣಿಸುತ್ತಿದ್ದ ಮಹಿಳೆ ಮನೆಬಾಗಿಲು ತಟ್ಟಿದಳು. ಇಂತಹ ವ್ಯಕ್ತಿಯನ್ನು ನಿರೀಕ್ಷಿಸದಿದ್ದ ಅನುಪಮಾ ಆಕೆಯನ್ನು ಬಾಗಿಲು ತೆರೆದು ಮರ್ಯಾದೆಯಿಂದ ಬರಮಾಡಿದಳು. ತನ್ನ "Business Card" ಕೈಗಿಡುತ್ತ ತಾನು "SUNSHINE MIRACLE MAID SERVICE"ನ ಮ್ಯಾನೇಜರ್ ಎಂದು ತನ್ನ ಪರಿಚಯಮಾಡಿಕೊಳ್ಳುತ್ತ ಕೈಕುಲುಕಿ ಕುಳಿತಳು. ಇವಳ ನೌಕರಿಗೆ ವೇತನವೆಷ್ಟು ಎಂದು ತಿಳಿಯಲು ಅನುಪಮಾಳಿಗೆ ತವಕ. ಆಕೆ ಈ ಪ್ರಶ್ನೆ ಕೇಳಲು ಬಾಯಿಬಿಡುವದಕ್ಕೆ ಮುಂಚೆಯೇ ಆ ಯುವತಿ ತನ್ನ ಬ್ರೀಫ್‌ಕೇಸಿನಿಂದ ನೋಟ್‌ಪ್ಯಾಡ್ ತೆಗೆದು ತನ್ನದೇ ಪ್ರಶ್ನಾವಳಿಗಳನ್ನು ಕೇಳಲು ಪ್ರಾರಂಭಿಸಿದಳು.

"How many are in the house? Occupation? Ages? Annual Income?" ಮುಂತಾದ ವೈಯುಕ್ತಿಕ ಪ್ರಶ್ನೆಗಳಲ್ಲದೆ "How big is your House? How many rooms? How many bath-rooms? How old is the house?" ಎನ್ನುವ ಪ್ರಶ್ನೆಗಳು. ಇದಕ್ಕೂ ಮುಂದೆ ಹೋಗಿ, "Can you give names of references and character witnesses?" ಎಂದಾಗ ಈಕೆಯ ಪ್ರಶ್ನೆಗಳು ಅತಿ ಮಿತಿಮೀರಿದವು ಎಂದು "I am not applying for a loan nor for the Citizenship. We are just looking for a maid here." ಎಂದು ಅನುಪಮಾ ಗದರಿಸಿದಳು. ಆಗ ಆಕೆ, "I am sorry if you are offended. We choose our clients very carefully. We will deliberate on your application and I will let you know in 5 business days whether you qualify for our services. Good day!" ಎಂದು ಎದ್ದು ಹೊರಟಳು. "ಮನೆಯಲ್ಲಿರುವ ಒಡವೆ, ಸಾಮಗ್ರಿಗಳನ್ನು ಮಾರಿ ಮನೆ ಖಾಲಿ ಮಾಡಿ ಈಕೆಯ ಸಂಬಳ ಕೊಟ್ಟ ನಂತರ ಮನೆ ಶುಭ್ರವಾಗಿ ಕಾಣುವುದಲ್ಲದೆ ಮತ್ತೇನು?" ಎಂದು ಮನಸ್ಸಿನಲ್ಲಿ ಗೊಣಗುಟ್ಟುತ್ತ ಅನುಪಮಾ ಆಕೆಯನ್ನು ಬೀಳ್ಕೊಟ್ಟಳು.

ಮತ್ತೆ ಕೆಲವು ಅಭ್ಯರ್ಥಿಗಳನ್ನು ಮುಖೇನ ಮಾತನಾಡಿ ತನ್ನ ಮನೆಕೆಲಸಕ್ಕೆ ಸೂಕ್ತವಾಗುವಂತಹ ಗುಣಗಳಿರುವುದೇ ಎಂದು ಪರಿಶೀಲಿಸಿದಳು. ಅವರಲ್ಲಿ ಸಂಜಯನ ಸಹೋದ್ಯೋಗಿಯ ಸಲಹೆಯಂತೆ ಬಂದಿದ್ದ ಯುವತಿ ಒಬ್ಬಳು. ಆ ಯುವತಿ ತನಗೆ ಮನೆಕೆಲಸ ಮಾಡುವ ಅನುಭವವೇನೂ ಇಲ್ಲದಿದ್ದರೂ ಕಾಲೇಜ್ ವಿದ್ಯಾಭ್ಯಾಸಕ್ಕೆ ಸಹಾಯವಾಗಲು ಹಣ ಸಂಪಾದಿಸುವ ಉದ್ದೇಶದಿಂದ ತಾನು ಬಂದಿರುವುದೆಂದು ಮುಚ್ಚುಮರೆಯಿಲ್ಲದೆ ತಿಳಿಸಿದಳು. ತೆಳ್ಳಗೆ ಬೆಳ್ಳಗೆ ಇದ್ದ ಈ ಸುಮಾರು ೨೦ ವರ್ಷದ ನೀಲಿಗಣ್ಣಿನ ರೂಪದರ್ಶಿಯಂತೆ ಕಾಣುವ ಹೆಣ್ಣು, ತನ್ನ ಬಂಗಾರದಂತಹ ಕೇಶರಾಶಿಯನ್ನು ಹಿಂದೆ ತಳ್ಳುತ್ತ ಮಾತನಾಡುತ್ತಿರುವುದನ್ನು

ಕಣ್ಣು ಮಿಟಕಿಸದೆ ಜೊಲ್ಲು ಸುರಿಸುತ್ತ, ಬಾಯಿ ಬಿಟ್ಟು ನೋಡುತ್ತಿದ್ದ ಸಂಜಯನನ್ನು ಅನುಪಮ ಗಮನಿಸದೇ ಇರಲಿಲ್ಲ. ಬೇಸಿಗೆ ರಜೆಯ ವೇಳೆಯಲ್ಲಿ ಬೇಕಾದರೆ ಮನೆಯಲ್ಲೇ ಇದ್ದು ದಿನ ಪೂರ್ತಿ ಅನುಪಮಾಳ ಮನೆಗೆಲಸಕ್ಕೆ ನೆರವಾಗಲು ಸಿದ್ಧ ಎಂದೂ ತಿಳಿಸಿದಳು. ಬೇಸಿಗೆಯಲ್ಲಿ ಭಾರತಕ್ಕೆ ಭೇಟಿ ಮಾಡಲು ಹೋಗಬೇಕೆಂದು ಯೋಚಿಸುತ್ತಿದ್ದ ಅನುಪಮಾ, ಸಂಜಯನನ್ನು ಈ ಯುವತಿಯೊಂದಿಗೆ ಬಿಟ್ಟು ಹೊರಡುವಂತಹ ಸಂದರ್ಭ ಎಂದೂ ಆಗದು, ಎಂದುಕೊಳ್ಳುತ್ತ, "Sorry, we are looking for someone with experience. Try your luck elsewhere. Good luck." ಎಂದು ಬಾಗಿಲು ತೋರಿಸಿದಳು.

ಮತ್ತೊಬ್ಬ ೪೦ ವರ್ಷದ ಮಹಿಳೆ, ಗಂಡ ಕೆಲಸವಿಲ್ಲದ ಹೆಂಡಕುಡುಕ, ಸೇರಿನಿಂದ ಚಟಾಕಿನವರೆಗೆ ಆರು ಮಕ್ಕಳು. ಮಜೂರಿ ಎಷ್ಟೇ ಕೊಡಿ ಪರವಾಗಿಲ್ಲ ಎಂದಳು. ಹಾಗೆ ಯೋಚಿಸಿ ಈಕೆಯೊಬ್ಬಳನ್ನು ಮನೆಯಲ್ಲಿ ಬಿಡಬೇಕಾಗಿ ಬಂದರೆ ಅದು 'Security risk' ಎಂದು ಆಕೆಗೆ "Good Bye" ಎಂದಳು.

ಕೆಲಸ ಕೇಳಿ ಬಂದ ಮತ್ತೊಬ್ಬಳಿಗೆ ೬೫ ವರ್ಷ. ಕುಗ್ಗಿ, ಬಗ್ಗಿ ನಡೆಯುತ್ತಿದ್ದಳು. ಕೈಗಳ ಆಕಾರ ನೋಡಿದರೇ ಗೊತ್ತಾಗುತ್ತಿತ್ತು ಅರ್ಥ್‌ರೈಟಿಸ್ ಇದೆ ಎಂದು. ಈ ಸೊರಗಿ ಹೋಗಿರುವ ಹೆಂಗಸಿಗೆ ಸೀರೆ ಉಡಿಸಿ ಹಣೆಗೆ ಡೈಮ್ ಅಗಲದ ಕುಂಕುಮ ಹಚ್ಚಿದರೆ ತನ್ನ ಅಜ್ಜಿಯಂತೆ ಕಾಣುವಳು. ಇವಳಿಂದ ಮನೆಗೆಲಸ ಮಾಡಿಸಿಕೊಳ್ಳಲು ಅನುಪಮಾಳಿಗೆ ಮನಸ್ಸಾಗಲಿಲ್ಲ. ಮನೆಗೆ ವಾಪಸ್ ಹೋಗಲು ಟ್ಯಾಕ್ಸಿ ಹಣ ಎಂದು ಅವಳ ಕೈಗೆ ೧೦ ಡಾಲರ್ ಕೊಟ್ಟು ಕಳಿಸಿದಳು.

ಕೊನೆಗೆ ಅನುಪಮಾ ನಿರೀಕ್ಷಿಸಿದಂತಹ ಮನೆಗೆಲಸದ ಮೇಯ್ಡ್ ಸಿಕ್ಕಳು. ಡಿಪಾರ್ಟ್‌ಮೆಂಟ್ ಸ್ಟೋರಿನಲ್ಲಿ ತನ್ನೊಡನೆ ಕೆಲಸ ಮಾಡುವಳೊಬ್ಬಳು ಈಕೆಯನ್ನು ಶಿಫಾರಸ್ ಮಾಡಿದ್ದಳು. ಸುಮಾರು ೫೦ ವರ್ಷ ವಯಸ್ಸಿನವಳಿರಬೇಕು. ಹೆಸರು ಮರಿಯ. ತಲೆಯಲ್ಲಿ ಅಲ್ಲಲ್ಲಿ ಬಿಳಿ ಕೂದಲು. ಸ್ವಲ್ಪ ಕುಳ್ಳಗಿದ್ದರೂ ಗಟ್ಟಿಮುಟ್ಟಾಗಿರುವಂತೆ ಕಾಣುತ್ತಿದ್ದಳು. ಮೆಕ್ಸಿಕೋ ದೇಶದವಳಾದ್ದರಿಂದ ಅವಳ ಇಂಗ್ಲೀಷ್ ಹರಕುಮುರುಕು. ಬಾಯಿಮಾತಿನಿಂದ ವ್ಯಕ್ತಪಡಿಸಲು ಕ್ಲಿಷ್ಟವಾದ ಭಾವನೆಗಳನ್ನು ಹಲ್ಲು ಬಿಟ್ಟು ನಗುವುದರಲ್ಲಿ ವ್ಯಕ್ತಪಡಿಸುತ್ತಿದ್ದಳು. ಅವಳ ಮಜೂರಿ : ಬೆಳಗ್ಗೆ ೯ರಿಂದ ಮಧ್ಯಾಹ್ನ ೨ರ ವರೆಗಿನ ಕೆಲಸಕ್ಕೆ ಮಿನಿಮಮ್ ವೇಜ್. ಮಧ್ಯಾಹ್ನ ೨ರ ಮೇಲೆ ಇರಬೇಕೆಂದರೆ ಡಬ್ಬಲ್ ಓವರ್ ಟೈಂ. ಮನೆಗೆಲಸದ ಸಾಮಗ್ರಿಗಳನ್ನೂ ಆಕೆಯೇ ಒದಗಿಸುವುದರಿಂದ ಅದಕ್ಕೆ ಪ್ರತ್ಯೇಕವಾಗಿ ಅನುಪಮಾ ಹಣ ಕೊಡುವುದು. ಸಂಭಾವನೆಯನ್ನು ತಿಂಗಳ ಅಂತ್ಯದಲ್ಲಿ ಕೊಟ್ಟರೂ ಪರವಾಗಿಲ್ಲ. ದಯವಿಟ್ಟು ಚೆಕ್ ಬೇಡ. ಪೂರ್ತಿ ಕ್ಯಾಶಿನಲ್ಲಿ ಕೊಡುವುದು (ದೊಡ್ಡಪ್ಪ ಸ್ಯಾಮ್‌ನೊಂದಿಗೆ ಹಣ ಹಂಚಿಕೊಳ್ಳುವುದು ಏಕೆ?) ಎಂದು ನಿರ್ಧಾರವಾಯಿತು. ಈ ಕೆಲಸದ ಕರಾರು ಇತ್ಯರ್ಥವಾದ ಮರುದಿನವೇ ಮರಿಯ ಕೆಲಸ ಪ್ರಾರಂಭಿಸಿದಳು.

ಮರಿಯಳ ಕೆಲಸದ ಮೊದಲ ದಿನ ಅನುಪಮಾಳಿಗೆ ಸಂಭ್ರಮ. ಸಡಗರವೋ ಸಡಗರ. ಬೇಗ ಎದ್ದು ಮನೆಯನ್ನು ಓರಣವಾಗಿರಿಸುವುದರಲ್ಲಿ ಮಗ್ನಳಾಗಿದ್ದಳು. ಮುಸುರೆ ಪಾತ್ರೆಗಳನ್ನು ನೀರಿನಲ್ಲಿ ಕಲಕಿ ಜೋಡಿಸಿದಳು. ಕುರ್ಚಿ, ಟೇಬಲ್ಲುಗಳ ಮೇಲಿನ ಧೂಳನ್ನು ಒರೆಸಿ, ದಿಂಬುಗಳನ್ನು ನೀಟಾಗಿ ಸಜ್ಜುಗೊಳಿಸಿದಳು. ಇನ್ನೂ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ ಸಂಜಯನನ್ನು ಎಬ್ಬಿಸಿ ಹೊದಿಕೆ ಷೀಟುಗಳನ್ನು ನೇರಮಾಡಿದಳು. ಸಂಜಯ ಆಶ್ಚರ್ಯದಿಂದ "ಮನೆಕೆಲಸದವಳು ಈ ದಿನ ಕೆಲಸ ಪ್ರಾರಂಭ ಮಾಡುತ್ತಾಳೆಂದು ಹೇಳಿದ್ದೆಯಲ್ಲ, ಇದೇನು ನೀನೇ ಕೆಲಸಮಾಡುವಂತಿದೆ?" ಎಂದರೆ, "ಇಂಥ ಬ್ರಿಲಿಯೆಂಟ್ ಸಾಫ್ಟ್‌ವೇರ್ ಇಂಜನಿಯರುಗಳಿಗೆ ಇಷ್ಟೂ ತಿಳಿಯದೇ? " ಎಂಬ ಕೊಂಕಿನ ಕುಹಕ ಮರುಪ್ರಶ್ನೆ ಬಂದಿತು. "ಮನೆ ನೀಟಾಗಿದ್ದರೆ ಅವಳಿಗೆ ನಮ್ಮ ಬಗ್ಗೆ ಗೌರವ ಬರಲು ಸಾಧ್ಯ." ಎಂದಳು ಅನುಪಮ. ಅವಳ ತರ್ಕ ಅವನಿಗೆ ಅರ್ಥವಾಗಲಿಲ್ಲ. "ಮರಿಯಾ ನಮ್ಮ ಮನೆಯ ಅತಿಥಿಯೂ ಅಲ್ಲ, ಅವಳು ಹೆಲ್ತ್ ಇನ್ಸ್‌ಪೆಕ್ಟರೂ ಅಲ್ಲ. ಕೇವಲ ಕೆಲಸದವಳು. ಮನೆಗೆಲಸಗಳನ್ನೆಲ್ಲ ನೀನೇ ಮಾಡುವುದಾದರೆ ಅವಳ ಅವಶ್ಯಕತೆ ಏನು?" ಎಂಬುದು ಸಂಜಯನ ಪ್ರಶ್ನೆ. "ಜನಗಳು ನಮ್ಮ ವಿಚಾರ ಏನು ತಿಳಿದುಕೊಳ್ಳುವರೋ ಎನ್ನುವ ಆತ್ಮಗೌರವ ನಿಮಗೆ ಇದ್ದಂತಿಲ್ಲ." ಎಂಬುದು ಉತ್ತರ. ಈ ಅರ್ಥವಿಲ್ಲದ ವಾದಸರಣಿಗೆ ಶರಣಾಗಿ ತಲೆ ಆಡಿಸುತ್ತ ಎದ್ದು ಸ್ನಾನಕ್ಕೆ ಹೊರಟ ಸಂಜಯ.

ಅನುಪಮ ಕೆಲವು ಸಾರಿ ಕೆಲಸಕ್ಕೆ ಹೋಗುವ ಅವಸರದಲ್ಲಿ ಸಿದ್ಧ ಪಡಿಸದೆ ಮನೆ ಬಿಟ್ಟಾಗ ಮರಿಯ ಮನೆಗೆಲಸ ಜಾಸ್ತಿಯಾಯ್ತೆಂದು ಅಸಮಾಧಾನ ವ್ಯಕ್ತಪಡಿಸಿ, ನಿಯಮಿತ ವೇಳೆ ಮೀರಿದ್ದಕ್ಕಾಗಿ ಡಬ್ಬಲ್ ಓವರ್ ಟೈಂ ಚಾರ್ಜ್ ಆಗುವುದೆಂದು ಸೂಚಿಸಿದ್ದಳು. ಕೆಲಸಕ್ಕೆ ಹೋಗದೇ ಮನೆಯಲ್ಲಿ ಇದ್ದ ದಿನಗಳಲ್ಲಿ ಮರಿಯ ಹಗಲುನಿದ್ದೆ ಮಾಡುತ್ತಿದ್ದದ್ದನ್ನು ಅನುಪಮ ನೋಡಿದ್ದಳು. ಆಯಾಸದಿಂದ ವಿಶ್ರಾಂತಿ ಪಡೆಯುತ್ತಿರಬಹುದೆಂದು ಸುಮ್ಮನಾಗಿದ್ದಳು. ಸೆಲ್‌ಫೋನಿನಲ್ಲಿ ಗಂಟೆಗಟ್ಟಲೆ ಮಾತನಾಡುವುದನ್ನು ಕೇಳಿ ಕೆಲಸಕ್ಕೆ ಸೆಲ್‌ಫೋನನ್ನು ತರಬಾರದೆಂದು ನಿಯಮಿಸಿದ್ದಳು. ಸಹಾಯ ಮಾಡಲು ಕರೆತಂದಿದ್ದ ಅಕ್ಕನ ಮಗಳ ಜೊತೆ ಹರಟೆ ಹೊಡೆಯುತ್ತಾ ಕಾಲ ಕಳೆಯುವುದನ್ನು ಕೇಳಿ ಅನುಪಮಾಳಿಗೆ ಮರಿಯಾಳ ಮೇಲೆ ಸಿಟ್ಟು ಬರುತ್ತಿತ್ತು.

ಬರುಬರುತ್ತಾ ಮರಿಯಾಳ ಸೋಶಿಯಲ್ ವೇಳೆ ಜಾಸ್ತಿಯಾಗುತ್ತ ಬಂತು. ಅನುಪಮಾಳಿಗೆ ಮರಿಯಾಳ ಕೆಲಸದ ವೇಳೆಗಳೇ ಡಬ್ಬಲ್ ಓವರ್ ಟೈಂ ಆಗಿ ಪರಿಣಮಿಸಲು ಪ್ರಾರಂಭವಾಯ್ತು.

ತಿಂಗಳ ಕೊನೆ. ಮರಿಯಾ ತನ್ನ ಇಡೀ ತಿಂಗಳ ವೇತನಪಟ್ಟಿಯನ್ನು ಅನುಪಮಾಳ ಕೈಗಿಟ್ಟಳು. ಅದನ್ನು ನೋಡಿ ನಂಬಲಾಗದೆ ತಲೆ ಸುತ್ತಿದಂತಾಗಿ ಹತ್ತಿರದ ಸೋಫಾದ ಮೇಲೆ ತೊಪ್ಪನೆ ಕುಳಿತಳು. ಕಣ್ಣು ಮುಚ್ಚಿ ಮೆಲಕುಹಾಕಿ ಮರಿಯಾಳ ಮಜೂರಿ ಲೆಕ್ಕವನ್ನು ಜೀರ್ಣಿಸಿಕೊಂಡ ಮೇಲೆ ನಿಜಸ್ಥಿತಿ ಲೈಟ್ ಬಲ್ಬಿನಂತೆ ಅವಳಿಗೆ ಹೊಳೆಯಿತು : ಮರಿಯಾಳ ರೆಗ್ಯುಲರ್ ಟೈಂ, ಓವರ್ ಟೈಂ ಮತ್ತು ಮನೆಗೆಲಸದ ಸಾಮಗ್ರಿಗಳ ಖರ್ಚುಗಳೆಲ್ಲ ಸೇರಿ ತನ್ನ ಎರಡು ತಿಂಗಳ ಸಂಬಳಕ್ಕೂ ಮೀರಿತ್ತು! ಅದೂ ತನ್ನ ವರಮಾನದಲ್ಲಿ ಸರ್ಕಾರದ ತೆರಿಗೆ ಮತ್ತು F.I.C.A. ಮುಲಾಜಿಲ್ಲದೇ ಕಡಿದುಕೊಳ್ಳುತ್ತಿದ್ದರು. ಮರಿಯಾಳ ವೇತನ Tax-Free!

ಅನುಪಮಾಳಿಗೆ ಜ್ಞಾನೋದಯವಾಯಿತು. ಇಲ್ಲಿ ಯಾರು ಯಾರ ಸೇವೆ ಮಾಡುತ್ತಿರುವರೆಂದು ಯೋಚಿಸಿದರೆ ಮನೆಕೆಲಸದವಳಿಗೆ ಮನೆ ಸಿದ್ಧಮಾಡಿ, ಮನೆ ಹೊರಗಿನ ಡಿಪಾರ್ಟ್‌ಮೆಂಟ್ ಸ್ಟೋರಿನಲ್ಲಿ ಕತ್ತೆಯಂತೆ ದುಡಿದು ಬರುವ ತಾನು ಜವಾನಿ, ಮನ ಬಂದಂತೆ ಆರಾಮವಾಗಿ ಮನೆಯೊಳಗಿನ ಕೆಲಸ ಮಾಡುವ ಮರಿಯಾಳೆ ಯಜಮಾನಿ ಎನಿಸಿತು.

ಭಾನುವಾರ ಬೆಳಗ್ಗೆ ಸಂಜಯ ಇನ್ನೂ ಹಾಸಿಗೆಯಲ್ಲೇ ಇದ್ದ. ಅನುಪಮಾ ಆಗಲೇ ಎದ್ದು ಕೆಲಸದಲ್ಲಿ ನಿರತಳಾಗಿದ್ದಳು. ಅಡಿಗೆಮನೆಯಲ್ಲಿ ಪಾತ್ರೆಗಳ ಶಬ್ದ. ದಿವಾನಖಾನೆಯಲ್ಲಿ ತಲೆ ಕೊರೆಯುವಂತಹ ಮನೆಗುಡಿಸುವ ಯಂತ್ರದ ಗಲಾಟೆ. ಈ ನಿದ್ರಾಭಂಗದ ಚಟುವಟಿಕೆಯನ್ನು ತಾಳದೆ ಎದ್ದು ಕಿರುಚಿದ, "ಏನು ಮನೆ ಕೆಲಸದವಳಿಗೆ ಸಿದ್ಧಮಾಡುತ್ತಿರುವಂತೆ ಕಾಣುತ್ತಿದೆ. ಮರೆತೆಯಾ ? ಇದು ಭಾನುವಾರ, ಮರಿಯಾಗೆ ಈ ದಿನ ರಜಾ." ಅನುಪಮಾ ಅವನಿಗೆ ಕಾಫಿ ಕೊಡುತ್ತಾ "ಗೊತ್ತು. ಈ ದಿನ ಭಾನುವಾರ, ಮರಿಯಾ ಬರೋಲ್ಲ ಎಂದು. ಮತ್ತೊಂದು ವಿಷಯ, ಮರಿಯಾ ಮತ್ಯಾವ ದಿನವೂ ಈ ಮನೆಗೆ ಕಾಲಿಡುವುದಿಲ್ಲ. ಅವಳನ್ನು ಈ ಮನೆಗೆಲಸದಿಂದ ವಜಾ ಮಾಡಿ ಡಿಪಾರ್ಟ್‌ಮೆಂಟ್ ಸ್ಟೋರ್ ಕೆಲಸಕ್ಕೆ ನಾನು ರಾಜಿನಾಮೆ ನೀಡಿದ್ದೇನೆ. ಈ ಮನೆಯ ಜವಾಬ್ದಾರಿ ಪೂರ್ಣವಾಗಿ ವಾಪಸ್ ಪಡೆದಿದ್ದೇನೆ. ಬೇಗ ಕಾಫಿ ಕುಡಿದು ಏಳಿ. ಅಡಿಗೆಮನೆಯಲ್ಲಿ ಸ್ವಲ್ಪ ಸಹಾಯ ಮಾಡಿ." ಎಂದಳು. ಸಂಜಯನಿಗೆ ಆಶ್ಚರ್ಯ ಮತ್ತು ಸಂತೋಷ. "At your service, ಮಹಾರಾಣಿಯವರೇ, ಅಂದ ಹಾಗೆ Welcome back !" ಎಂದು ಸಂಜಯ ಅವಳನ್ನು ತಬ್ಬಿಕೊಂಡ.

◈



# ಅಹಂ ಬ್ರಹ್ಮಾಸ್ಮಿ


**ಸುಕುಮಾರ್ ಎಸ್. ರಘುರಾಂ**

ಫಾಲ್ಸಮ್, ಕ್ಯಾಲಿಫೋರ್ನಿಯ, *sukumar_raghuram_AT_yahoo.com*


ನಾನು
ಸಾಮ್ರಾಜ್ಯ ವಿಸ್ತರಿಸಿ ವಿಶ್ವವನು ಗೆದ್ದದ್ದು
ಮೂಲೆಮೂಲೆಗಳಲ್ಲು ಅರಮನೆಯ ಕಟ್ಟಿದ್ದು
ಗಡಿಗಳನು ಮೆಟ್ಟುತ್ತ ಒಡೆತನವ ಸಾರಿದ್ದು
ನನ್ನೆದೆಯ ಶಿವನನ್ನು ಪೂಜಿಸಲು ಹರ್ಷಿಸಲು

ನಾನು
ಪರಿಶುದ್ಧ ವೀರ್ಯದಲಿ ಅಣುಗಳನು ಹುಡುಕಿದ್ದು
ಮಾನವನ ಯೌವ್ವನವ ಚಿರಕಾಲ ಬಯಸಿದ್ದು
ಕಲಿಯುಗದ ಋಷಿಗಳಿಗೆ ಅಮರತ್ವ ನೀಡಿದ್ದು
ನನ್ನೆದೆಯ ಹರಿಗಿಷ್ಟ ನೈವೇದ್ಯ ಒದಗಿಸಲು

ನಾನು
ವೇದಗಳ ಓದುತ್ತ ಬ್ರಾಹ್ಮಣರ ಜಯಿಸಿದ್ದು
ಕ್ರಾಂತಿ ಮಂತ್ರವ ಜಪಿಸಿ ಆಧ್ಯಾತ್ಮ ಕುಡಿದದ್ದು
ಮೃತ್ಯುಂಜಯನ ಜೊತೆಗೆ ಪ್ರಳಯದಲಿ ಈಸಿದ್ದು
ನನ್ನೆದೆಯ ದೇವರಿಗೆ ಸಂತೃಪ್ತಿ ಸಿಗಲೆಂದು





# ನಿಂಗಾಳ್ವಾರ್

*. . . ಕೇಳಿಬಂದ ಭಕ್ತಿಗಾನವು ಮೈ ಪುಳಕಿಸುವಂತಿತ್ತು. ತಾವು ಬಾಯಿಪಾಠ ಮಾಡುವುದನ್ನು ಕೇಳಿ ತಿದ್ದುವುದಕ್ಕಾಗಿ ಆಳ್ವಾರರೇ ಅಗೋಚರರಾಗಿ ಹಾಡುತ್ತಿದ್ದಾರೆಯೋ ಎಂಬುದಾಗಿ ಭಾವೋದ್ವೇಗ.*

**ಕಸ್ತೂರಿ**

***ಮರ್ರೆ ಹಿಲ್, ನ್ಯೂ ಜೆರ್ಸಿ,*** ***hnkasturi_AT_sundararanga.com***

ಸುಮಾರು ಎಪ್ಪತ್ತು ವರ್ಷಗಳ ಹಿಂದೆ, ಅಂದರೆ ನಾನು ಬಾಲಕನಾಗಿದ್ದಾಗ ನಡೆದ ಚಿರಸ್ಮರಣೀಯವಾದ ಒಂದು ಘಟನೆ. ನನ್ನ ತಾಯಿಯವರ ತವರೂರಾದ ಶ್ರೀ ಚೆಲುವ ಚೆನ್ನಿಗರಾಯನ ಬೇಲೂರಿನಲ್ಲಿ ವಾಸ. ನನ್ನ ತಂದೆ ತಾತಂದಿರೂ ಸೇರಿ ಸುಮಾರು ಹದಿನೈದು ಜನ ಭಾಗವತರು ಪ್ರತಿದಿನ ಸಾಯಂಕಾಲ ಏಳರಿಂದ ಎಂಟೂವರೆ ಘಂಟೆಯವರಿಗೆ ನಮ್ಮ ಮನೆಯಲ್ಲಿ ಸೇರಿ ಒಬ್ಬ ವಿದ್ವಾಂಸರಿಂದ ಆಳ್ವಾರ್ಗಳು ಹಾಡಿದ ತಮಿಳು ಭಕ್ತಿಸಾಹಿತ್ಯದ ಪಾಶುರಗಳನ್ನು ಹೇಳಿಸಿಕೊಳ್ಳುತ್ತಿದ್ದರು. ತಿಂಗಳಿಗೊಂದಾವರ್ತಿ ಯಾರುಯಾರಿಗೆ ಎಷ್ಟೆಷ್ಟು ಬಾಯಿಪಾಠವಾಗಿರುವುದೆಂದು ತಿಳಿಯುವುದಕ್ಕೆ ಬೇರೆಬೇರೆಯಾಗಿ ಹೇಳಿಸುತ್ತಿದ್ದರು.

ಇಂಥಾ ಒಂದು ಸಾಯಂಕಾಲ ಒಬ್ಬೊಬ್ಬರೂ ಸ್ವಲ್ಪ ಸರಿತಪ್ಪುಗಳನ್ನು ಹೇಳಿ ಮುಗಿಸಿದಾಗ ರಾತ್ರೆ ಒಂಬತ್ತು ಘಂಟೆಗೆ ಬಹಳ ಸುಶ್ರಾವ್ಯವಾದ, ಮಧುರವಾದ ಎತ್ತಿದ ಧ್ವನಿಯಲ್ಲಿ ಮನೆಯ ಹೊರಗಡೆ ಇದೇ ಪಾಶುರಗಳನ್ನು ಹಾಡುತ್ತಿರುವುದು ಕೇಳಿಸಿತು. ಆಗಿನ ಕಾಲದಲ್ಲಿ ಅಲ್ಲಿಯವರಿಗೆ ವಿದ್ಯುದ್ದೀಪವೇನೆಂಬುದು ತಿಳಿದಿರಲಿಲ್ಲ. ಪ್ರತಿ ಮನೆಯಲ್ಲಿಯೂ ಸೀಮೆ ಎಣ್ಣೆಯ ಬುಡ್ಡಿಗಳಿಂದ ಬೆಳಕು ಕಾಣಬೇಕಾಗಿತ್ತು. ರಸ್ತೆಗಳಲ್ಲಿ ಇದೇ ತರಹ ಬುಡ್ಡಿಗಳನ್ನಿಟ್ಟಿದ್ದ ಕಂಬಗಳಿಂದ ಸಿಕ್ಕಿದಷ್ಟು ಪ್ರಕಾಶ. ಬಹಳ ಶಾಂತ ಮತ್ತು ಮೌನ ವಾತಾವರಣ. ಹೀಗಿರುವಾಗ ಕೇಳಿಬಂದ ಭಕ್ತಿಗಾನವು ಮೈ ಪುಳಕಿಸುವಂತಿತ್ತು. ತಾವು ಬಾಯಿಪಾಠ ಮಾಡುವುದನ್ನು ಕೇಳಿ ತಿದ್ದುವುದಕ್ಕಾಗಿ ಆಳ್ವಾರರೇ ಅಗೋಚರರಾಗಿ ಹಾಡುತ್ತಿದ್ದಾರೆಯೋ ಎಂಬುದಾಗಿ ಭಾವೋದ್ವೇಗ.

ಎಲ್ಲಿಂದ ಕೇಳಿಬರುತ್ತಿದೆಯೆಂದು ಕೇಳುವ ಕುತೂಹಲದಿಂದ ಭಾಗವತರೆಲ್ಲರೂ ಬೀದಿಯ ಬಾಗಿಲ ಹೊರಗಡೆ ಬಂದರು. ಅಲ್ಲಿ ಆಗಿನ ಕಾಲದ ಊರಿನ ಎಲ್ಲ ಮನೆಗಳಲ್ಲಿದ್ದಂತೆ ಮನೆಯ ಮುಂದೆ ಒಂದು ಜಗುಲಿ(ಹಜಾರ). ಅಲ್ಲಿ ಜಗುಲಿಯ ಕೊನೆಯಲ್ಲಿ ೬’X೫’X೬’ ಅಳತೆಯ ಒಂದು ಸಣ್ಣ ಕೊಠಡಿ. ಕತ್ತಲಿನಲ್ಲಿ ಗಾನವು ಅಲ್ಲಿಂದ ಹೊಮ್ಮುವಂತಿತ್ತು. ಹತ್ತಿರ ಹೋಗಿ ಇಣುಕಿ ನೋಡಿದಾಗ ಕಂಡಿದ್ದೇನು? ಕತ್ತಲಿನಲ್ಲಿ ಬಾಯಲ್ಲಿ ಅಚ್ಚಬಿಳಿಯ ಹಲ್ಲು, ಹಣೆಯ ಮೇಲೆ ಅದೇ ಬಣ್ಣದ ನಾಮವಿದ್ದ ಶುದ್ಧ ಕಪ್ಪು ಬಣ್ಣದ ವ್ಯಕ್ತಿ. ಅವನು ಮತ್ತಾರೂ ಆಗಿರದೆ ಮನೆ ಕೆಲಸದವನಾದ ೧೮ ವರ್ಷ ವಯಸ್ಸಿನ ನಿಂಗ. ಅವನು ನಮ್ಮ ಮನೆಯ ಊಟವನ್ನೇ ಉಂಡು ಆ ಕೊಠಡಿಯಲ್ಲೇ ಇರುತ್ತಿದ್ದ. ಬಹಳ ಸಾತ್ವಿಕನಾಗಿ ಸದಾ ನಗುಮೊಗದಿಂದ ಕೂಡಿ ಎಲ್ಲರಿಗೂ ಅಚ್ಚುಮೆಚ್ಚಾಗಿದ್ದ.

ಭಾವನಾಲೋಕದಿಂದ ಈ ಲೋಕಕ್ಕೆ ಬಂದು ಭಾಗವತರನ್ನು ನೋಡಿದೊಡನೆ ಹೊರಗೆ ಬಂದು ಎಲ್ಲರಿಗೂ ಸಾಷ್ಟಾಂಗ ನಮಸ್ಕಾರ ಮಾಡಿದ. ಆಶ್ಚರ್ಯದಿಂದ ಅವನನ್ನು ಪ್ರಶ್ನಿಸಿದಾಗ ಈ ರೀತಿ ಹೇಳಿದ. ತಾನು ಪ್ರತಿನಿತ್ಯವೂ ಸಾಯಂಕಾಲದ ಹೊತ್ತಿಗೆ ವಿಷ್ಣುಸಮುದ್ರವೆಂಬ ಸ್ವಲ್ಪವೇ ದೂರದಲ್ಲಿರುವ ಕೊಳದಲ್ಲಿ ಬೆಳಗ್ಗೆಯಲ್ಲದೆ ಎರಡನೆಯ ಸಲ ಸ್ನಾನಮಾಡಿ ಬಂದು, ಅವನ ಕೊಠಡಿಯಲ್ಲಿ ತೂಗುಹಾಕಿದ ಕೇಶವ ದೇವರ ಚಿತ್ರಕ್ಕೆ ನಮಸ್ಕಾರ ಮಾಡಿ, ಒಳಗೆ ಗುರುಗಳೊಡನೆ ಕೂತಿದ್ದ ಭಾಗವತರುಗಳಿಗೆ ಹೊರಗಿನಿಂದಲೇ ಕೈಮುಗಿದು, ದೇವರ ಪಟದ ಮುಂದೆ ಕೂತು, ಗುರುಗಳು ಪಾಠ ಹೇಳುತ್ತಿದ್ದಾಗ ತಾನೂ ಗುನುಗುತ್ತಿದ್ದ. ಕ್ರಮೇಣ ಆಸಕ್ತಿ ಜಾಸ್ತಿಯಾಗಿ ಬೇರೆಯವರಿಗೆ ತೊಂದರೆಯಾಗಬಾರದೆಂದು ಯಾವಾಗಲಾದರೂ ಜನಗಳಿಲ್ಲದ ಸಮಯದಲ್ಲಿ ಕೊಳದ ಹತ್ತಿರ ಹೋಗಿ ಅಲ್ಲಿ ತೃಪ್ತಿಯಾಗುವವರೆಗೂ ಗಟ್ಟಿಯಾಗಿ ಹಾಡುತ್ತಿದ್ದ.

ಮನೆಯಲ್ಲಿ ಕೊಟ್ಟ ಊಟವನ್ನು ಪಾತ್ರೆಗಳಲ್ಲಿ ತೆಗೆದುಕೊಂಡು ಪ್ರತಿಸಲವೂ ದೇವರ ಮುಂದಿಟ್ಟು ನಿವೇದನ ಮಾಡಿ ಪ್ರಾರ್ಥಿಸಿ ಊಟ ಮಾಡುತ್ತಿದ್ದ. ಊಟ ಮಾಡಿದ ಮೇಲೆ ಪಾತ್ರೆಗಳನ್ನು ಕೊಳಕ್ಕೆ ತೆಗೆದುಕೊಂಡು ಹೋಗಿ, ದೇವರ ದ್ವಾದಶನಾಮಗಳನ್ನು ಹೇಳಿಕೊಂಡು ಹುಣಿಸೆಹಣ್ಣು ಮತ್ತು ನೀರಿನಿಂದ ಶುದ್ಧಮಾಡಿ ತಂದಿಡುತ್ತಿದ್ದ.

ಈ ಘಟನೆ ನಡೆದ ದಿನ ಭಾವಪರವಶನಾಗಿ ತನ್ನ ಕೊಠಡಿಯಲ್ಲಿಯೇ ತನಗೇ ಅರಿವಾಗದಂತೆ ಘಟ್ಟಿಯಾಗಿ ಹಾಡುತ್ತಿದ್ದ. ಇಷ್ಟನ್ನು ಹೇಳಿ ಮತ್ತೊಮ್ಮೆ ಸಾಷ್ಟಾಂಗ ನಮಸ್ಕಾರ ಮಾಡಿದ. ಭಾಗವತರುಗಳು "ನಿಂಗಾಳ್ವಾರ್ ತಿರುವಡಿಗಳೇ ಶರಣಂ" ಎಂದು ಮನಸ್ಸಿನಲ್ಲೇ ಅಂದುಕೊಂಡಿರಬಹುದಲ್ಲವೇ?

◈

## ತೃಪ್ತಿ

ಪುಟ್ಟಾರಲ್ಲಿದ್ದ್ ದಪ್ಪದ್ದೆಂಗ್ಸು
ತನ್ನಕ್ಕದಲ್ಲ್ ಡ್ರೈವ್ಮಾಡ್ತಿದ್ದ್
ಕಡ್ಡೀಮೀಸೇ ಗಂಡ್ಸಿಗೆ

ತಿವಿದೂ
ತಿವಿದೂ
ತಿವಿದೂ
ತೋರ್ಸಿದ್ದು:

ತನ್ನಕ್ಕದ್ದಾರಲ್ಲಿದ್ದಿದ್ದೊಂದಪ್ಪದ್ದೆಂಗ್ಸೂ,
ಗಾಳಿ ಹೋಗಿದ್ದ್ ಟೈರ್ರೂ . . .

--ಶ್ರೀವತ್ಸ ದುಗ್ಗಾಪುರ





# ಹಾಸ್ಯಲಹರಿ


**ಡಾ. ಮೀನಾ ಸುಬ್ಬರಾವ್**

ಸಲಿನಾಸ್, ಕ್ಯಾಲಿಫೋರ್ನಿಯ, *subbaraomeena_AT_yahoo.com*


*ನಗುವು ಸಹಜದ ಧರ್ಮ*
*ನಗಿಸುವುದು ಪರ ಧರ್ಮ*
*ನಗುವ ಕೇಳುತ ನಗುವುದತಿಶಯದ ಧರ್ಮ*

ಏಷೋ ಧರ್ಮಃ ಸನಾತನಃ. ಈ ಧರ್ಮ ಸನಾತನವಾಗಿದ್ದೂ, ಸನಾತನ ಕಾಲದಿಂದಲೂ, ಸನಾತನನ (ಶಿವನ) ಜೊತೆಯಿಂದಲೂ ಬಂದಿರುವ "ಮನಸ್ಸಿಗೆ ತಣಿಸುವ ಒಂದು ಮದ್ದು" ಎಂದರೆ ತಪ್ಪಾಗಲಾರದು!

ನಿಮ್ಮ ಧರ್ಮ ಏನೇ ಆಗಿರಲಿ, ಈಗ ಈ ತುಸು ಸಮಯದಲ್ಲಿ ನನ್ನ ಧರ್ಮ ನಗಿಸುವುದಾಗಿದೆ! ನಿಮಗೆ ನಗು ಬಂದಿರಲಿ, ಬಾರದಿರಲಿ, ಅಳುಬಂದಿರಲಿ, ಏನೇ ಆದರೂ ನನ್ನ ಒಂದೊಂದೂ ಐಟೆಮ್ ಮುಗಿದ ತಕ್ಷಣ ನೀವೆಲ್ಲಾ ಧರ್ಮಾನುಸಾರವಾಗಿ ನಕ್ಕರೆ, ಅದು ಹಾಲು ಸಕ್ಕರೆ! ಅದೇ ಸ್ವರ್ಗ! ನಗು ನಗುತಾ ನಲಿ ನಲಿ ಏನೇ ಬಂದರೂ, ಬಾರದಿರಲೂ, ಏನೇ ಆದರೂ, ಆಗದಿರಲು!

ಮೊದಲನೆಯದಾಗಿ, "ಗಂಡಸರು" ಎಂಬ ವಿಷಯದಲ್ಲಿ, ಛೇ. ಛೇ, ಗಂಡಸರು ಅಲ್ಲಪ್ಪಾ "ಹೆಂಗಸರು" ಗಂಡಸರ ದೃಷ್ಟಿಯಲ್ಲಿ, ಸರಿತಾನೆ? ಕಾಲಾನುಸಾರವಾಗಿ, ಗಂಡಸರಿಗೆ "ಹೆಂಗಸರು" ಹೀಗೆ(ಹೇಗೆ) ಕಾಣಿಸುತ್ತಾರೆ.
ನಿಶ್ಚಿತಾರ್ಥ ಆದಮೇಲೆ, ಮದುವೆಗೆ ಮೊದಲು, ಪ್ರೇಮಕ್ಕೆ, ಸ್ನೇಹಕ್ಕೆ ಬರವೇ ಇಲ್ಲ, ಎಲ್ಲೆಲ್ಲೂ ಪ್ರೇಮ, ಎಲ್ಲೆಲ್ಲೂ ಸ್ನೇಹ. ಹೀಗಿರುವಾಗ
ಕಾಣಿಸುವುದು --- "ಪ್ರೇಮಸಖಿ"
ಪೂರಕ ಹಾಡು ---- "ನಾನೂ ನೀನೂ ಜೊತೆ ಇರಲೂ, ಕಾಲದ ನೆನಪೇ ನಮಗಿಲ್ಲಾ"

ಮದುವೆಯಾದ ಹೊಸತು, ಗಂಡನಿಗೆ ಹೆಂಡತಿ ಎಂದರೆ "ಪ್ರಾಣ", ಲೈಫ್ ಫ್ರೆಂಡ್, ಪಾರ್ಟ್ನರ್, ಜೀವನದ ಉದ್ದಕ್ಕೂ ಜೊತೆಯಲ್ಲೇ ಇರುವುದಲ್ಲದೆ ಬೇರೇನಕ್ಕೂ ಅವಕಾಶವೇ ಇಲ್ಲ ಎಂಬ ಸುಳ್ಳು ನಂಬಿಕೆ. ಹೀಗಿರುವಾಗ
ಕಾಣಿಸುವುದು ---"ಪ್ರಾಣಸಖಿ"
ಪೂರಕ ಹಾಡು ----"ಜನುಮ ಜನುಮದಾ ಅನುಬಂಧಾ ಹೃದಯ ಹೃದಯಗಳ ಪ್ರೇಮಾನುಬಂಧಾ"

ಮದುವೆಯಾಗಿ ಕೆಲ ಮಾಸಗಳು ಉರುಳಿರಲು, ಪ್ರೀತಿ ಪ್ರೇಮ ಸ್ನೇಹ ಎಲ್ಲಾ ಸೇರಿ ಜೀವನದ ಪಯಣದಲ್ಲಿ ಪರಿಣಾಮಕಾರಿಯಾಗುವ ಸಮಯವನ್ನು ಹೊತ್ತು ತಂದಿರಲು( ಮಕ್ಕಳು ಮರಿಗಳಾಗೋ ಚಿಂತೆಯಿಲ್ಲದ್ದಾಗ) ಹೆಣ್ಣು (ಹೆಂಡತಿ) ಮೈ ಕೈ ತುಂಬಿಕೊಂಡಿರಲೂ, ಹೀಗಿರುವಾಗ
ಕಾಣಿಸುವುದು --- "ಚಂದಮುಖಿ"
ಪೂರಕ ಹಾಡು ----"ಚಂದ್ರಮುಖಿ, ಪ್ರಾಣಸಖಿ"

"ಮದುವೆಯಾಗಲಿ", "ಮಕ್ಕಳಾಗಲಿ" ಎಂದು ಎಲ್ಲಾ ಹರಸಿದ್ದೆಲ್ಲಾ ನಿಜರೂಪವಾಗಿರಲು, ಮಕ್ಕಳು ಮರಿಗಳೊಡನೆ ಸಾಕಷ್ಟು ಸ್ಟ್ರೆಸ್ಸಿನಿಂದ ಸುಸ್ತಿನಿಂದ ಬಾಳುವೆ ನಡೆಸುತ್ತಿರುವ ಗಂಡಸರಿಗೆ "ಹೆಣ್ಣೇ (ಹೆಂಡತೀನೇ)" ಈ ಎಲ್ಲಾ ಅವತಾರಗಳಿಗೂ ಕಾರಣ ಎಂಬಂತೆ ಇರುವಾಗ
ಕಾಣಿಸುವುದು --- "ಶೂರ್ಪಣಖಿ"
ಪೂರಕ ಹಾಡು --- (ಹೆಂಡತಿಗಾದರೋ ಹೀಗೆ ಹಾಡಬೇಕೆನಿಸಬಹುದು!) ---- "ಸವಿ ನೆನಪುಗಳು ಬೇಕು ಸವಿಯಲೀ ಬದುಕು"

ವರುಷಗಳು ಮುಗಿದಿರಲು (ಮದುವೆಯಾಗಿ), ಶೂರ್ಪಣಖಿಯಿಂದ ಇನ್ನೂ ವಿಚ್ಛೇದನ ಸಿಗಲಿಲ್ಲದಿರಲಾಗಿ, ಸ್ಟ್ರೆಸ್‌ನ ಒತ್ತಡ ಅತಿಯಾಗಿ, ಹೆಂಡತಿಯು (ಹೆಣ್ಣು)
ಕಾಣಿಸುವಳು ಹೀಗೆ --- "ಜ್ವಾಲಾಮುಖಿ"
ಪೂರಕ ಹಾಡು --- "ಕಥೆ ಹೇಳುವೆ, ನನ್ನ ಕಥೆ ಹೇಳುವೆ, ಬಾಳಿನಾ ಪುಟಗಳಲಿ ಕಣ್ಣೀರ ಹನಿಗಳಲಿ ಬರೆದಿರುವ"

(ಇದನ್ನು ಓದುವರಲ್ಲಿ ನನ್ನ ಬೇಡಿಕೆ: ಇದನ್ನು ಬರೆದಿರುವ ಉದ್ದೇಶ "ನೀವೆಲ್ಲಾ ನಗು ನಗುತ್ತಾ ನಿಮ್ಮ ಸ್ಟ್ರೆಸ್‌ಗಳನ್ನು ಕಡಿಮೆ ಮಾಡಿಕೊಂಡು, ಈ ರೀತಿ ಆಗದೆ, ಜಾಗ್ರತೆ ವಹಿಸಿ ಸುಖಾನುಭವಿಗಳಾಗಲಿ." ಎಂದು)

★ ★ ★

ನಮ್ಮ ಎರಡನೆಯ ವಸ್ತು, ಅಲ್ಲಾರೀ, ವಸ್ತುವಿಷಯಾ "ಗಂಡಸರು". ಒಬ್ಬ ಅನುಭವಿ ಗೈನೆಕಾಲಜಿಸ್ಟ್ ತಮ್ಮ ಹೆಂಗಸು ಪೇಶಂಟ್ (ಅಫ್ಕೋರ್ಸ್ ಹೆಂಗಸರು ಪೇಶಂಟ್ಸ್) ಒಬ್ಬರಿಗೆ ಒಂದು ಮೇಜರ್ ಸರ್ಜರಿ ಮಾಡಿ, "ಇನ್ನು ಆರು ವಾರಗಳಲ್ಲಿ ಗಾಯ, ಸೋರ್ನೆಸ್ ಎಲ್ಲಾ ಪೂರ್ಣವಾಗಿ ವಾಸಿಯಾಗುವುದಕ್ಕೆ ಏನೂ ತೊಂದರೆ ಇಲ್ಲಮ್ಮಾ. ಆದರೆ, ನೀವು ಅಲ್ಲಿಯತನಕ ನಿಮ್ಮ ಪತಿರಾಯರಿಗೆ ಹೀಗೆ ಹೇಳಬೇಕಾಗುತ್ತೆ. ದೂರ ದೂರ ಅಲ್ಲೆ ನಿಲ್ಲು ನನ್ನ ದೇವರೇ! ದೂರ ದೂರ ಅಲ್ಲೆ ನಿಲ್ಲು ನನ್ನ ದೇವರೇ." ಎಂದರು. ಅಲ್ಲೇ ಕುರ್ಚಿಯ ಮೇಲೆ ಕುಳಿತಿದ್ದ ಆ ಹೆಂಗಸಿನ ಗಂಡ (ಗಂಡಸು) ಡಾಕ್ಟರ್ ಅನ್ನು ಉದ್ದೇಶಿಸಿ "ಛೇ, ಛೇ, ನೀವು ನಮಗೇ ಹೀಗೆ ಹೇಳಿದ್ರೆ ಹೇಗೆ ಸಾರ್? ನಾವು ಎಮ್.ಎಲ್.ಎ ಕಡೆಯವರು. ಅವಳೇನು ನಡೆಯಬೇಕಾಗಿಲ್ಲ ಡಾಕ್ಟ್ರೆ. ನಾನೇ ಅವಳ ಹತ್ತಿರ ಹೋಗ್ತೀನಿ. ನೀವೇನೂ ಅದರ ಬಗ್ಗೆ ವರಿ ಮಾಡಬೇಡಿ." ಎಂದು ಆಪ್ಟಿಮಿಸ್ಟಿಕ್ ಆಗಿ ನುಡಿದರು.

★ ★ ★

ಮುಂದಿನ ಹೆಡ್ಡಿಂಗ್, ಬಹಳ ಮುಖ್ಯವಾದ ಸ್ಥಾನ-ಮಾನ: "ಹೆಂಡತಿಯ ಸ್ಥಾನ". ಜೋರಾಗಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ ದೀಪುವನ್ನು ನೋಡಿ, ಗೋಪಾಲರಾಯರು ಆತಂಕದಿಂದ "ಯಾಕೋ ದೀಪು ಇಷ್ಟು ಜೋರಾಗಿ ಬಿಕ್ಕಿ ಬಿಕ್ಕಿ ಇವತ್ತು ಅಳುತ್ತಿದ್ದೀಯೆ? ನಿನ್ನ ಹೆಂಡತಿ ಸತ್ತು ಮೂರು ದಿನ ಆಯ್ತು, ಅವತ್ತಿಗಿಂತ ಇವತ್ತು ಜೋರಾಗಿ ಅಳುವುದಕ್ಕೆ ಕಾರಣ ಏನೋ?" ಎಂದು ಕೇಳಿದರು. ದೀಪು ಸಮಾಧಾನ ಮಾಡಿಕೊಂಡು "ನೋಡಿ ಸ್ವಾಮಿ, ಆರು ವರ್ಷದ ಕೆಳಗೆ ನಮ್ಮಪ್ಪ ಸತ್ತಾಗ ಅಕ್ಕಪಕ್ಕದ ಮನೆಯವರೂ, ಊರುಕೇರಿಯವರೂ, ನೆಂಟರೂ ಇಷ್ಟರೂ ಎಲ್ಲಾರೂ ಬಂದು, ಅಳಬೇಡ ಮಗೂ ಏನೂ ಯೊಚ್ನೆ ಮಾಡಬೇಡ ನಾವೆಲ್ಲಾ ನಿನ್ನ ತಂದೆ ಸ್ಥಾನದಲ್ಲಿ ಇರುತ್ತೇವೆ ಅಂದ್ರು. ಆಮೇಲೆ ಮೂರು ವರ್ಷಗಳ ಕೆಳಗೆ ನಮ್ಮಮ್ಮ ಸತ್ತಾಗ, ಎಲ್ಲಾ ಅದೇ ರೀತಿಯಲ್ಲಿ ಬಂದು ಏನು ಯೋಚನೆ ಮಾಡಬೇಡ ಮರಿ "ನಾವೆಲ್ಲಾ ನಿಮ್ಮ ಅಮ್ಮನ ಸ್ಥಾನ ದಲ್ಲಿ ಇರುತ್ತೇವೆ." ಎಂದು ಭರವಸೆ ನೀಡಿದರು. ಆದ್ರೆ ನೋಡಿ ನನ್ನ ಹೆಂಡತಿ ಸತ್ತು ಮೂರು ದಿನಗಳಾಯಿತು ಒಬ್ಬನಾದ್ರೂ, ಒಂದು ನರಪಿಳ್ಳೇನೂ ಬಂದು "ಏನು ಯೊಚನೆ ಮಾಡಬೇಡ ದೀಪು, ನಾನು ನಿನ್ನ ಹೆಂಡತಿ ಸ್ಥಾನದಲ್ಲಿ ಇರುತ್ತೇನೆ." ಅಂತ ಹೇಳಲಿಲ್ಲವಲ್ಲಾ ಗೋಪಾಲರಾಯರೆ." ಎಂದು ಹೇಳುತ್ತಾ ಇನ್ನಷ್ಟು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ. ನೋಡಿದ್ರಾ "ಹೆಂಡತಿ ಸ್ಥಾನ" ಏನ್ ಸಾಮಾನ್ಯದ ಸ್ಥಾನ ಅಲ್ಲಾ ಎಂಬುದು!

★ ★ ★

ನನ್ನ ನೆಕ್ಸ್ಟ್ ಐಟೆಮ್ಮು ವೈದ್ಯ--ವೃತ್ತಿ--ರೋಗ--ರುಜಿನ. ಇದು ಇಲ್ಲದೇ ಹಾಸ್ಯ ಉಂಟೇ ಈ ಜಗದಲ್ಲಿ? ನಾನು ಮೆಡಿಕಲ್ ಕಾಲೇಜ್‌ನಲ್ಲಿದ್ದಾಗ ನನ್ನ ಸಹೋದ್ಯೋಗಿ ಗುರುದತ್ ಆರ್ಮಿ ಮೆಡಿಕಲ್ ಆಫೀಸರ್‌ಗೆ ಅರ್ಜಿ ಸಲ್ಲಿಸಿದ್ದರು.

ಅದಾದ ಕೆಲ ಮಾಸಗಳ ನಂತರ ಅವರನ್ನು ಫಿಸಿಕಲ್ ಎಕ್ಸಾಮ್‌ಗೆ ಮತ್ತು ಎಲ್ಲಾ ರೀತಿಯ ಲ್ಯಾಬ್ ಟೆಸ್ಟ್‌ಗಳಿಗೆ ಕರೆಯಲಾಗಿತ್ತು. ತದನಂತರ ಒಂದು ವರುಷದ ಒಳಗೆ ಇಂಡಿಯನ್ ಆರ್ಮಿ ಗುರುದತ್ ಅವರನ್ನು ಹುದ್ದೆಗೆ ನಿರಾಕರಿಸಿ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಪತ್ರ ಕಳಿಸಿತು. ಈ ಪತ್ರವನ್ನು ಕರ್ನಾಟಕ ಸರ್ಕಾರ ಕನ್ನಡಕ್ಕೆ ಅನುವಾದಿಸಿದ ರೀತಿ ಹೀಗಿತ್ತು. "ಪ್ರಿಯ ಗುರುದತ್ ಅವರೆ, ನೀವು ಇತ್ತೀಚೆಗೆ ಸಲ್ಲಿಸಿದ ಆರ್ಮಿ ಮೆಡಿಕಲ್ ಆಫೀಸರ್ ಹುದ್ದೆಯ ಅರ್ಜಿಗೆ ಧನ್ಯವಾದಗಳು! ಅಂದಹಾಗೆ ನೀವು ಒಳಹೋದ ಫಿಸಿಕಲ್ ಎಕ್ಸಾಮ್ ಮತ್ತು ಲ್ಯಾಬ್ ಪರಿಕ್ಷೆಗಳಲ್ಲಿ ಒಂದಾದ ಚೆಸ್ಟ್ ಎಕ್ಸರೇನಲ್ಲಿ, ನಿಮಗೆ "ವಿಶಾಲಹೃದಯ" (ಕಾರ್ಡಿಯೋಮೆಗಲಿ, ಎನ್ಲಾರ್ಜಡ್ ಹಾರ್ಟ್) ವಿರುವುದಾಗಿ ಕಂಡು ಬಂದಿದ್ದು, ಆದಕಾರಣ ನೀವು ಈ ಹುದ್ದೆಗೆ ಅನರ್ಹರಾಗಿರುವುದಾಗಿ ಈ ಮೂಲಕ ತಿಳಿಸಲು ವಿಷಾದಿಸುತ್ತೇವೆ. ನೀವು ಹೀಗೆಯೇ ವಿಶಾಲ ಹೃದಯವುಳ್ಳವರಾಗಿದ್ದು, ಆ ಭಗವಂತನು ನಿಮ್ಮ ಮುಂದಿನ ಬೇರೆಲ್ಲಾ ಕೆಲಸಗಳ ಅನ್ವೇಷಣೆಯಲ್ಲಿ ಒಳ್ಳೆಯದು ಮಾಡಲಿ. ಇತಿ. ಇಂಡಿಯನ್ ಆರ್ಮಿ, ಭಾರತ ಸರ್ಕಾರ, ಕರ್ನಾಟಕ ವಿಭಾಗ."
ವಿಶಾಲ ಹೃದಯವೂ ವಿಶಾಲ ವಿಪರ್ಯಾಸ!

★ ★ ★

ಮಗುವನ್ನು ಮರೆತ್ತಿಲ್ಲಪ್ಪಾ---ಇಗೋ ಇಲ್ಲಿ!

ಒಬ್ಬ ಹೆಂಗಸು ತನ್ನ ಪುಟ್ಟ ಮಗುವನ್ನು ಡಾ. ಹತ್ತಿರ ತೋರಿಸಿ "ನೋಡಿ ಡಾಕ್ಟ್ರೇ, ನಮ್ಮ ಮನೆ ಮಗೂಗೆ ತುಂಬಾ ಭೇದಿಯಾಗಿದೆ ಮನೇಲಿ ಎಲ್ಲರೂ ಅದನ್ನೇ ತುಂಬಾ ತಲೆಗೆ ಹಚ್ಕೊಂಡುಬಿಟ್ಟಿದ್ದಾರೆ." ಎಂದು ಆತಂಕದಿಂದ ನುಡಿದಳು.

ಡಾ. ಉವಾಚ: "ಏನೋ ಮಗು ಅಲ್ವಾ, ಹೆಚ್ಚೂ ಕಡಿಮೆ (ಮೈಲ್ಡ್ ಅಪ್ಸೆಟ್) ಆಗಿದೆ, ಇಟ್ ಇಸ್ ಪಾರ್ಟ್ ಆಫ್ ದೇರ್ ಗ್ರೋತ್. (ಅದನ್ನ ತಲೆಗೆ ಯಾಕೆ ಹಚ್ಚಿಕೊಳ್ಳೋಕೆ ಹೋದ್ರು) ಯು ಜಸ್ಟ್ ಹ್ಯಾವ್ ಟು ಈಟ್ ಇಟ್." ಆ ಹೆಂಗಸು, "ಸ್ವಲ್ಪ ಕನ್ನಡದಲ್ಲಿ ಹೇಳ್ತೀರ ಡಾಕ್ಟ್ರೆ?" ಎಂದು ಕೇಳಿದಾಗ, ಡಾಕ್ಟರು, "ಅದೇ ಏನೋ ಮಗು ಅಲ್ವಾ, ಸ್ವಲ್ಪ ಹೆಚ್ಚೂ ಕಡಿಮೆ ಆಗಿದೆ, ತಲೆಗೆ ಯಾಕೆ ಹಚ್ಕೋ ಬೇಕು? ಹೊಟ್ಟೇಗೆ ಹಾಕಿಕೊಂಡುಬಿಡಲಿ." ಎಂದು ಸಂಪೂರ್ಣ ಯಶಸ್ವಿಯಾಗಿ ಕನ್ನಡಕ್ಕೆ ಅನುವಾದಿಸಿದರು.

ಹೊಸ ಟ್ರೀಟ್ಮೆಂಟ್ ಭೇದಿಗೆ. ಸ್ವಲ್ಪ ಟ್ರೈ ಮಾಡಿ ನೋಡಿ.

★ ★ ★

ವರಕಲ್‌ಗೆ ಮಧ್ಯದಲ್ಲಿ "ಆ್" ಸೇರಿಸಿ ನೋಡಿ ಏನಾಗುತ್ತೆ ಅಂತ? ಅದೇ ಆಗಿದ್ದು ವಾಸುವಿನ ಅಜ್ಜಿ ಆ್ ಸೇರಿಸಿದಾಗ! ವಾಸು: (ಅಜ್ಜಿಗೆ ತನ್ನ ಗೆಳೆಯನನ್ನು ಪರಿಚಯಿಸಿ) ಅಜ್ಜಿ, ಇವನ ಹೆಸರು ಹರೀಶ್ ಅಂತ, ನನ್ನ ಮಿತ್ರ.

ಅಜ್ಜಿ: ನೀ ಎಲ್ಲಿ ಕೆಲಸ ಮಾಡ್ತೀಯಪ್ಪ?

ಹರೀಶ್: (ತುಂಬಾ ಖುಷಿಯಿಂದ) ವರಕಲ್.

ಅಜ್ಜಿ: (ಏನು ಕೇಳಿಸಿತೋ ಗೊತ್ತಿಲ್ಲಾ) ತುಂಬಾ ಸಂತೋಷ ಅಪ್ಪಾ! ಗ್ರೈಂಡರ್(ವೆಟ್) ಇಟ್ಕೊಂಡಿದೀಯಪ್ಪ! ಅದ್ಸರಿ, ಈಗೆಲ್ಲಾ ವರಳ್ಕಲ್ ಅನ್ನಲ್ವಲ್ಲಾ ಅದಕ್ಕೆ? ಗ್ರೈಂಡರ್ ಅಂತಾರಲ್ವೆ? ಏನೋಪ್ಪಾ ನಿಮಗೇ ನನಗಿಂತಾ ಹೆಚ್ಚು ಇಂಗ್ಲಿಷ್ ಗೊತ್ತು.

ಹರೀಶ್: (ನಗುತ್ತಾ) ಇಲ್ಲಾ ಅಜ್ಜಿ, ನೀವು ಹೇಳಿದಹಾಗೆ ವರಳ್ಕಲ್(ಗ್ರೈಂಡರ್) ಕೆಲಸಾನೇ ಬೆಟರ್ ಇತ್ತು, ಕೆಲಸ ಹೋಗೋ ಯೋಚ್ನೆ ಇರುತ್ತಿರಲಿಲ್ಲ.

ವಾಸು: (ಜೋರಾಗಿ ನಗುತ್ತಾ) ವರಕಲ್ ಅಂತ ದೊಡ್ಡ ಕಂಪೂಟರ್ ಕಂಪನಿ ಅಜ್ಜೀ, ವರಳ್ಕಲ್ ಅಲ್ಲಾ!

★ ★ ★

"ಇದೇನ್ರೀ ಇದೂ! ಅರ್ಧಾಂಗಿನ ಅಂದ್ರೆ ಅಲ್ಲಾ ಅಂತೀರ, ಹೆಂಡತಿ ನಾ ಅಂದ್ರೇ ಹೌದು ಅಂತೀರ! ಕನ್ನಡ ಬರತ್ತೆ ತಾನೆ?"

"ಇವನು ನನ್ನ ಗೆಳೆಯ, ಆದರ್ಶ್ ಅಂತಾ." ಅಂದ ಸುರೇಶ ಅಪ್ಪನಿಗೆ ತನ್ನ ಮಿತ್ರನನ್ನು ಪರಿಚಯಿಸುತ್ತ. "ಈಕೆ ನಿಮ್ಮ ಅರ್ಧಾಂಗಿನಾ?" ಅಂದರು ಅಪ್ಪ ನಗುಮುಖದಿಂದ ಆದರ್ಶ್ ಪಕ್ಕ ಇರುವ ಯುವತಿಯನ್ನು ತೋರಿಸುತ್ತಾ. ಆದರ್ಶ್ ಅಲ್ಲಾ ಅಂತ ತಲೆ(ಅಡ್ಡಡ್ಡವಾಗಿ) ಅಲ್ಲಾಡಿಸಿದನು. ಅಪ್ಪ ಮನಸ್ಸಿನಲ್ಲಿ, ಇವನಿಗೆ ನಾ ಕೇಳಿದ್ದು ಸರಿಯಾಗಿ ಕೇಳಿಸಿಲ್ಲದೇ ಇರಬಹುದು ಅಥವಾ ಕನ್ನಡ ಅಷ್ಟು ಬರದಿರಲೂ ಇರಬಹುದು ಎಂದೆಣಿಸುತ್ತಾ "ಇವಳು ನಿಮ್ಮ ಹೆಂಡತೀನಾ?" ಅಂತ ಸ್ವಲ್ಪ ಜೋರಾಗಿ ಕೇಳಿದರು. ಆದರ್ಶ್ ಹೌದು ಎನ್ನುವಂತೆ ತಲೆ ಮೇಲಿಂದ ಕೆಳಗೆ ಅಲ್ಲಾಡಿಸಿದ. ಸುರೇಶನ ತಂದೆ ಆದರ್ಶ್‌ನ ಉದ್ದೇಶಿಸಿ ಸ್ವಲ್ಪ ಅನುಮಾನದಿಂದ "ನಿಮಗೆ ಕನ್ನಡ ಬರುತ್ತಾ?" ಎಂದರು. "ಹೌದು ಸಾರ್, ಚೆನ್ನಾಗಿ ಬರುತ್ತೆ!" ಅಂದ ಆದರ್ಶ್. "ಹಾಗಾದರೆ ಅರ್ಧಾಂಗಿ ನಾ ಅಂದ್ರೆ ಅಲ್ಲಾ ಅಂತೀರ, ಹೆಂಡತಿ ನಾ ಅಂದ್ರೆ ಹೌದು ಅಂತೀರಲ್ಲ ಏನ್ ಸಮಚಾರ?" ಅಂದರು ಸುರೇಶ್ ತಂದೆ. ಅದಕ್ಕೆ ಆದರ್ಶ್ "ನೋಡಿ ಸ್ವಾಮಿ, "ಸರ್ವ ಕರ್ಮ ಸಮನ್ವಯ" ಅನ್ನೋ ತರ ಕಷ್ಟಾ ಸುಖಾ, ಸಿಹಿ ಕಹಿ, ಎಲ್ಲಾ ಸಮವಾಗಿ ಜೀವನದಲ್ಲಿ ಹಂಚಿಕೊಂಡರೆ, ಅರ್ಧಾಂಗಿ ಅಂತ ಹೇಳಬಹುದು. ಅದಿಲ್ಲದೇ, ಸುಖಾನೆಲ್ಲ ಪೂರ್ತಿಯಾಗಿ ಅನುಭವಿಸಿ ಕಷ್ಟನೆಲ್ಲಾ ಪೂರ್ತಿಯಾಗಿ ತ್ಯಜಿಸಿ, ನನಗೆ ಕೊಟ್ಟರೆ, "ಅರ್ಧಾಂಗಿ" ಹೇಗಾಗುತ್ತಾಳೆ?, ಇವಳು ಪೂರ್ಣಾಂಗಿ! ಹೆಂಡತಿ ಏನೋ ಹೌದು! ಆದರೆ ಅರ್ಧಾಂಗಿ ಅಲ್ಲಾ ಸಾರ್." ಅಂದುಬಿಡೋದೆ?

★ ★ ★

ಅಂಗಡಿ ಶಂಕ್ರು ಸೀತಾರಾಮುನ ಕೇಳಿದರು, "ಅಲ್ಲಾ ತೆಂಗಿನಕಾಯ್ ಗೆ ಎಷ್ಟು ಕೊಟ್ರಿ?

ಸೀತಾರಾಮು: ನಾಲ್ಕು ರೂಪಾಯ್!

ಶಂಕ್ರು: ಪರವಾಗಿಲ್ವೆ ಚೀಪ್ ಆಯಿತಲ್ಲ, ಮೂರು ತೆಂಗಿನ ಕಾಯ್ಗೆ ನಾಲ್ಕು ರೂಪಾಯ್ ಅಂದ್ರೆ ಎರಡು ರೂಪಾಯ್‌ಗಿಂತ ಕಡಿಮೆ ಅಯ್ತು ಒಂದಕ್ಕೆ, ಈಗ ಎರಡು ರೂಪಾಯ್ ಕಡಿಮೆ ಇಲ್ಲಾ(ಒಂದಕ್ಕೆ).

ಸೀತಾರಾಮು : ಕಡಿಮೆ ಎಲ್ಬಂತು?

ಶಂಕ್ರು: ನಿನ್ನೆ ದಿವಸ ಎಷ್ಟು ತೆಂಗಿನಕಾಯ್ ತಗೊಂಡು ಹೋಗ್ತಿದ್ರಿ ಹಾಗಾದ್ರೆ?

ಸೀತಾರಾಮು: ಎರಡು ಅಷ್ಟೇ!

ಶಂಕ್ರು: ಅಲ್ಲಾ ಮೂರು ತರಹ ಕಾಣಿಸ್ತಲ್ಲಾ!, ಎಡ ಬುಜದ ಮೇಲೊಂದೂ, ಬಲ ಬುಜದ ಮೇಲೊಂದೂ, ಮಧ್ಯ ಒಂದು ಕಾಣಿಸ್ತಲ್ಲಾ? ಹಾಗಾದರೆ, ಮಧ್ಯ ಕಾಣಿಸಿದ್ದು ಸಿಪ್ಪೇ ಸುಲಿದ ತೆಂಗಿನ ಕಾಯ್ ಅಲ್ಲಾ, ನಿಮ್ಮ ಬಾಲ್ಡ್(ಕೂದಲ್ಲಿಲ್ಲದ) ತಲೆ ಬುರುಡೇನೇ? ಥೇಟ್ ಸಿಪ್ಪೇ ಸುಲಿದ ತೆಂಗಿನ ಕಾಯ್." ತರಾನೇ ಇತ್ತು.

★ ★ ★

"ಅವನು ಆಬ್ಸೆಂಟ್ ಮೈಂಡೆಡ್." ಸಾರ್.

ನಾನು ಮೆಡಿಕಲ್ ಕಾಲೇಜ್‌ನಲ್ಲಿ ಒದುತ್ತಿದ್ದಾಗ ನಮ್ಮ ಡಿಸೆಕ್ಷನ್ ಟೀಮ್‌ನಲ್ಲಿ ಹತ್ತು ಜನ ಇದ್ದೆವು. ನಮ್ಮ ಅನಾಟಮಿ ಪ್ರೊಫೆಸರ್ ಎಲ್ಲಾ ಟೇಬಲ್ಗೂ ಹತ್ತು- ಹತ್ತು ಜನರನ್ನು ಅಸ್ಸೈನ್ ಮಾಡುತ್ತಿದ್ದರು. ಹಾಗೇ ಡಿಸೆಕ್ಷನ್ ಹಾಲ್‌ನಲ್ಲಿ ನಡೆದಾಡುತ್ತ ನಮ್ಮ ಟೇಬಲ್ ಹತ್ತಿರ ಬಂದು ನಿಂತು "ನಿಮ್ಮ ಟೇಬಲ್‌ನಲ್ಲಿ ಎಷ್ಟು ಜನ ಇದ್ದೀರಾ?" ಎಂದು ಕೇಳಿದರು.

ಪ್ರೊಫೆಸರ್‌ಗೆ ಹತ್ತಿರವಾಗಿದ್ದ ಮುರಳಿ, "ನಾವು ಸರಿಯಾಗಿ ಒಂಬತ್ತು ಜನ ಸರ್." ಎಂದ. ಪ್ರೊಫೆಸರ್‌ಗೆ ಏನೋ ಅನುಮಾನ ಆಗಿ, ನಮ್ಮನ್ನೆಲ್ಲಾ ಎಣಿಸಿ, "ನೀವು ಹತ್ತು ಜನ ಫುಲ್ ಟೀಮ್ ಇದ್ದೀರಲ್ಲಾ?" ಅಂತ ಪ್ರಶ್ನಾರ್ತಕವಾಗಿ ನೋಡಿದರು. ಮುರುಳಿ ತಕ್ಷಣ ಮಂಡ್ಯದವನನ್ನು ತೋರಿಸುತ್ತಾ, "ಅವನು ಆಬ್ಸೆಂಟ್ ಮೈಂಡೆಡ್ ಸಾರ್, ಹಿ ಈಸ್ ಆಬ್ಸೆಂಟ್ ಫಾರ್ ಆಲ್ ಪ್ರಾಕ್ಟಿಕಲ್ ಪರ್ಪಸಸ್, ನಾವು ಒಂಬತ್ತೇ ಜನ ಲೆಕ್ಕಕ್ಕೆ ಸಾರ್." ಎಂದು ತುಂಬಾ ಪ್ಲೂಎಂಟಾಗಿ ಪಟ್ ಅಂತ ಹೇಳೇಬಿಟ್ಟ.

ಎಂದೂ ಡಿಸೆಕ್ಷನ್ ಹಾಲ್‌ನಲ್ಲಿ ನಗದ ನಮ್ಮ ಪ್ರೊಫೆಸರ್ ಘೊಳ್ ಎಂದು ನಗಲಾರಂಭಿಸಿದರು!

★ ★ ★

ಅಜ್ಜಿ-ಅಮೆರಿಕದ-ಮೊಮ್ಮಗನ-ಅಕ್ಕರೆಯ ಸಂಭಾಷಣೆ!

ಅಜ್ಜಿ: (ಪ್ರೀತಿಯಿಂದ) ನಿಮಗೆ ಅಮೆರಿಕಾದಲ್ಲಿ ತಿನ್ನಕ್ಕೆ ಹಿತ ಮಿತ (ಅಮಿಟ್) ಇಲ್ವಾ?.

ಮೊಮ್ಮಗ: ಇಲ್ಲಾ ಅಜ್ಜಿ. ನಾನು ದಿನಕ್ಕೆ ಫ಼ೋರ್ ಟೈಮ್ಸ್ ಅಷ್ಟೇ ತಿನ್ನೋದು.

ಅಜ್ಜಿ: ಮಧ್ಯ ಮಧ್ಯ ಅದೇನೋ ಸ್ನ್ಯಾಕ್ ಅಂತ ಬೇರೆ ತಿಂತೀಯಾ?

ಮೊಮ್ಮಗ: ಹೌದ್ ಅಜ್ಜಿ, ಮೈನ್ ಮೀಲ್ಸ್ ಫ಼ೋರ್ ಅಷ್ಟೇ, ಅವುಗಳ ಮಧ್ಯೆ ಸ್ನ್ಯಾಕ್ಸ್ ಅಷ್ಟೇ.

ಅಜ್ಜಿ: ಅಷ್ಟೊಂದು ಸಲ ತಿಂದರೆ, ನಮ್ಮ ಕನ್ನಡದಲ್ಲಿ ಒಂದು ತಮಾಷೆ ಹೇಳ್ತಾರೆ.

ಮೊಮ್ಮಗ: ಅಜ್ಜಿ ಆ ಜೋಕ್ ಹೇಳಜ್ಜಿ.

ಅಜ್ಜಿ: ಒಂದು ಹೊತ್ತು ತಿಂದವನು ಯೋಗಿ.

ಮೊಮ್ಮಗ: ಯೋಗಿ ಅಂದ್ರೆ ಯಾರು?

ಅಜ್ಜಿ: ಒಂದು ತರ ಋಷಿಗಳ ತರಹ ಮಹಾಭಾರತದಲ್ಲಿ ನೋಡಿದೀಯಲ್ಲಾ.

ಮೊಮ್ಮಗ: ಆಮೇಲೆ?

ಅಜ್ಜಿ: ಎರಡು ಹೊತ್ತು ತಿಂದವನು ಭೋಗಿ.

ಮೊಮ್ಮಗ: ದಟ್ ಮೀನ್ಸ್...

ಅಜ್ಜಿ: ಅಂದರೆ ತೃಪ್ತಿ ಯಿಂದ ಸಂತುಷ್ಟನಾದವನು, ನಿಮ್ಮ ಇಂಗ್ಲೀಷ್ ನಲ್ಲಿ ಸ್ಯಾಟಿಸ್ಫೈಡ್ ಅಂತ.

ಮೊಮ್ಮಗ: ನೆಕ್ಸ್ಟ್ ಏನಜ್ಜಿ?

ಅಜ್ಜಿ: ಮೂರು ಹೊತ್ತು ತಿಂದವನು ರೋಗಿ.

ಮೊಮ್ಮಗ: ರೋಗಿ ಅಂದ್ರೆ ಇಲ್ ಅಂತ ಅಲ್ವಾ?

ಅಜ್ಜಿ: ಹೌದು ಮರಿ, ನಿಂಗೆ ಕನ್ನಡ ಚೆನ್ನಾಗಿ ಬರುತ್ತಲ್ಲಾ?

ಮೊಮ್ಮಗ: ಇನ್ನೂ ಇದೆಯಾ?

ಅಜ್ಜಿ: ನಾಲ್ಕು ಹೊತ್ತು ಉಂಡವನಾ ಹೊತ್ಕೊಂಡು ಹೋಗಿ.

ಮೊಮ್ಮಗ: (ತುಂಬಾ ಉತ್ಸಾಹದಿಂದ) ಅಜ್ಜೀ, ನೀನೇನು ಹೇಳಬೇಡ, ನಾನೇ ಅರ್ಥ ಹೇಳುತ್ತೀನಿ, ಹಂಗಂದ್ರೆ, ಫ಼ೋರ್ ಪೀಪಲ್ ಕ್ಯಾರಿ ಮಿ, ಬಿಕಾಸ್ ಐ ಕ್ಯನಾಟ್ ವಾಕ್, ಐ ಯಾಮ್ ಟೂ ಹೆವಿ ಬೈ ಈಟಿಂಗ್ ಫ಼ೋರ್ ಟೈಮ್ಸ್." ಅಲ್ವಾ ಅಜ್ಜಿ!. ಮತ್ತೆ ಹಾಗಾದರೆ ಫೈವ್(ಐದು) ಸಲ ತಿಂದವರಿಗೆ ಏರ್ ಪ್ಲೇನ್‌ನಲ್ಲಿ ರೈಡ್ ಕೊಡ್ತಾರಾ? ಅದೂ ಮಜಾ ಇರತ್ತೆ ಅಜ್ಜಿ!

ಅಜ್ಜಿ ಬೆರಗಾಗಿ ಮೊಮ್ಮಗನ್ನ ನೋಡಿ ಹೊಟ್ಟೆ ಹುಣ್ಣಾಗುವಷ್ಟು ನಕ್ಕಳು!

ಇಲ್ಲಿಗೆ ನನ್ನ ಹಾಸ್ಯ ಲಹರಿಯು ಸಂಪೂರ್ಣವಾದಂತೆ! ಆದರೆ ನಗುವುದಂತೂ ನಿಲ್ಲದೆ ಮುಂದುವರಿದಂತೆ!

◈



# ಶ್ರೀ ಸದಾಶಿವ ಬ್ರಹ್ಮೇಂದ್ರ

**ವಸಂತಮಾಧವಿ**

***ಬೆಂಗಳೂರು,*** *vasanthamadhavi_AT_upavan.com*

*ಖೇಲತಿ ಮಮ ಹೃದಯೇ - ಗಾಯತಿ ವನಮಾಲಿ ಮಧುರಂ - ಭಜರೇ ಯದುನಾಥಂ - ಕ್ರೀಡತಿ ವನಮಾಲಿ ಗೋಷ್ಠೇ - ಭಜರೇ ಗೋಪಾಲಂ - ಸ್ಮರ ವಾರಂ ವಾರಂ ಇತ್ಯಾದಿ ಕೃತಿಗಳಲ್ಲಿ ವರ್ಣಿತವಾಗಿರುವ ದೃಶ್ಯಗಳು ಸಂದರ್ಭಗಳು ಅವರ ಪ್ರತ್ಯಕ್ಷಾನುಭವವೆಂದು ಅನ್ನಿಸುತ್ತದೆ.*

ಹದಿನೇಳನೇ ಶತಮಾನವು ಸಂಗೀತ ಜಗತ್ತಿನಲ್ಲಿ ಅತಿ ಹೆಚ್ಚಿನ ಮಹತ್ವವನ್ನು ಪಡೆದಿದೆ. ಇದಕ್ಕೆ ಕಾರಣ ಈ ಶತಮಾನದಲ್ಲಿಯೇ ಅನೇಕಾನೇಕ ಸಂಗೀತ ಶಾಸ್ತ್ರವೇತ್ತರು, ಪಂಡಿತರು ಮತ್ತು ಲಾಕ್ಷಣಿಕರು ಜನಿಸಿದ್ದು ಮತ್ತು ಬಾಳಿದ್ದು. ಸಂಗೀತ ಶಾಸ್ತ್ರದ ನೆಲೆ ಭದ್ರವಾಗಿದ್ದು ಈ ಕಾಲದಲ್ಲಿಯೇ. ಶ್ರೀ ಸದಾಶಿವ ಬ್ರಹ್ಮೇಂದ್ರರೂ ಈ ಅವಧಿಯಲ್ಲಿ ಇದ್ದವರೇ. ಇವರ ಹೆಸರು ಸಂಸ್ಕೃತ, ಆಧ್ಯಾತ್ಮಿಕ ಹಾಗೂ ಸಂಗೀತ ಜಗತ್ರಯಗಳಲ್ಲೂ ವಿರಾಜಿಸುವಂಥದು.

ಮಧುರೆಯಲ್ಲಿ ವಾಸವಾಗಿದ್ದ ಸೋಮನಾಥ ಅವಧಾನಿ ಮತ್ತು ಪಾರ್ವತೀ ದೇವಿ ದಂಪತಿಗಳ ಸುಪುತ್ರರಾಗಿ ಜನಿಸಿದ ಇವರ ಮೊದಲ ಹೆಸರು ಶಿವರಾಮಕೃಷ್ಣ. ಶ್ರೀವತ್ಸ ಗೋತ್ರೋದ್ಭವರಾದ ಇವರ ಮನೆತನ ಮೋಕ್ಷ ಇಲ್ಲು (ಮೋಕ್ಷಸಾಧನೆ ಮಾಡಿದವರ ಮನೆತನ) ಎಂದೇ ಪ್ರಸಿದ್ಧವಾಗಿತ್ತು. ಆಂಧ್ರ ಬ್ರಾಹ್ಮಣರಾದ ಅವಧಾನಿಗಳು ಕುಂಡಲಿನೀಯೋಗವನ್ನು ಅಭ್ಯಾಸ ಮಾಡುತ್ತಿದ್ದ ಕಾರಣ ಬಹಳಕಾಲ ಬ್ರಹ್ಮಚಾರಿಯಾಗಿಯೇ ಇದ್ದವರು ಕೇವಲ ವಂಶಾಭಿವೃದ್ಧಿಯನ್ನು ಲಕ್ಷಿಸಿ ವಿವಾಹವಾದವರು. ಪುತ್ರಪ್ರಾಪ್ತಿಯಾಗುತ್ತಲೇ ಸಂಸಾರದ ಸಮಸ್ತ ನಿರ್ವಾಹವನ್ನೂ ಪತ್ನಿಗೊಪ್ಪಿಸಿ ತಾವು ಆಧ್ಯಾತ್ಮ ಸಾಧನೆಯಲ್ಲಿ ತೊಡಗಿದರು. ಯುಕ್ತ ವಯಸ್ಸಿನಲ್ಲಿಯೇ ಉಪನಯನ ಸಂಸ್ಕಾರ ಪಡೆದು ಶಿವರಾಮಕೃಷ್ಣನು ಮಧುರೆಯ ವೇದಪಾಠಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಉಪಕ್ರಮಿಸಿದನು. ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಪಡೆದನು. ಉನ್ನತ ವ್ಯಾಸಂಗಕ್ಕಾಗಿ ತಿರುವಿಸೈನಲ್ಲೂರ್ ಗ್ರಾಮದಲ್ಲಿದ್ದ ಶ್ರೀ ರಾಮಭದ್ರ ದೀಕ್ಷಿತರನ್ನು ಆಶ್ರಯಿಸಿದನು. ದೀಕ್ಷಿತರಾದರೋ ಜಾನಕೀಪರಿಣಯಂ, ಪತಂಜಲಿಚರಿತ್ರಂ, ರಾಮಸ್ತವ ಕರ್ಣರಸಾಯನಂ ಮುಂತಾದ ವಿಶೇಷ ಗ್ರಂಥಗಳ ರಚಯಿತ್ರರು. ಇವರ ಗುರುಕುಲದಲ್ಲಿ ಮುಂದೆ ವಿಶ್ವಖ್ಯಾತಿ ಪಡೆದ ಭಾಷ್ಯಂ ಗೋಪಾಲಕೃಷ್ಣ ಶಾಸ್ತ್ರಿಗಳು, ಐಯ್ಯವಾಳ್ ಎಂದು ಪ್ರಸಿದ್ಧರಾದ ಶ್ರೀಧರ ವೆಂಕಟೇಶರು, ಬೋಧೇಂದ್ರರು ಮುಂತಾದವರು ಶಿವರಾಮನ ಸಹಪಾಠಿಗಳಾಗಿದ್ದರು. ಅಂದಿನ ಪದ್ಧತಿಯಂತೆ ಶಿವರಾಮನಿಗೆ ಚಿಕ್ಕವಯಸ್ಸಿನಲ್ಲಿಯೇ ಯೋಗ್ಯ ಕನ್ಯೆಯೊಡನೆ ವಿವಾಹವಾಗಿತ್ತು. ಕನ್ಯೆಯನ್ನು ಮನೆ ತುಂಬಿಸಿಕೊಳ್ಳುವ ಕಾರ್ಯಕ್ರಮ ಸಂದರ್ಭದಲ್ಲಿ ಶಿವರಾಮನೂ ಮನೆಗೆ ಬಂದನು. ಸಂದರ್ಭೋಚಿತವಾದ ಕಾರ್ಯಕ್ರಮಗಳ ಹೆಚ್ಚಳದಲ್ಲಿ ಊಟದ ಹೊತ್ತು ಮೀರಿತು. ಹಸಿವಿನಿಂದಲೂ ಮಾರ್ಗಾಯಾಸದಿಂದಲೂ ಬಳಲಿದ ಶಿವರಾಮನ ಮನಸ್ಸು ಬಗೆಬಗೆಯ ಚಿಂತೆಯಲ್ಲಿ ಮುಳುಗಿತು. ಹಸಿವೆಯೇ ಎಲ್ಲ ಚಿಂತೆಗೂ ಮೂಲವೆನ್ನಿಸಿತು. ಹಸಿವಿನಿಂದಾಗಿ ಕೋಪತಾಪಗಳು ಏರುವುದೆಂಬುದೊಂದು; ಅದರೊಡನೆ ಪ್ರತಿ ಇಂದ್ರಿಯಕ್ಕೂ ತತ್ಸಂಬಂಧದ ವಾಂಛೆಗಳು ಇರುವುದೆಂಬುದೊಂದು; ಈ ಆಮಿಷಗಳು ಮಾನವನನ್ನು ಆಧ್ಯಾತ್ಮಿಕವಾಗಿ ಕೆಳಕ್ಕೆ ತುಳಿಯುವುದೆಂಬುದೊಂದು -- ಹೀಗೆ ಹತ್ತು ಹಲವು ಚಿಂತೆಗಳು ಶಿವರಾಮನನ್ನು ಮುತ್ತಿದುವು. ಕಡೆಗೆ ಸಂಸಾರಕ್ಕೆ ಸಿಕ್ಕಿದ ಮೇಲೆ ಜವಾಬ್ದಾರಿ ಬೇಡವೆನ್ನುವುದು ಅನುಚಿತ ಹಾಗೂ ಅನ್ಯಾಯ. ಅದರ ಬದಲು ಸಂಸಾರ ಬಂಧನಕ್ಕೆ ಸಿಲುಕದಿರುವುದೇ ಮೇಲು ಎಂದು ನಿಶ್ಚಯಿಸಿ ಮನೆಯಲ್ಲಿ ಯಾರಿಗೂ ತಿಳಿಸದೆ ಗೃಹತ್ಯಾಗಮಾಡಿ ಗುರುಗಳಾದ ದೀಕ್ಷಿತರನ್ನು ಆಶ್ರಯಿಸಿ ತನಗೆ ಸನ್ಯಾಸದೀಕ್ಷೆ ನೀಡಲು ಸಮರ್ಥನಾದ ಗುರುವನ್ನು ತೋರಿಸಬೇಕೆಂದು ಕೋರಿದರು. ದೀಕ್ಷಿತರಾದರೂ ಅವನನ್ನು ಸನ್ಯಾಸದಿಂದ ವಿಮುಖನನ್ನಾಗಿಸಲು ಯತ್ನಿಸಿ ವಿಫಲರಾಗಿ ಶ್ರೀ ಶ್ರೀ ಪರಮಶಿವೇಂದ್ರ ಯೋಗಿವರ್ಯರೇ ಅವನ ದೀಕ್ಷಾಗುರುವಾಗಲು ಸಮರ್ಥರೆಂದು ಹೇಳಿದರು. ಶಿವರಾಮನಿಗೆ ಸನ್ಯಾಸಾಶ್ರಮದಲ್ಲಿ ಮನಸ್ಸು ನಿಜವಾಗಿಯೂ ನಿಲ್ಲಬಲ್ಲುದೋ ಎಂಬುದನ್ನು ನಾನಾವಿಧವಾಗಿ ಪರೀಕ್ಷಿಸಿ ಸಂಶಯ ಪರಿಹರಿಸಿಕೊಂಡಮೇಲೆ ಪರಮಶಿವೇಂದ್ರರು ಸುಮುಹೂರ್ತದಲ್ಲಿ ಸನ್ಯಾಸದೀಕ್ಷೆ ಇತ್ತು ಶ್ರೀ ಸದಾಶಿವೇಂದ್ರ ಸರಸ್ವತೀ ಎಂಬ ಅಭಿದಾನವಿತ್ತರು. ಹೀಗೆ ಶಿವರಾಮಕೃಷ್ಣನು ಶ್ರೀ ಸದಾಶಿವೇಂದ್ರ ಸರಸ್ವತಿಯಾಗಿ ಮುಂದೆ ಬ್ರಹ್ಮಜ್ಞಾನ ಹೊಂದಿ ಸದಾಶಿವ ಬ್ರಹ್ಮೇಂದ್ರರಾದರು.

ತಮ್ಮ ಸಮಯವನ್ನೆಲ್ಲ ಪೂಜೆ, ಜಪ ತಪ ಧ್ಯಾನ ಯೋಗ ಉಪನಿಷದ್ವಿಚಾರಗಳಿಂದಲೂ, ಶ್ರುತಿ-ಶಾಸ್ತ್ರ-ತತ್ವ ಚಿಂತನೆಯಲ್ಲಿಯೂವಿನಿಯೋಗಿಸುತ್ತ ವೇದಾಂತ ಮತ್ತು ತರ್ಕ ಶಾಸ್ತ್ರಗಳಲ್ಲಿ ಪ್ರಾವೀಣ್ಯ ಪಡೆದರು. ಗುರುಕುಲದಲ್ಲಿ ಶಿಕ್ಷಣ ಹೊಂದುತ್ತಿರುವಾಗಲೇ ತಮ್ಮ ಗುರುಗಳ ಸ್ತುತಿರೂಪವಾದ ನವಮಣಿಮಾಲಾ ಎಂಬ ಕೃತಿಯನ್ನೂ ಶ್ರೀ ದಕ್ಷಿಣಾಮೂರ್ತಿ ಧ್ಯಾನಂ ಕೃತಿಯನ್ನೂ ರಚಿಸಿದ್ದರೆಂದು ತಿಳಿಯುತ್ತದೆ. ಶ್ರೀ ರಾಮನಲ್ಲೂ ಶ್ರೀ ಕೃಷ್ಣನಲ್ಲೂ ವಿಶೇಷ ಭಕ್ತಿ ಇದ್ದವರಾಗಿ ಬಹು ಸುಂದರವಾದ ಮಧುರ ಕೃತಿಗಳನ್ನು ರಚಿಸಿದ್ದಾರೆ. ಉತ್ತಮ ಶಾರೀರವು ಇದ್ದುದರಿಂದ ಮೈಮರೆತು ಗಾನಮಾಡುತ್ತಿದ್ದರೆಂದೂ ಉಲ್ಲೇಖಗಳು ತಿಳಿಸುತ್ತವೆ. ಸಹಪಾಠಿಗಳೊಡನೆ ಒಮ್ಮೊಮ್ಮೆ ಅತಿಯಾಗಿಯೇ ತರ್ಕದಲ್ಲಿ ತೊಡಗುತ್ತಿದ್ದ ಕಾರಣ ಕೆಲವರಿಗೆ ಅಸಮಾಧಾನವಾಗುವ ಸಂದರ್ಭಗಳೂ ಒದಗುತ್ತಿದ್ದುವು. ಗುರುಗಳು ತಮ್ಮ ಶಿಷ್ಯನ ಮೇಲ್ಮೆಯನ್ನು ಮುಖ್ಯವಾಗಿಟ್ಟುಕೊಂಡು ಅವನಲ್ಲಿ ಅಹಂಕಾರ ಬಲಿಯಲು ಬಿಡಬಾರದೆಂದು ನಿಶ್ಚಯಿಸಿ ತರ್ಕಪ್ರಸಂಗವೊಂದರಲ್ಲಿ "ಸದಾಶಿವ ನೀನು ನಿನ್ನ ಮಾತುಗಳನ್ನು ನಿಯಂತ್ರಿಸಲು ಎಂದು ಕಲಿಯುವೆಯೋ" ಎಂದು ಬೇಸರಪಟ್ಟವರಂತೆ ಕೇಳಿದರು. ತಕ್ಷಣವೇ ಸದಾಶಿವರು ಬಹು ವಿನಯದಿಂದ "ಈ ಕ್ಷಣದಿಂದಲೇ ಪೂಜ್ಯರೇ" ಎಂದುತ್ತರಿಸಿದವರು ಆ ಕ್ಷಣದಿಂದಲೇ ಮೌನವ್ರತವನ್ನು ಕೈಕೊಂಡರು. ಹಿಂದೆ ಸಹಪಾಠಿಯಗಿದ್ದ ಐಯ್ಯಾವಾಳ್ ಅವರು ಸದಾಶಿವರ ಮೌನವ್ರತದ ಕಾರಣ ಅವರ ಸುಮಧುರ ಸಂಗೀತ ಕೇಳುವ ಯೋಗ ಎಲ್ಲರಿಗೂ ತಪ್ಪುತ್ತಿದೆಯಲ್ಲಾ ಎಂದು ಪರಿತಪಿಸಿ ಒಮ್ಮೆ ಅವರೊಡನೆ "ಸ್ವಾಮಿಯವರೇ ತಾವು ಲೌಕಿಕ ವಿಚಾರಗಳಲ್ಲಿ ಮೌನವನ್ನಾಶ್ರಯಿಸುವುದು ಸಾಧುವಾದುದೇ. ಆದರೆ ಭಗವನ್ನಾಮ ಸಂಕೀರ್ತನೆ ಮಾಡುವುದನ್ನು ನಿಲ್ಲಿಸಿ ಜನಕೋಟಿಗೂ ಸಂಗೀತಪ್ರಿಯರಿಗೂ ಅನ್ಯಾಯ ಮಾಡುವುದು ಸರಿಯೇ? ತಾವು ಹಾಡುವುದನ್ನು ಮಾತ್ರ ನಿಲ್ಲಿಸಬಾರದು" ಎಂದು ಪ್ರಾರ್ಥಿಸಿದರು. ಸದಾಶಿವರು ಸ್ವಲ್ಪ ಚಿಂತಿಸಿ ತಮ್ಮ ಮಿತ್ರರ ಮಾತಿನಲ್ಲಿ ಅರ್ಥವಿದೆಯೆಂಬುದನ್ನು ಗ್ರಹಿಸಿ ಕೂಡಲೇ "ಬ್ರೂಹಿ ಮುಕುಂದೇತಿ ರಸನೇ" ಎಂಬ ಕೃತಿಯನ್ನು ರಚಿಸಿ ಹಾಡಿದರು.

ಸದಾಶಿವರು ಮೌನಿಯಾಗಿದ್ದರೂ ಗ್ರಂಥರಚನೆಯಲ್ಲಿ ತೊಡಗಿಯೇ ಇದ್ದರು. ಅವರು ಮರಳಿನ ಮೇಲೆ ಬರೆದುದನ್ನು ಸರ್ವದಾ ಅವರ ಸಂಗಡವೇ ಇರುತ್ತಿದ್ದ ನಲ್ಲಾಕವಿ ಮತ್ತು ಚಂದ್ರಶೇಖರ ಅವರುಗಳು ತಾಳಪತ್ರದಲ್ಲಿ ಬರೆದಿಡುತ್ತಿದ್ದರೆಂದು ತಿಳಿದು ಬರುತ್ತದೆ.

ಇಪ್ಪತ್ತಮೂರು ಸಂಗೀತ ರಚನೆಗಳನ್ನು ಶ್ರೀ ಸದಾಶಿವ ಬ್ರಹ್ಮೇಂದ್ರರು ಸಂಗೀತಜಗತ್ತಿಗೆ ಅನುಗ್ರಹಿಸಿದ್ದಾರೆ. ಇವು ಒಂದೊಂದೂ ಅತ್ಯಮೂಲ್ಯವಾದುವು. ಈ ರಚನೆಗಳಲ್ಲಿ ಸದಾಶಿವರು ಸಾಕ್ಷಾತ್ತಾಗಿ ಶ್ರೀ ಕೃಷ್ಣನನ್ನೂ ಶ್ರೀ ರಾಮನನ್ನೂ ದರ್ಶಿಸಿದ್ದರೆಂದು ಭಾಸವಾಗುತ್ತದೆ. ಖೇಲತಿ ಮಮ ಹೃದಯೇ - ಗಾಯತಿ ವನಮಾಲಿ ಮಧುರಂ - ಭಜರೇ ಯದುನಾಥಂ - ಕ್ರೀಡತಿ ವನಮಾಲಿ ಗೋಷ್ಠೇ - ಭಜರೇ ಗೋಪಾಲಂ - ಸ್ಮರ ವಾರಂ ವಾರಂ ಇತ್ಯಾದಿ ಕೃತಿಗಳಲ್ಲಿ ವರ್ಣಿತವಾಗಿರುವ ದೃಶ್ಯಗಳು ಸಂದರ್ಭಗಳು ಅವರ ಪ್ರತ್ಯಕ್ಷಾನುಭವವೆಂದು ಅನ್ನಿಸುತ್ತದೆ.

ಒಂದು ದಿನ ಸದಾಶಿವರು ಶ್ರೀ ಚಂದ್ರಮೌಳೀಶ್ವರನ ಪೂಜೆ ಮಾಡುತ್ತ ಹಾಗೆಯೇ ಧ್ಯಾನಾಸಕ್ತರಾಗಿ ಸಮಾಧಿಸ್ಥರಾದರು. ಆಗ ಅವರಿಗೆ ಭಗವಂತನ ವಿಶ್ವರೂಪದ ಸಾಕ್ಷಾತ್ಕಾರವಾಯಿತು. ಅದರ ಫಲವೇ 'ಶಿವ ಮಾನಸ ಪೂಜ' ಎಂಬ ಸ್ತೋತ್ರದ ರಚನೆ. ಈ ಕೃತಿಯಲ್ಲಿ ೩೦ ಶ್ಲೋಕಗಳಿವೆ. 'ಆತ್ಮವಿದ್ಯಾವಿಲಾಸ' ಎಂಬ ಗ್ರಂಥವು ಒಬ್ಬ ಸಾಧಕನ ಮಾರ್ಗ ಮನಸ್ಸುಗಳನ್ನು ವಿಶ್ಲೇಶಿಸುತ್ತದೆ. ಇದೊಂದು ಬಹು ಗಹನವಾದ ವಿಚಾರಗಳನ್ನು ತಿಳಿಸುವ ಅಮೂಲ್ಯ ಗ್ರಂಥ. 'ಬ್ರಹ್ಮಸೂತ್ರ ವೃತ್ತಿ ಅಥವಾ ಬ್ರಹ್ಮ ತತ್ವ ಪ್ರಕಾಶಿಕಾ' ಶ್ರೀ ಶಂಕರರ ಬ್ರಹ್ಮಸೂತ್ರ ಭಾಷ್ಯಕ್ಕೆ ಸದಾಶಿವರು ಬರೆದಿರುವ ಸುಲಭ ಭಾಷ್ಯ. ಪತಂಜಲಿ ಮಹರ್ಷಿಯ ಯೋಗಸೂತ್ರದ ವಿವರಣೆಯನ್ನು 'ಯೋಗಸುಧಾಕರ' ಎಂಬ ಗ್ರಂಥದಲ್ಲಿ ವಿವರಿಸಲಾಗಿದೆ. 'ಕೈವಲ್ಯಾಮೃತ ಬಿಂದು' ಹನ್ನೆರಡು ಉಪನಿಷತ್ತುಗಳ ಸಾರವನ್ನು ಅರ್ಥಗರ್ಭಿತವಾಗಿ ತಿಳಿಸುತ್ತದೆ. ಅಪ್ಪಯ್ಯ ದೀಕ್ಷಿತರು ಅದ್ವೈತಸಿದ್ಧಾಂತದ ಮೇಲೆ ಬರೆದಿರುವ 'ಸಿದ್ಧಾಂತಲೇಶ ಸಂಗ್ರಹ' ಎಂಬ ಗದ್ಯ ರೂಪವಾದ ಗ್ರಂಥವನ್ನು ಪದ್ಯರೂಪದಲ್ಲಿ ಬರೆದಿರುವ ಸದಾಶಿವರ ಗ್ರಂಥವು 'ಸಿದ್ಧಾಂತ ಕಲ್ಪವಲ್ಲೀ' ಎಂದು ವಿಖ್ಯಾತವಾಗಿದೆ. ಇದೇ ಗ್ರಂಥಕ್ಕೆ ಬ್ರಹ್ಮೇಂದ್ರರು ಬರೆದಿರುವ ಟೀಕೆ 'ಕೇಸರಾವಳಿ' ಎಂಬ ಹೆಸರಿನಿಂದ ವಿದಿತವಾಗಿದೆ. ೫೨ ಶ್ಲೋಕಗಳನ್ನೊಳಗೊಂಡ 'ಅದ್ವೈತರಸ ಮಂಜರಿ' ಸದಾಶಿವರ ಒಂದು ವಿಶೇಷ ಕೊಡುಗೆ. ಗಹನವಾದ ಆತ್ಮ ಧ್ಯಾನ ಕ್ರಮವನ್ನು ೩೬ ಶ್ಲೋಕಗಳಲ್ಲಿ ವಿವರಿಸುವ 'ಆತ್ಮಾನುಸಂಧಾನಂ' ಅದ್ಭುತವಾದ ಕೃತಿ. 'ದಕ್ಷಿಣಾಮೂರ್ತಿ ಧ್ಯಾನಂ' ೪೫ ಶ್ಲೋಕಗಳಲ್ಲಿ ಶ್ರೀ ದಕ್ಷಿಣಾಮೂರ್ತಿಯನ್ನು ಬಹು ಸುಂದರವಾಗಿ ಸದಾಶಿವರು ಸ್ತುತಿಸಿರುವುದನ್ನು ನಮಗೆ ಪರಿಚಯಿಸುತ್ತದೆ. ಪರಮ ಗುರುಭಕ್ತರಾದ ಬ್ರಹ್ಮೇಂದ್ರರು ೧೦ ಶ್ಲೋಕಗಳಲ್ಲಿ ತಮ್ಮ ಗುರುಗಳನ್ನು ಸ್ತುತಿಸಿರುವುದು 'ನವಮಣಿಮಾಲ'. ೧೩ ಶ್ಲೋಕಗಳಲ್ಲಿ ಪರಮಶಿವನ ಸ್ತುತಿಯನ್ನು ಕಾಣಿಸುವ ರಚನೆ 'ನವವರ್ಣ ರತ್ನ ಮಾಲ'. ಬ್ರಹ್ಮೇಂದ್ರರು ಮನಸ್ಸಿಗೆ ಬುದ್ಧಿ ಹೇಳಿರುವುದನ್ನು 'ಮನೋನಿಯಮನಂ' ಕೃತಿಯಲ್ಲಿ ತಿಳಿಯಬಹುದು. 'ಸ್ವಾನುಭೂತಿಪ್ರಕಾಶಿಕಾ' ಕೇವಲ ೧೧ ಶ್ಲೋಕಗಳಲ್ಲಿ ಜೀವನ್ಮುಕ್ತರ ಅನುಭವವನ್ನು ಸಾರವತ್ತಾಗಿ ತಿಳಿಸುತ್ತದೆ. 'ಆತ್ಮಾನಾತ್ಮ ವಿವೇಕ ಪ್ರಕಾಶಿಕಾ' 'ಸಪರ್ಯಾ ಪರ್ಯಾಯ ಸ್ತವ' 'ಪರಮಹಂಸಚರ್ಯಾ' 'ಸೂತಸಂಹಿತ' 'ಶಿವಯೋಗದೀಪಿಕಾ' ಹಾಗೂ 'ಭಾಗವತಸಾರಂ' ಬ್ರಹ್ಮೇಂದ್ರರ ಇತರ ಕೃತಿಗಳು.

ಇಷ್ಟೆಲ್ಲಾ ಆಧ್ಯಾತ್ಮ ಗ್ರಂಥಗಳನ್ನೂ ಮತ್ತು ಸಂಗೀತ ಕೃತಿಗಳನ್ನೂ ಜಗತ್ತಿಗೆ ಅನುಗ್ರಹಿಸಿದ

ಸದಾಶಿವರು ಪರಬ್ರಹ್ಮ ಸ್ವರೂಪವನ್ನು ಪಡೆಯಲು ಹಿಡಿದ ಸಾಧನಾ ಕ್ರಮ ಬಹು ಕಠಿಣತರವಾದುದು. ಏಕಾಂತವಾಸ - ದೇಹದ ಬಗೆಗೆ ನಿರ್ಲಕ್ಷ್ಯ - ಹಸಿವು ಬಾಯಾರಿಕೆಗಳ ನಿಗ್ರಹ - ಇವೇ ಅವರ ಜೀವನಧರ್ಮವಾಯಿತು. ದಿವ್ಯ ತೇಜಸ್ಸೊಂದು ಅವರ ಮುಖವನ್ನು ಆವರಿಸಿತ್ತು. ನಿಂದಾ-ಸ್ತುತಿಗಳಿಗೆ ಅತೀತರಾದರು. ಇತರ ಆಶ್ರಮವಾಸಿಗಳಾದ ಸಾಧಕರು ಸದಾಶಿವರ ವರ್ತನೆಯನ್ನೂ ಅವರು ಮಕ್ಕಳೊಡನೆ ಮಕ್ಕಳಂತೆ ಆಡುವುದನ್ನೂ ವಿಲಕ್ಷಣವಾದ ರೀತಿ ನೀತಿಗಳನ್ನೂ ಗುರುಗಳಾದ ಪರಮಶಿವೇಂದ್ರರಲ್ಲಿ ನಿವೇದಿಸಿದಾಗ ಅವರು "ಆಹಾ ಸದಾಶಿವನಿಗೆ ಹಿಡಿದ ಹುಚ್ಚು ನನಗಿನ್ನೂ ಹಿಡಿದಿಲ್ಲವಲ್ಲಾ. ಅವನೆಂಥ ಭಾಗ್ಯಶಾಲಿ. ಅವನಿಗೆ ಹಿಡಿದಿರುವ ಭಗವತ್ಪರವಾದ ಇಂತಹ ಹುಚ್ಚು ನನಗೆಂದಿಗೆ ಲಭಿಸುವುದೋ" ಎಂದು ಮರುಗಿದರು! ಬ್ರಹ್ಮೇಂದ್ರರು ಅವಧೂತ ಸ್ಥಿತಿಯನ್ನು ಪಡೆದಿರುವುದಾಗಿ ತಿಳಿಸಿ ಈ ಸ್ಥಿತಿಯ ಸ್ವರೂಪವನ್ನೂ ಗುರುಗಳು ಇತರ ಶಿಷ್ಯರಿಗೆ ವಿವರಿಸಿದರು.

ಮಹಾತ್ಮರ ಜೀವನದಲ್ಲಿ ಅನೇಕಾನೇಕ ವಿಚಿತ್ರವೆನಿಸುವಂತಹ ಪವಾಡಗಳೆನಿಸಿಕೊಳ್ಳುವ ಘಟನಾವಳಿಗಳು ನಡೆಯುವುದು ಸಹಜವೇ! ಇಂತಹ ಪವಾಡಸದೃಶ ಸಂಗತಿಗಳು ಸದಾಶಿವ ಬ್ರಹ್ಮೇಂದ್ರರ ಜೀವನದಲ್ಲೂ ಆಗಿಹೋಗಿವೆಂದು ಪ್ರಚಲಿತವಾಗಿದೆ. ಇವುಗಳನ್ನು ನಂಬುವುದು ಅಥವಾ ಬಿಡುವುದು ವೈಯಕ್ತಿಕ ಅಭಿಪ್ರಾಯ. ಆದರೆ, ಈ ಪವಾಡಗಳನ್ನು ಬಿಟ್ಟು ನೋಡಿದರೂ ಇವರ ಹಿರಿಮೆ ಗೋಚರವಾಗದೇ ಇರದು.

ಬ್ರಹ್ಮೇಂದ್ರರು ಭಾರತ ದೇಶಾದ್ಯಂತ ಸಂಚರಿಸಿ ಕಾವೇರಿ ನದಿಯ ಸಮೀಪದ ಸ್ಥಳಕ್ಕೆ ಹಿಂತಿರುಗಿದ ಮೇಲೆ ಬಹಳ ಕಾಲವನ್ನು ನೆರೂರಿನ ಆಸುಪಾಸಿನಲ್ಲಿ ಕಳೆಯುತ್ತಿದ್ದರು. ಸುಮಾರು ೧೭೫೦ ರಲ್ಲಿ ತಮ್ಮ ಭೌತಿಕ ದೇಹವನ್ನು ತ್ಯಜಿಸಲು ಸಂಕಲ್ಪಿಸಿದರು. ನೆರೂರಿನಲ್ಲಿದ್ದ ಬ್ರಾಹ್ಮಣವರೇಣ್ಯರನ್ನು ಬರಮಾಡಿ ಸಂಜ್ಞೆಯ ಮೂಲಕವೂ ಬರಹದ ಮೂಲಕವೂ ತಾವು ಜ್ಯೇಷ್ಠ ಶುದ್ಧ ದಶಮಿಯಂದು ಸಜೀವವಾಗಿ ಸಮಾಧಿ ಹೊಂದುವುದಾಗಿ ತಿಳಿಸಿ ಆಗಬೇಕಾದ ಏರ್ಪಾಡುಗಳನ್ನು ಮಾಡುವಂತೆ ಸೂಚಿಸಿದರು. ಯತೀಂದ್ರರ ಆದೇಶದಂತೆ ನಿರ್ದಿಷ್ಟ ಸ್ಥಳವನ್ನು ಶುಭ್ರಗೊಳಿಸಿ ಒಂದು ಗುಂಡಿಯನ್ನು ಅಗೆಸಿ ಬೇಕಾಗುವ ಕರ್ಪೂರ ಅರಿಸಿನ ಪುಡಿ ವಿಭೂತಿ ಇಟ್ಟಿಗೆಯ ಚೂರು ಪೂಜಾಸಾಮಗ್ರಿಗಳೆಲ್ಲವನ್ನೂ ಸಿದ್ಧಪಡಿಸಿದರು. ಈ ಸುದ್ದಿಯು ಎಲ್ಲೆಡೆಯೂ ಹರಡಿ ಜನರು ಕುತೂಹಲದಿಂದಲೂ ಕಾತುರದಿಂದಲೂ ಅಧಿಕಾಧಿಕವಾಗಿ ಬಂದು ಸೇರಿದರು.

ಸಮಾಧಿಯಾಗುವ ಮುನ್ನ ಬ್ರಹ್ಮೇಂದ್ರರು ಕೆಲವು ವಿಷಯಗಳನ್ನು ತಿಳಿಸಿದ್ದರು. ತಾವು ಸಮಾಧಿಯಾದ ಒಂಭತ್ತನೆಯ ದಿನ ಸಮಾಧಿಯ ಮೇಲೆ ಒಂದು ಬಿಲ್ವದ ಗಿಡವು ಕಾಣಿಸುವುದೆಂದೂ ಹನ್ನೆರಡನೆಯ ದಿನ ಒಬ್ಬ ಬ್ರಾಹ್ಮಣನು ಕಾಶಿಯಿಂದ ಬಾಣಲಿಂಗವೊಂದನ್ನು ತರುವನೆಂದೂ ಅದನ್ನು ಸಮಾಧಿಯ ಪೂರ್ವಕ್ಕೆ ೧೨ ಅಡಿಗಳ ದೂರದಲ್ಲಿ ಸ್ಥಾಪಿಸಿ ದೇವಾಲಯವನ್ನು ನಿರ್ಮಿಸಬೇಕೆಂದೂ ನಿರ್ದೇಶಿಸಿದರು.

ಸಮಾಧಿಸ್ಥರಾಗುವ ದಿನ ವೇದಘೋಷಗಳ ಮೊಳಗಿನಲ್ಲಿ ಬ್ರಹ್ಮೇಂದ್ರರು ಧ್ಯಾನದಿಂದ ಎದ್ದವರಾಗಿ ಪ್ರಸನ್ನ ಮನಸ್ಕರಾಗಿ ನಡೆದುಬಂದು ಸಿದ್ಧಪಡಿಸಿದ್ದ ಗುಂಡಿಯಲ್ಲಿ ಮೆಟ್ಟಲುಗಳ ಮೂಲಕ ಇಳಿದು ಅಲ್ಲಿ ಇರಿಸಿದ್ದ ಪೀಠದಲ್ಲಿ ಆಸೀನರಾಗಿ ಧ್ಯಾನಸ್ಥರಾಗಿ ಪರಬ್ರಹ್ಮನಲ್ಲಿ ಲೀನರಾದರು. ನಿರ್ವಾಹಕರು ಮೊದಲೇ ಅಪ್ಪಣೆಯಾಗಿದ್ದಂತೆ ವಿಧಿವಿಧಾನದಿಂದ ಗುಂಡಿಯನ್ನು ಮುಚ್ಚಿದರು. ಬ್ರಹ್ಮೇಂದ್ರರ ಭವಿಷ್ಯವಾಣಿಯಂತೆಯೇ ಒಂಭತ್ತನೆಯ ದಿನ ಸಮಾಧಿಯ ಮೇಲೆ ಕಾಣಿಸಿಕೊಂಡ ಬಿಲ್ವದ ಗಿಡವಿಂದು ಬೆಳೆದು ಹೆಮ್ಮರವಾಗಿದೆ. ಅವರ ಎರಡನೆಯ ಮಾತೂ ಸತ್ಯವಾಯಿತು. ಅವರು ಸಮಾಧಿಯಾದ ಹನ್ನೆರಡನೆಯ ದಿನ ಒಬ್ಬ ಬ್ರಾಹ್ಮಣನು ಬಾಣಲಿಂಗವನ್ನು ತಂದನು. ಅದನ್ನು ಸಮಾಧಿಗೆ ೧೨ ಅಡಿ ದೂರದಲ್ಲಿ ಸ್ಥಾಪಿಸಿ ದೇವಾಲಯವನ್ನು ನಿರ್ಮಿಸಲಾಗಿದೆ. ಆಗಮಶಾಸ್ತ್ರದ ರೀತ್ಯಾ ಶಿವನನ್ನೂ ಪಾರ್ವತಿದೇವಿಯನ್ನೂ ಪ್ರತಿಷ್ಠೆ ಮಾಡಿರುವರು. ರಾಜಾ ವಿಜಯರಾಘವ ತೊಂಡೈಮಾನ್ ದೇವಾಲಯದ ಪೂಜಾವಿಧಿಗಳು ಅನೂಚಾನವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ್ದನು. ಮುಂದೆ ವಿದೇಶೀಯರ ಧಾಳಿಯಿಂದಾಗಿ ಎರಡು ಶತಮಾನಗಳ ಕಾಲ ಇಲ್ಲಿಯ ಪೂಜಾವಿಧಿಗಳಲ್ಲಿ ವಿಘ್ನವು ಒದಗಿತ್ತು. ೧೯೧೨ ರಲ್ಲಿ ಮತ್ತೆ ಪುನರ್ವ್ಯವಸ್ಥೆಗಳು ಜರುಗಿ ಎಲ್ಲಾ ಪೂಜಾ ವಿಧಿಗಳೂ ಅಚ್ಚುಗಟ್ಟಾಗಿ ನಡೆಯುತ್ತಿವೆ. ಇಂದಿಗೂ ವೈಶಾಖ ಶುಕ್ಲ ಪಂಚಮಿಯಿಂದ ಆರಂಭಿಸಿ ಆರು ದಿನಗಳು ಉತ್ಸವ ಜರುಗಿಸಿ ದಶಮಿಯಂದು ಬ್ರಹ್ಮೇಂದ್ರರ ಆರಾಧನೆ ನಡೆಸಲಾಗುತ್ತಿದೆ.

ನಮ್ಮ ಭಾರತವು ಸಾಧುಸಂತರ ಬೀಡು. ಆಧ್ಯಾತ್ಮಿಕತೆಯ ನೆಲೆ. ಸುಸಂಸ್ಕೃತಿಯ ಆಗರ. ವೇದವಿದರ ಆವಾಸ. ಈ ನೆಲದಲ್ಲಿ ಆಗಿಹೋದ ಮಹಾನುಭಾವರು ಎಷ್ಟು ಮಂದಿಯೋ! ಈ ಪ್ರಾತಃಸ್ಮರಣೀಯರನ್ನೂ ಅವರ ಜೀವನವಿಧಾನವನ್ನೂ ಕಂಡುಕೊಂಡ ದರ್ಶನವನ್ನೂ ಪರಿಭಾವಿಸುವುದೇ ನಮ್ಮ ಸುಕೃತ.

◈







# ಮಾವಿನ ಸಿಹಿ-ಹುಳಿ ತೊಕ್ಕು

**ಮಂಜುಳಾ ವಿಶ್ವನಾಥ್**

ಮಿಲ್ಪೀಟಸ್, ಕ್ಯಾಲಿಫೋರ್ನಿಯಾ, *vishwamanju_AT_rediffmail.com*

**ಬೇಕಾಗುವ ಪದಾರ್ಥಗಳು:**

- ಚೆನ್ನಾಗಿ ಬಲಿತ ದೊಡ್ಡ ಮಾವಿನಕಾಯಿಗಳು - ಎರಡು
- ಹಸಿರು ಮೆಣಸಿನಕಾಯಿ : ೧೦-೧೨
- ಒಂದು ಸಣ್ಣ ಚಮಚ ಮೆಂತ್ಯ
- ಆರು ಚಮಚ ರಿಫೈನ್ಡ್ ಎಣ್ಣೆ
- ಸಾಸಿವೆ, ರುಚಿಗೆ ತಕ್ಕಷ್ಟು ಎಣ್ಣೆ, ಸಕ್ಕರೆ, ಉಪ್ಪು ಮತ್ತು ಇಂಗು

**ಮಾಡುವ ವಿಧಾನ:**

ಮಾವಿನಕಾಯಿಗಳನ್ನು ಚೆನ್ನಾಗಿ ತೊಳೆದು, ಸಿಪ್ಪೆ ತೆಗೆದು ತುರಿದು ಇಟ್ಟುಕೊಳ್ಳಿ. ಹಸಿಮೆಣಸಿನಕಾಯಿಗಳನ್ನು ತೊಳೆದು ಮಿಕ್ಸಿಗೆ ಹಾಕಿ ಪುಡಿಮಾಡಿಕೊಳ್ಳಿ. ಮಾವಿನ ತುರಿಯನ್ನೂ ಒಂದು ಬಾರಿ ಮಿಕ್ಸಿಗೆ ಹಾಕಿ ಆಡಿಸಿ.

ದಪ್ಪ ತಳದ ಪಾತ್ರೆಯಲ್ಲಿ ೬ ಚಮಚ ಎಣ್ಣೆ ಹಾಕಿ ಒಲೆಯಮೇಲೆ ಇಡಿ. ಎಣ್ಣೆ ಕಾದ ನಂತರ ಸಾಸಿವೆ, ಇಂಗು ಮತ್ತು ಮೆಂತ್ಯ ಹಾಕಿ. ಸಾಸಿವೆ ಸಿಡಿದು ಮೆಂತ್ಯ ಕೆಂಪಗಾದ ಮೇಲೆ ಮಾವಿನತುರಿ ಮತ್ತು ಹಸಿಮೆಣಸಿನಕಾಯಿ ಮಿಶ್ರಣವನ್ನು ಪಾತ್ರೆಯಲ್ಲಿ ಹಾಕಿ ಚೆನ್ನಾಗಿ ಕೂಡಿಸಿ. ಉರಿ ಸಣ್ಣಗೆ ಮಾಡಿ, ಮಾವಿನಕಾಯಿ ಬೆಂದು ಪೇಸ್ಟ್ ತರಹ ಆಗುವ ತನಕ ಕೂಡಿಸಿ ನಂತರ ಸ್ವಲ್ಪ ಸಕ್ಕರೆ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ತಳ ಬಿಡುವ ತನಕ ಚೆನ್ನಾಗಿ ಕೂಡಿಸಿ ಕೆಳಗಿಳಿಸಿ.

ಆರಿದ ನಂತರ ತೇವವಿಲ್ಲದ ಡಬ್ಬಿ ಅಥವಾ ಸೀಸೆಗೆ ಹಾಕಿ ಫ್ರಿಜ್‌ನಲ್ಲಿ ಇಟ್ಟರೆ ತಿಂಗಳುಗಟ್ಟಲೆ ಕೆಡದೇ ಉಳಿಯುತ್ತದೆ.

ಅನ್ನ, ಚಪಾತಿ, ರೊಟ್ಟಿ, ದೋಸೆ, ಬ್ರೆಡ್ ಎಲ್ಲದಕ್ಕೂ ನೆಂಚಿಕೊಳ್ಳಲು ರುಚಿಕರವಾದ ಆರೋಗ್ಯಕರವಾದ ವ್ಯಂಜನ.

◈



# ನಂಜನಗೂಡಿನಲ್ಲಿ ನಿಗೂಢ ರಾತ್ರಿ

**ರವಿ ಕೃಷ್ಣಾ ರೆಡ್ಡಿ**

ಮಿಲ್ಪೀಟಸ್, ಕ್ಯಾಲಿಫೋರ್ನಿಯ, *ravikreddy_AT_yahoo.com*

*ನನ್ನ ಮನಸ್ಸು ವಿಪರೀತ ಲೆಕ್ಕಾಚಾರದಲ್ಲಿ ತೊಡಗಿತ್ತು. ನಾವು ಯಾರೋ ಗಂಡಸರೇ ಆಗಿದ್ದರೆ ಏನಾದರೂ ಆಗಲಿ ಅನ್ನಬಹುದಿತ್ತು. ಆದರೆ ಒಂಬತ್ತು ತಿಂಗಳ ಚಿಕ್ಕ ಮಗುವಿನಿಂದ ಹಿಡಿದು ಮುದುಕಿ ಎನ್ನಬಹುದಾದ ಹೆಂಗಸರೆಲ್ಲ ಇದ್ದಾರೆ. ಇದ್ಯಾವ ತರಲೆ ಹುಟ್ಟಿಕೊಳ್ತು ಮಾರಾಯಾ?*

ಮೊನ್ನೆ ಜೂನ್‌ನಲ್ಲಿ ಹೆಂಡತಿ ಮತ್ತು ಮಗುವಿನೊಂದಿಗೆ ಭಾರತದ ಪ್ರವಾಸ ಹೋಗಿದ್ದಾಗ ಸುಮಾರು ನಾಲ್ಕು ವಾರಗಳನ್ನು ನನ್ನದೇ ತರಲೆ ತಾಪತ್ರಯಗಳಲ್ಲಿ, ಬರಬಾರದ, ಬಯಸಬಾರದ ಅನುಭವ ಮತ್ತು ಕಷ್ಟಗಳಲ್ಲಿ ಕಳೆದೆ. ಒಳ್ಳೆಯ ಸಮಯ ಇರಲೇ ಇಲ್ಲ ಅಂತಲ್ಲ; ಬೆಲ್ಲಕ್ಕಿಂತ ಬೇವೇ ಹೆಚ್ಚಿತ್ತು. ಹಾಗಾಗಿ, ಉಳಿದ ಒಂದು ವಾರದಲ್ಲಾದರೂ ಒಂದೆರಡು ದಿನ ಮನೆಯವರೆಲ್ಲರ ಜೊತೆ ಎಲ್ಲಾದರೂ ಹೋಗಿಬರೋಣ ಎಂದು ಶನಿವಾರ ಮಧ್ಯಾಹ್ನ ನಮ್ಮ ಕ್ವಾಲಿಸ್ ವ್ಯಾನಿನಲ್ಲಿ ಅಮ್ಮ, ಅಣ್ಣ, ಅತ್ತಿಗೆ, ಅಣ್ಣನ ಇಬ್ಬರು ಮಕ್ಕಳು, ನನ್ನ ಹೆಂಡತಿ ಮತ್ತು ನನ್ನ ಒಂಬತ್ತು ತಿಂಗಳ ಮಗುವಿನೊಂದಿಗೆ ಮೈಸೂರಿನತ್ತ ಹೊರಟೆವು; ಯಾವುದೇ ಪೂರ್ವಸಿದ್ಧತೆಗಳಿಲ್ಲದೆ. ಬೆಂಗಳೂರು ಹೊಸೂರು ರಸ್ತೆಯಲ್ಲಿರುವ ನನ್ನ ಊರಾದ ಬೊಮ್ಮಸಂದ್ರದಿಂದ ಹೊರಟು ಬೆಂಗಳೂರಿನ ಟ್ರಾಫಿಕ್ ಅನ್ನು ಭೇದಿಸಿಕೊಂಡು ಮೈಸೂರು ರಸ್ತೆ ಸೇರುವಷ್ಟರಲ್ಲಿ ನಮಗೆಲ್ಲಾ ಸಾಕುಸಾಕಾಗಿತ್ತು. ಡಬಲ್ ರೋಡ್ ಆಗುತ್ತಿರುವ ಆ ರಸ್ತೆಯಲ್ಲಿ ವೇಗ ನಿಧಾನಗಳನ್ನು ಅರ್ಥಮಾಡಿಕೊಳ್ಳುತ್ತ ರಾಮನಗರ ದಾಟಿ, ನಾಗೇಗೌಡರ ಪ್ರಸಿದ್ಧ ಜಾನಪದ ಲೋಕದ ಬಳಿಯ ಕಾಮತ್ ಲೋಕರುಚಿಯಲ್ಲಿ ಊಟಕ್ಕೆ ನಿಲ್ಲಿಸಿದೆವು. ಶುಚಿರುಚಿಯ ಜೋಳದ ರೊಟ್ಟಿ ಊಟ. ಮೈತೂಕ ಒಂದೆರಡು ಕೇಜಿ ಹೆಚ್ಚಾಯಿತೇನೋ! ಭಾರವಾದ ಮೈಯಿಂದಲೇ ನಿಧಾನಕ್ಕೆ ಜಾನಪದ ಲೋಕ ಸಂದರ್ಶಿಸಿದೆವು. ನೆನ್ನೆ ಮೊನ್ನೆಯ ಜೀವನ ಶೈಲಿ, ದಿನಬಳಕೆಯ ವಸ್ತುಗಳು ವಸ್ತು ಸಂಗ್ರಹಾಲಯ ಸೇರುತ್ತಿರುವ ವೇಗ ಹಾಗೂ ಬದಲಾಗುತ್ತಿರುವ ಪ್ರಪಂಚದ ದೃಷ್ಟಾಂತ ಈ ಜಾನಪದ ಲೋಕ ಎನ್ನಿಸಿತು.

ಇಲ್ಲಿಂದ ಹೊರಟ ನಮ್ಮ ವಾಹನ ಮುಂದೆ ನಿಂತದ್ದು ಶ್ರೀರಂಗಪಟ್ಟಣದ ಶ್ರೀರಂಗನ ದೇವಸ್ಥಾನದ ಪಕ್ಕದಲ್ಲಿಯೇ ಟಿಪ್ಪು ಕಟ್ಟಿಸಿರುವ ಬಂದೀಖಾನೆಯ ಮುಂದೆ, ಕಾವೇರಿಯ ದಡದಲ್ಲಿ. ಅಲ್ಲಿಂದ ಕಾವೇರಿ ನದಿ, ಅದರ ಮೇಲೆ ಕಟ್ಟಿರುವ ಬಸ್ಸು ರೈಲುಗಳ ಸೇತುವೆಗಳು, ಬೆಂಗಳೂರಿನತ್ತ ಹೊರಟಿದ್ದ ಉದ್ದದ ರೈಲು ವೀಕ್ಷಿಸಿ, ಕೆಂಡದ ಮೇಲೆ ಸುಟ್ಟು, ನಿಂಬೆ ರಸ, ಉಪ್ಪುಮೆಣಸು ಸವರಿದ ಜೋಳವನ್ನು ಮೆಲ್ಲುತ್ತಾ ದೇವಸ್ಥಾನದ ಕಡೆ ಹೊರಟೆವು. ಅಲ್ಲಿ ಕಂಡದ್ದು ಈ "ರಾಮು", ದೈತ್ಯ ಕುದುರೆ. ಇಪ್ಪತ್ತು ರೂಪಾಯಿಗೆ ನೂರಿನ್ನೂರು ಮೀಟರ್ ಸವಾರಿ. ಸರಿ ಎಂದು ಹತ್ತಿ ಕುಳಿತೆ. ಸವಾರಿ ಯಾವಾಗ ಮುಗಿಯುತ್ತದೆಯೋ ಎನ್ನುವಷ್ಟು ಹಿಂಸೆ, ಭಯ ಆಯಿತು. ಲಾಭ ಏನೆಂದರೆ ಅದು ನಡೆಯುತ್ತಿದ್ದಾಗ ಮೇಲೆ ಕುಳಿತಿದ್ದ ನನ್ನ ದೇಹ ಎಗರಿ ಎಗರಿ ಹೊಟ್ಟೆಗೆ ತೀಕ್ಷ್ಣವಾದ ವ್ಯಾಯಾಮ ಮತ್ತು ನಾನೇನಾದರೂ ಕುದುರೆ ಸವಾರಿ ಕಲಿಯಬೇಕಾದರೆ ಬಹುಶಃ ಇತರರಿಗಿಂತ ಹೆಚ್ಚೇ ಶ್ರಮ, ಅಭ್ಯಾಸ ಬೇಕು ಎಂಬ ಜ್ಞಾನೋದಯ.

ವಿರಾಮವಾಗಿ ದೇವಸ್ಥಾನ ನೋಡಿಕೊಂಡು ಆಚೆ ಬರುವಷ್ಟರಲ್ಲಿ ಇನ್ನೊಂದರೆ ತಾಸಿನಲ್ಲಿ ಕತ್ತಲಾಗುವ ಹಾಗೆ ಕಾಣಿಸಿತು. ಆದ್ದರಿಂದ ಬೇಗ ಕನ್ನಂಬಾಡಿ ಸೇರಿಕೊಳ್ಳುವ ಧಾವಂತದಲ್ಲಿ ಹೊರಟು ಅಲ್ಲಿಗೆ ತಲುಪಿ, ಹೊಸದಾಗಿ ಅಣೆಕಟ್ಟೆಯ ಕೆಳಗೇ ಮಾಡಿರುವ ವಾಹನ ನಿಲ್ದಾಣದಲ್ಲಿ ಗಾಡಿ ನಿಲ್ಲಿಸಿ, ತುಂತುರು ಮಳೆಯಲ್ಲಿ ಸಂಗೀತ ಕಾರಂಜಿಯತ್ತ ಹೊರಟೆವು. ಸುಮಧುರ, ಲಾಲಿತ್ಯ ಪೂರ್ಣ, ರಭಸಮಯ ಸಂಗೀತ; ಅದಕ್ಕೆ ತಕ್ಕಂತೆ ಮೈನುಲಿಯುವ, ಬಣ್ಣ ಬಣ್ಣದ ನೀರ್‌ಕಾರಂಜಿ. ದೋಣಿಯಲ್ಲಿ ಕಾರಂಜಿಯ ದಡದಿಂದ ಬೃಂದಾವನದ ದಡಕ್ಕೆ ಬಂದು ಅರೆಬರೆ ವಿದ್ಯುತ್ ಬೆಳಕಿನಲ್ಲಿ ಬೃಂದಾವನ ವೀಕ್ಷಿಸಿದೆವು. ಏನೇ ಹೇಳಿ, ಹಗಲು ಹೊತ್ತಿನಲ್ಲಿ ಕಾಣುವ ಆ ಉದ್ಯಾನವನದ ಸೌಂದರ್ಯ, ಬೆಡಗು, ವೈಶಾಲ್ಯತೆ, ಹಸಿರುಹುಲ್ಲು, ಬಣ್ಣಬಣ್ಣದ ಹೂವುಗಳ ವೈಭವ ರಾತ್ರಿಯ ವಿದ್ಯುತ್ ಬುಡ್ಡಿ ದೀಪಗಳ ಬೆಳಕಿನಲ್ಲಿ ಕಾಣುವುದಿಲ್ಲ.

ಬೃಂದಾವನದಿಂದ ಪಾರ್ಕಿಂಗ್ ಲಾಟ್‌ನತ್ತ ಬರುತ್ತಿದ್ದಾಗ ಅಲ್ಲಿ ಕಾಣಿಸಿದ ಆತ; ಎಂಟು ಅಡಿಯ ಲಂಬೂಜಿ. ಜನ ಅವನ ಪಕ್ಕ ನಿಂತು ಫೋಟೋ ತೆಗೆಸಿಕೊಳ್ಳುತ್ತಿದ್ದರು. ನನಗಿಂತ ಎರಡಕ್ಕೂ ಹೆಚ್ಚು ಅಡಿ ಎತ್ತರದವನು. ಅವನ ಪಕ್ಕ ನಿಂತ ಎಲ್ಲರೂ ಕುಬ್ಜರಾಗೇ ಕಾಣಿಸುತ್ತಿದ್ದರು. ಬಹುಶಃ ಪ್ರವಾಸೋದ್ಯಮ ಇಲಾಖೆಯವರು ನಿಲ್ಲಿಸಿರಬಹುದು. ಕನ್ನಡದವನೇ. ನಾನೂ ಹೋಗಿ ಅವನ ಪಕ್ಕ ನಿಂತು, ತಬ್ಬಿಕೊಂಡು ಮಾತನಾಡಿಸಿ ಬಂದೆ. ತಕ್ಷಣಕ್ಕೆ ಜ್ಞಾಪಕಕ್ಕೆ ಬಂದಿದ್ದು ಅಂದಿಗೆ ಎರಡು ಮೂರು ದಿನದ ಹಿಂದೆಯಷ್ಟೇ ಪ್ರಜಾವಾಣಿಯಲ್ಲಿ ಬಂದಿದ್ದ ಒಂದು ಫೋಟೋ. ಆಂಧ್ರಪ್ರದೇಶದ ಮುಖ್ಯಮಂತ್ರಿ ಡಾ. ರಾಜಶೇಖರ ರೆಡ್ಡಿಯವರ ಜೊತೆ ನಿಂತು ಫೋಟೋ ತೆಗೆಸಿಕೊಂಡಿದ್ದ ಎಂಟೂವರೆ ಅಡಿಯ ಇನ್ನೊಬ್ಬ ಲಂಬೂಜಿಯ ಚಿತ್ರ; ಆಕಾಶ ನೋಡುವಂತೆ ತಲೆ ಎತ್ತಿದ್ದ ರೆಡ್ಡಿ, ಮಗುವನ್ನು ನೋಡುವಂತೆ ಕೆಳಗೆ ನೋಡುತ್ತಿದ್ದ ಲಂಬೂ.

ಅಲ್ಲಿಂದ ಒಂದೈವತ್ತು ಅಡಿಗಳ ದೂರದಲ್ಲಿ ಮತ್ಸ್ಯಾಲಯಕ್ಕೆ ಹೋಗುವ ದಾರಿಯ ಪಕ್ಕದಲ್ಲಿದ್ದ ಮೀನು ಕಬಾಬ್ ಹೋಟೆಲಿನ ಮುಂದೆ ನಾನು ಮತ್ತೆ ನನ್ನಣ್ಣ ಕುಳಿತು, ಮಕ್ಕಳು ಹೆಂಗಸರೆಲ್ಲಾ ಮತ್ಸ್ಯಾಲಯ ವೀಕ್ಷಿಸಲು ಹೋಗಿದ್ದರೆ, ಚೆನ್ನಾಗಿ ಉಪ್ಪುಖಾರ ಬೆರೆಸಿ ಕರಿದಿದ್ದ ಮೀನುಗಳ ಮುಳ್ಳನ್ನು ನಿಧಾನವಾಗಿ ಬಿಡಿಸುತ್ತ, ನಮ್ಮ ಜಠರದಲ್ಲಿ ಮತ್ಸ್ಯಗಳಿಗೆ ಆಲಯ ಮಾಡಿಕೊಡುತ್ತ, ಲಂಬೂಜಿಗಳ ಕಷ್ಟಸುಖ ಯೋಚಿಸುತ್ತ ಕುಳಿತೆವು. ಆರೂಕಾಲು ಅಡಿಯ ಬಸ್ಸುಗಳಲ್ಲಿ ಈ ಎಂಟು ಅಡಿಯ ಜನರು ನಿಲ್ಲುವ ಬಗೆ, ಕುಳಿತುಕೊಳ್ಳುವ ಕಷ್ಟ, ಕಾರು ಜೀಪುಗಳಲ್ಲಿ ಮುಂದಿನ ಸೀಟಿನಲ್ಲಿಯೇ ಕೂರಬೇಕಾದ, ಇಲ್ಲ ಹಿಂದಿನ ಸೀಟಿನ ತುಂಬಾ ಒರಗಿಕೊಳ್ಳುವ ಕಷ್ಟದ ಬಗ್ಗೆ, ಮತ್ತಿತರ ನಮಗೆ ಗೊತ್ತಿಲ್ಲದ, ಗೊತ್ತಾಗದ ವಿಚಾರಗಳ ಬಗ್ಗೆ ಲಂಬೂಜಿಯನ್ನು, ಆತನನ್ನು ಮಾತನಾಡಿಸುತ್ತಿದ್ದ ಜನರನ್ನು ಗಮನಿಸುತ್ತ ಮಾತನಾಡಿಕೊಂಡೆವು. ಜೀವನ ಎಷ್ಟು ವಿಸ್ಮಯ, ಅಲ್ಲವೇ?

ಅಷ್ಟೊತ್ತಿಗೆ ಒಂಬತ್ತರ ಮೇಲಾಗಿತ್ತು. ಆದಷ್ಟು ಬೇಗ ನಂಜನಗೂಡು ಸೇರಿಕೊಳ್ಳುವ ಧಾವಂತ. ಮೈಸೂರಿನ ಉತ್ತರಕ್ಕಿರುವ ಕನ್ನಂಬಾಡಿಯಿಂದ ದಕ್ಷಿಣಕ್ಕಿರುವ ನಂಜನಗೂಡಿನತ್ತ ರಾತ್ರಿಯ ಊಟ ಸಹ ಮಾಡದೆ, ಮೈಸೂರಿನ ಒಳಗೆ ದಾರಿ ಕೇಳುತ್ತಾ, ನಂಜನಗೂಡಿನ ದೇವಸ್ಥಾನ ಮುಟ್ಟುವಷ್ಟಕ್ಕೆ ಹತ್ತರ ಮೇಲಾಗಿತ್ತು. ದೇವಸ್ಥಾನದ ಪಕ್ಕದಲ್ಲಿದ್ದ ಛತ್ರದಲ್ಲಿ ಜನಜಂಗುಳಿ. ಯಾವುದೇ ಕೊಠಡಿಗಳನ್ನು ಮುಂಚೆಯೇ ಕಾದಿರಿಸದೇ ಭಂಡ ಧೈರ್ಯದಿಂದ ಹೆಂಗಸರು ಮತ್ತು ೭, ೪ ಮತ್ತು ಮುಕ್ಕಾಲು ವರ್ಷ ವಯಸ್ಸಿನ ಹೆಣ್ಣು ಮಕ್ಕಳೊಂದಿಗೆ ರೂಮು ವಿಚಾರಿಸಲು ಹೋದಾಗ "ನೋ ವೇಕೆನ್ಸಿ". ನಮಗೆ ನಂಜಿನ, ನಂಜುಂಡ ಅನುಭವ. ಮದುವೆ ಸೀಸನ್ ಬೇರೆ; ವಾರಾಂತ್ಯ ಬೇರೆ ಸಾಲದ್ದಕ್ಕೆ. ಪಟ್ಟಣದ ಒಳಗಿರುವ ಇತರ ನಿವಾಸ, ವಿಲಾಸಗಳಲ್ಲೆಲ್ಲ ಇದೇ ಉತ್ತರ. ಮೈಸೂರು ರಸ್ತೆಯಲ್ಲಿನ ಹೊಯ್ಸಳದಲ್ಲಿಯೂ ಅದೇ ಉತ್ತರ. ಹನ್ನೊಂದಾಗುತ್ತ ಬಂದಿತ್ತು. ಇನ್ನೇನು ಮೈಸೂರಿಗೇ ಹೋಗೋಣ ಎಂದು ಒಂದು ಲಾಡ್ಜಿನ ಮುಂದೆ ನಿಂತು ಯೋಚಿಸುತ್ತಾ ಇದ್ದಾಗ "ಊಟಿ ಕಡೆಗೆ ಹೋಗುವ ರಸ್ತೆಯಲ್ಲಿ ಒಂದೆರಡು ಕಿಲೋಮೀಟರ್ ಹೋದರೆ ವಿದ್ಯಾನಗರದಲ್ಲಿ ಒಂದು ಲಾಡ್ಜ್ ಇದೆ. ಅಲ್ಲಿ ಪ್ರಯತ್ನಿಸಿ" ಅಂದರು ಒಬ್ಬರು. ಸರಿ, ಕೊನೆಯ ಪ್ರಯತ್ನ ಎಂದು ಹೊರಟೆವು.

ಅವರು ಹೇಳಿದ ಹೆಸರಿನ ಲಾಡ್ಜ್ ಹುಡುಕುತ್ತಾ ಹೊರಟ ನಮಗೆ ಸಿಕ್ಕಿದ್ದು ಇತ್ತೀಚೆಗೆ ತಾನೆ ಹೆಸರು ಬದಲಾಯಿಸಿಕೊಂಡ, ಹೊಸದಾಗಿ ಸುಣ್ಣ ಬಳಿಸಿಕೊಂಡಿದ್ದ ಲಾಡ್ಜ್. ನಮ್ಮ ಅದೃಷ್ಟಕ್ಕೆ ಅಲ್ಲಿ ಮೂರ್ನಾಲ್ಕು ರೂಮುಗಳಿದ್ದವು. ತಲಾ ೧೫೦ ರೂ. ಊರಿನ ಹೊರಗಿದ್ದ, ಸುತ್ತಮುತ್ತ ಅಷ್ಟೇನೂ ಮನೆಗಳಿಲ್ಲದ, ಸ್ವಲ್ಪ ಭಯ ಹುಟ್ಟಿಸುವ ವಾತಾವರಣವಿದ್ದರೂ, ಬೇರೆ ಯೋಚಿಸದೆ ಮೂರು ರೂಮುಗಳನ್ನು ತೆಗೆದುಕೊಂಡೆವು. ಅಷ್ಟೊತ್ತಿಗೆ ನಮ್ಮಲ್ಲಿ ಒಂದಿಬ್ಬರಿಗೆ ಹಸಿವಿನ ಪರಿವೆ ಆಯಿತು. ಅಲ್ಲಿ ತಿಂಡಿಯ ಹೋಟೆಲ್ ಇಲ್ಲದ್ದರಿಂದ ರೂಮುಗಳನ್ನು ಸಹ ನೋಡದೆ ಮತ್ತೆ ನಂಜನಗೂಡಿಗೆ ಹೊರಟೆವು. ಬಾರುಗಳು ಮಾತ್ರ ತೆರೆದಿದ್ದವು. ಯಾವುದೋ ಒಂದು ಜಾಗದಲ್ಲಿ ಬೇಕರಿ ಮತ್ತು ಒಂದು ಸಣ್ಣ ಹೋಟೆಲ್ ಇನ್ನೇನು ಮುಚ್ಚುವ ಗಡಿಬಿಡಿಯಲ್ಲಿದ್ದವು. ಆದರೂ ಅದು ಹೇಗೋ ಇನ್ನೂ ಬಿಸಿಯಾಗಿದ್ದ ತಟ್ಟೆ ಇಡ್ಲಿ, ರುಚಿಯಾಗಿದ್ದ ಚಟ್ನಿ ಇನ್ನೂ ರುಚಿ ಎನ್ನಿಸಿದವು. ಚಿಕ್ಕ ಮಗುವಿಗೆ ಅಲ್ಲೇ ಸ್ವಲ್ಪ ಹಾಲು ಕಾಯಿಸಿಕೊಂಡು ಲಾಡ್ಜಿಗೆ ಹಿಂದಿರುಗಿದಾಗ ಮಧ್ಯರಾತ್ರಿ.

ಮೊದಲ ಸಲ ಹೋಗಿದ್ದಾಗ ಚೆನ್ನಾಗಿಯೇ ಇದ್ದ ಲಾಡ್ಜಿನ ಮ್ಯಾನೇಜರ್ ಗಿರಾಕಿ ಸಿಕ್ಕ ಖುಷಿಯಲ್ಲಿ ಅಷ್ಟೊತ್ತಿಗೆ ಸರ್ವರೋಗಗಳಿಗೆ ಮದ್ದಾದ ಸಾರಾಯಿ ಪರಮಾತ್ಮನನ್ನು ಹೊಟ್ಟೆಯಲ್ಲಿ ಭದ್ರಪಡಿಸಿಟ್ಟುಕೊಂಡದ್ದು ಗೊತ್ತಾಯಿತು. ಹಾಳಾಗಿ ಹೋಗಲಿ ಎಂದು ಒಂದು ರೂಮಿನಲ್ಲಿ ಅಣ್ಣ ಅತ್ತಿಗೆ, ಮತ್ತೊಂದರಲ್ಲಿ ನಮ್ಮಮ್ಮ, ಅಣ್ಣನ ಚಿಕ್ಕ ಮಕ್ಕಳು, ಮಗದೊಂದರಲ್ಲಿ ನಾನು, ನನ್ನಾಕೆ ಮತ್ತು ನಮ್ಮ ಒಂಬತ್ತು ತಿಂಗಳ ಮಗು ಮಲಗಲು ಸಿದ್ಧತೆ ಮಾಡಿಕೊಂಡೆವು. ಆಗ ಬಂದ ಕುಡುಕ ಮ್ಯಾನೇಜರ್ ಹೊರಗೆ ನಿಲ್ಲಿಸಿದ್ದ ನಮ್ಮ ಸ್ಕಾರ್ಪಿಯೊ ವಾಹನವನ್ನು ಒಳಗೆ ನಿಲ್ಲಿಸಲು ಹೇಳಿದ. ಅಲ್ಲಿ ಇದ್ದದ್ದೆ ಏಳೆಂಟಡಿ ಅಗಲದ, ಆದರೆ ೨೦ ಅಡಿ ಉದ್ದದ ಜಾಗ. ಕಸರತ್ತು ಮಾಡಿ ಒಳಗೆ ತಂದು ನಿಲ್ಲಿಸಿದ ಗಾಡಿಯ ಅಕ್ಕಪಕ್ಕ ಮಿಕ್ಕಿದ್ದು ಒಂದೂವರೆ ಅಡಿ ಅಷ್ಟೇ. ಅದಾದ ಐದ್ಹತ್ತು ನಿಮಿಷಗಳಿಗೆ ಇನ್ನೊಂದು ಗಾಡಿ, ಟೊಯೋಟ ಕ್ವಾಲಿಸ್, ಅದೇ ತರಹ ಉಳಿದ ಜಾಗದಲ್ಲಿ ಬಂದು ನಿಂತಿತು. ಅದರಿಂದಲೂ ಸಹ ಇಬ್ಬರೇ ಇಬ್ಬರು ಗಂಡಸರು (ನರಪೇತಲಗಳು ಮತ್ತೂ ಇನ್ನೂ ೨೦-೨೫ ದಾಟದವರು), ಹಾಗೂ ನಾಲ್ಕೈದು ಹೆಂಗಸರು ಮಕ್ಕಳು ಇಳಿದರು. ಮ್ಯಾನೇಜರ್ ಒಳಗಿನಿಂದ ಕಬ್ಬಿಣದ ಷಟರ್‌ನಂತಿದ್ದ ಬಾಗಿಲನ್ನು ಭದ್ರವಾಗಿ ಮುಚ್ಚಿ, ಬೀಗ ಹಾಕಿ, ಹೊರಗಿನಿಂದ ಸೊಳ್ಳೆಯೂ ಬರದ ಹಾಗೆ ಮಾಡಿ ಲಾಡ್ಜ್ ಹೌಸ್‌ಫುಲ್ ಆದ ಖುಷಿಯಲ್ಲಿ ತನ್ನ ಆಫೀಸಿನತ್ತ ಹೊರಟ.

ಊಟದ ಐದಾರು ಗಂಟೆಗಳ ರಾತ್ರಿ ಕಳೆದರೆ ಸಾಕು ಎಂದು ಚಿಕ್ಕದಾಗಿದ್ದ ಮಂಚದಲ್ಲಿ ಮಗುವಿಗೆ ತೊಂದರೆಯಾಗದ ರೀತಿಯಲ್ಲಿ ಮಲಗಿದ್ದೇ ನಿದ್ರಾದೇವಿ ಅಪ್ಪಿಕೊಂಡಳು. ಆ ಸುಖವಾದ ಅಪ್ಪುಗೆಯನ್ನು ಬಿಡಿಸಿದ್ದು ಕರ್ಕಶವಾಗಿ, ಭಯಂಕರ ಸದ್ದು ಮಾಡುತ್ತಾ ಕೇಳಿಸಿದ ಕಾಲಿಂಗ್ ಬೆಲ್‌ನ ಸಂಗೀತ. ಕಣ್ಣು ಬಿಟ್ಟು ನೋಡಿದರೆ ಎಲ್ಲೆಲ್ಲೂ ಕತ್ತಲೆ. ಮತ್ತೆ ಒಂದೆರಡು ಬಾರಿ ಒಂದೆರಡು ನಿಮಿಷಗಳ ಅಂತರದಲ್ಲಿ ಕರೆಗಂಟೆಯ ಕಿರಿಕಿರಿ ಪುನರಾವರ್ತನೆ. ನಿದ್ದೆಗೂ ಎಚ್ಚರಕ್ಕೂ ಮಧ್ಯೆ ಹೊಯ್ದಾಟ. ಆಚೆಯಿಂದ ಬಾಗಿಲು ತೆಗೆಯಿರಿ ಎಂದು ಒಂದಿಬ್ಬರು ಗಂಡಸರ ಕುಯ್ಲಾಟ. ಒಳಗಿನಿಂದ ಉತ್ತರಿಸುವವರೇ ಇಲ್ಲ. ಆಗ ಕೇಳಿಸಿದ್ದು "ಧಢುಂ" ಎಂದು ಕಬ್ಬಿಣದ ಬಾಗಿಲನ್ನು ಜೋರಾಗಿ ಒದ್ದ ಶಬ್ದ. ನಿದ್ದೆ ಪೂರ್ತಿ ಹಾರಿ ಹೋಯಿತು. ಸಮಯ ನೋಡಲು ಕತ್ತಲಿನಲ್ಲಿ ಮೊಬೈಲ್‌ಗೆ ತಡಕಾಡಿ ಅದರಲ್ಲಿ ಯಾವುದೋ ಕೀ ಒತ್ತಿ ನೋಡಿದರೆ ಆಗ ತಾನೇ ಒಂದು ಗಂಟೆಯಾಗಿತ್ತು. ಅಂದರೆ ನಾವು ನಿದ್ದೆಗೆ ಜಾರಿ ಒಂದು ಗಂಟೆಯೂ ಆಗಿಲ್ಲ!

ಆಗ ಶುರುವಾಯಿತು ಭಯ, ಅಧೈರ್ಯ. ಇಷ್ಟು ಸರಿರಾತ್ರಿಯಲ್ಲಿ ಲಾಡ್ಜಿನ ಒಳಗೆ ಹೀಗೆ ಬಲಾತ್ಕಾರದಿಂದ ಬೆದರಿಸಿ ಒಳಗೆ ಬರಲು ಪ್ರಯತ್ನಿಸುತ್ತಿರುವವರು ಯಾರೋ ಕೇಡಿಗಳೆ ಇರಬೇಕು ಎನ್ನಿಸಿತು. ಮತ್ತೆ ಈ ಸಾರಿ ಬಾಗಿಲನ್ನೇ ಹೊಡೆದು ಒಳಗೆ ಬರುವಷ್ಟು ಜೋರಿನಲ್ಲಿ ಬಾಗಿಲನ್ನು ಗುದ್ದಿದ ಶಬ್ದ. ಜೋರಾಗಿ ಬಾಗಿಲು ತೆಗೆಯಲು ಹೆದರಿಸುತ್ತಿದ್ದ ಮಾತು. ಪಕ್ಕದಲ್ಲಿದ್ದ ನನ್ನಾಕೆಗೂ ನಿದ್ದೆ ಹಾರಿಹೋಗಿ, ಭಯ ಹಾರಿಬಂದಿತ್ತು. ಮಗು ಮಾತ್ರ ಲೋಕ ವ್ಯಾಪಾರದ ಚಿಂತೆಯೇ ಇಲ್ಲದೆ ನಿದ್ದೆ ಮಾಡುತ್ತಿತ್ತು.

ಅಷ್ಟೊತ್ತಿಗೆ ಲಾಡ್ಜಿನ ಒಳಗೆ ಲೈಟ್ ಹಾಕಿ, ಬಹುಶಃ ರೂಮ್ ಬಾಯ್ ಇರಬಹುದು, ಮ್ಯಾನೇಜರ್‌ಗಾಗಿ ಹುಡುಕಲಾರಂಭಿಸಿದ. ಇದು ನಮಗೆ ಗೊತ್ತಾಗಲಿಲ್ಲ. ನಮ್ಮ ರೂಮಿನ ಬಾಗಿಲು ಬಡಿದು ಯಾವುದೋ ಹೆಸರು ಹಿಡಿದು ಕೂಗಿದ. ಭಯಪಟ್ಟವನ ಮೇಲೆ ಸತ್ತ ಸರ್ಪ ಹಾಕಿದ ಅನುಭವ. "ಇಲ್ಲಿ ಅವರ್ಯ್ಯಾರೂ ಇಲ್ಲಾರಿ" ಅಂದೆ ನಾನು, ಏಳದೇ, ಬಾಗಿಲು ತೆಗೆಯದೇ; ಆದರೆ ಪೂರ್ಣ ಎಚ್ಚರದ ಸ್ಥಿತಿಯಲ್ಲಿ. ಪಕ್ಕದ ರೂಮಿನಲ್ಲಿದ್ದ ನಮ್ಮವರ ಬಗ್ಗೆ ಅಷ್ಟೊತ್ತಿಗೆ ಯೋಚನೆ ಭಯಂಕರವಾಗಿ ಪ್ರಾರಂಭವಾಗಿತ್ತು. ಬಾಗಿಲು ತೆಗೆದು ಪಕ್ಕದ ರೂಮುಗಳಿಗೆ ಹೋಗಿ ಮಕ್ಕಳನ್ನು ನೋಡುವುದೇ, ಹೇಗೆ? ಇನ್ನೂ ಸ್ವಲ್ಪ ಹೊತ್ತು ನೋಡೋಣ, ಬಾಗಿಲು ತೆಗೆಯುವುದು ಬೇಡ ಎಂದು ನನ್ನಾಕೆಗೆ ಹೇಳಿದೆ. ಆಕೆ ಮುದುಡಿಕೊಂಡು ಒಂದು ರೀತಿಯ ಎಂದೂ ಇಲ್ಲದ ಭೀತಿಯಲ್ಲಿ ಮಲಗಿದ ಹಾಗೆ ಎನ್ನಿಸಿತು.

ಆಚೆಯಿಂದ ಜೋರು ಮಾಡುವುದು, ಬಾಗಿಲನ್ನು ಒದೆಯುವುದು ನಿರಾತಂಕವಾಗಿ ನಿಲ್ಲದೆ ನಡೆಯುತ್ತಿತ್ತು. ಸುಮಾರು ಹತ್ತು ನಿಮಿಷಗಳಿಂದ ನಡೆಯುತ್ತಿದ್ದರಿಂದ ಬಹುಶಃ ಒಳಗಿದ್ದವರಿಗೆಲ್ಲಾ ನಿದ್ದೆ ಹಾರಿ ಹೋಗಿರಬೇಕು. ನನ್ನ ಮನಸ್ಸು ವಿಪರೀತ ಲೆಕ್ಕಾಚಾರದಲ್ಲಿ ತೊಡಗಿತ್ತು. ನಾವು ಯಾರೋ ಗಂಡಸರೇ ಆಗಿದ್ದರೆ ಏನಾದರೂ ಆಗಲಿ ಅನ್ನಬಹುದಿತ್ತು. ಆದರೆ ಒಂಬತ್ತು ತಿಂಗಳ ಚಿಕ್ಕ ಮಗುವಿನಿಂದ ಹಿಡಿದು ಮುದುಕಿ ಎನ್ನಬಹುದಾದ ಹೆಂಗಸರೆಲ್ಲ ಇದ್ದಾರೆ. ಇದ್ಯಾವ ತರಲೆ ಹುಟ್ಟಿಕೊಳ್ತು ಮಾರಾಯಾ? ಕೇಡಿಗಳೇನಾದರೂ ಲಾಡ್ಜಿನ ಒಳಗೆ ಬಂದುಬಿಡುವ ಪರಿಸ್ಥಿತಿ ಬಂದರೆ ಹೇಗೆ? ಅವರ ಆಲೋಚನೆ ಏನಿದೆ? ಎಷ್ಟು ಜನ ಇದ್ದಾರೆ? ಅವರನ್ನು ನಾವೇ ಎದುರಿಸುವ ಬಗೆ ಹೇಗೆ? ಅವರು ಸ್ಥಳೀಯರೇ ಇರಬೇಕು. ನಾವು ಪರಸ್ಥಳದವರು. ಅವರಿಗಿರುವ ಕೆಲವೊಂದು ಅಡ್ವಾಂಟೇಜಸ್ ನಮಗಿರುವುದಿಲ್ಲ. ಸರಿ. ಎದುರಿಸಲೇಬೇಕಾದ ಪರಿಸ್ಥಿತಿ ಬಂದಾಗ ಆದಷ್ಟು ಬೇಗ ಹೆಂಗಸರು ಮಕ್ಕಳನ್ನೆಲ್ಲಾ ಒಂದು ರೂಮಿನಲ್ಲಿ ಸೇರಿಸಿ ನಾನು ಮತ್ತೆ ನನ್ನಣ್ಣ ಹೇಗೆ ಅವರನ್ನು ಎದುರಿಸಬೇಕು; ನಾವು ಸ್ಕಾರ್ಪಿಯೊದಲ್ಲಿ ಕುಳಿತು, ಇದ್ದ ಆ ಒಂದೆರಡು ಅಡಿ ಜಾಗದಲ್ಲಿಯೇ ಅವರನ್ನು ಅಟಕಾಯಿಸಿಕೊಳ್ಳಬೇಕು. ಒಳಗೆ ಇರುವ ಇತರರು ಏನಾದರೂ ಉಪಯೋಗಕ್ಕೆ ಬಂದಾರೇ? ಪೋಲೀಸ್ ಠಾಣೆಗೆ ದೂರವಾಣಿ ಕರೆ ಮಾಡಿದರೆ ಹೇಗೆ? ಮೊಬೈಲ್ ಏನೋ ಇದೆ, ಒಂದೆರಡು ಸಿಗ್ನಲ್‌ಗಳೂ ಇವೆ, ಆದರೆ ನಂಬರ್? ೧೦೦ ನಂಬರ್ ಕೆಲಸ ಮಾಡುತ್ತದೆಯೇ? ಅದು ಕೆಲಸ ಮಾಡದೇ ಇದ್ದಾಗ ಊರಿಗೆ ಕಾಲ್ ಮಾಡಿ ಅಲ್ಲಿಂದ ಇಲ್ಲಿಯ ಪೋಲೀಸ್ ಠಾಣೆಗೆ ಹೇಗಾದರೂ ಮಾಡಿ ಸುದ್ದಿ ಮುಟ್ಟಿಸುವ ಸಾಧ್ಯತೆ ಇದೆಯೇ? ಅವೆಲ್ಲಕ್ಕೂ ಸಮಯ ಇದೆಯೇ? ಶರವೇಗದ ಚಿಂತನೆ ಎಂದರೆ ಬಹುಶಃ ನಾನು ಯೋಚಿಸುತ್ತಿದ್ದ ವೇಗವೇ ಇರಬೇಕು!

"ಯಾವನೋ ಅವನು ಧಢ ಧಢ ಅಂತ ಬಾಗಿಲು ತಟ್ಟಿರೋದು? ತಲೆಗಿಲೆ ಕೆಟ್ಟಿದೆಯಾ?", ನನ್ನ ಅಣ್ಣನ ಗಡಸು ಕಂಠ ನನ್ನ ಯೋಚನಾಲಹರಿಯನ್ನು ಕತ್ತರಿಸಿತು. ಅಯ್ಯೋ, ಇವರೇಕೆ ಕೋಣೆಯಿಂದ ಆಚೆಗೆ ಬಂದರು ಎಂದುಕೊಂಡೆ. ನಿದ್ದೆ ಮಾಡುತ್ತಿರುವಾಗ ಯಾರಾದರೂ ಅನವಶ್ಯಕವಾಗಿ ಎಬ್ಬಿಸಿದರೆ, ಕೆರಳಿದ ಸಿಂಹ ಅವರು. ಮೊದಲೇ ತೊಂಬತ್ತೈದು ಕೇಜಿ ತೂಕದ ಬಲಶಾಲಿ ಆಸಾಮಿ. ಮನಸ್ಸು ಮಾಡಿದರೆ ಬಾಗಿಲು ತೆಗೆದು ಎದುರಿಸಲು ಸಿದ್ಧವಾಗುವವರು. ಅವರು ಹಾಗೆ ಇಂತಹದೇ ಪರಿಸ್ಥಿತಿಗಳಲ್ಲಿ ಈ ಮೊದಲು ಮಾಡಿದ್ದೂ ಉಂಟು. ನಾನೇನೋ ಒಳಗಿದ್ದುಕೊಂಡೇ ಇವರನ್ನು ಹೇಗೆ ಎದುರಿಸುವುದು ಎಂದು ಯೋಚಿಸುತ್ತಿದ್ದರೆ ಇವರು ಆಚೆ ಬಂದು ಬಿಟ್ಟಿದ್ದಾರಲ್ಲ? ಇನ್ನು ಯಾವುದು ಏನು ಆಗುತ್ತೋ, ಇವರೇನಾದರೂ ಕಬ್ಬಿಣದ ಬಾಗಿಲು ತೆಗೆದುಬಿಟ್ಟರೆ ನಮಗಿರುವ ಅಡ್ವಾಂಟೇಜ್ ಕಳೆದುಹೋಗಿಬಿಡುತ್ತದೆಯಲ್ಲ ಎಂದುಕೊಂಡು, ಇನ್ನು ಒಳಗಿರುವುದು ಸಲ್ಲ ಎಂದು ನಾನೂ ತಕ್ಷಣ ಬಾಗಿಲು ತೆಗೆದುಕೊಂಡು ಕೋಣೆಯಿಂದ ಹೊರಗೆ ಬಂದೆ.

"ಏಯ್, ಏನಯ್ಯ ನಿನ್ನ ಹೆಸರು?" ಅಣ್ಣ ಗಟ್ಟಿಯಾಗಿ ವಿಚಾರಿಸುತ್ತಿದ್ದರು ಈ ಮೊದಲು ಮ್ಯಾನೇಜರ್‌ನನ್ನು ಹುಡುಕುತ್ತಾ ನನ್ನ ರೂಮಿನ ಬಾಗಿಲು ತಟ್ಟಿದ್ದ, ಸುಮಾರು ಐವತ್ತು ವರ್ಷದ ರೂಮ್ ಬಾಯ್‌ನನ್ನು (ರೂಮ್ ಮ್ಯಾನ್?). ಆತ "ಸುಬ್ರ್ಯ" ಎನ್ನುವಂತೆ ಉತ್ತರಿಸಿದ. ನನಗೆ ಅರ್ಥವಾಗದೆ, ಏನು? ಅಂದೆ. ಮತ್ತೆ ಅದೇ "ಸುಬ್ರ್ಯ" ಎಂದ. ಮೊದಲೇ ಆಚೆ ಗಲಾಟೆ, ಮಧ್ಯೆ ಈತನ ಅರ್ಥವಾಗದ ಹೆಸರು. ರೇಗಿಹೋಯಿತು. "ಅದೇನೋ ಸ್ವಲ್ಪ ನಿಧಾನವಾಗಿ ಸರಿಯಾಗಿ ಹೇಳ್ರಿ", ಗದರಿದೆ. ಆಗ ನಿಧಾನವಾಗಿ "ಸುಬ್ಬರಾಯ" ಎಂದ.

ಅಷ್ಟೊತ್ತಿಗೆ ನಾವು ಮೂವರೂ ಒಳಗೆ ಜೋರಾಗಿ ಮಾತನಾಡುತ್ತಿದ್ದರಿಂದ ಆಚೆ ಬಾಗಿಲು ಒದೆಯುವುದು ನಿಂತಿತ್ತು. "ಆಚೆ ಇರೋರು ಯಾರು ಗೊತ್ತಾ ನಿನಗೆ" ಎಂದು ಸುಬ್ಬರಾಯರನ್ನು ನಮ್ಮಣ್ಣ ಕೇಳಿದರು. ಆತ ಇಲ್ಲ ಅಂದ. ಮತ್ತೆ ಮ್ಯಾನೇಜರ್ ಎಲ್ಲಿ ಎಂದು ಕೇಳಲು "ಆಗಲಿಂದ ಎಲ್ಲಾ ಕಡೆ ಹುಡುಕ್ತಿದ್ದೀನಿ. ಯಾವ್ ರೂಮ್‌ನಲ್ಲಿದ್ದಾರೋ ಗೊತ್ತಾಗ್ತಾ ಇಲ್ಲಾ" ಎಂದ. ತಾನು ಕೆಲಸ ಮಾಡುತ್ತಿರುವ ಲಾಡ್ಜಿನಲ್ಲೇ ಎಲ್ಲಿ ಏನಿದೆ, ಏನಾಗ್ತಾ ಇದೆ ಎಂದು ತಿಳಿಯದ ಮುಗ್ಧ. ಈ ಮುನ್ನ ಸಂತೃಪ್ತನಾಗಿದ್ದ ಮ್ಯಾನೇಜರ್‌ನನ್ನು ನೋಡಿದ್ದ ನಮಗೆ ಚೆನ್ನಾಗಿ ಕುಡಿದು ಚಿತ್ತಾಗಿರುವ ಆತ ಈಗ ಸಿಕ್ಕರೂ ಈ ಪ್ರಪಂಚದಲ್ಲಂತೂ ಇರುವುದಿಲ್ಲ ಎನ್ನಿಸಿತು. ಆಗಾಗಲೇ ನನ್ನಣ್ಣನಿಗಿರದ ಭಯ, ಚಳಿ ನೋಡಿ ಅವು ನನ್ನಿಂದಲೂ ದೂರವಾಗಿಬಿಟ್ಟವು.

ಹೊರಗೆ, ಒಳಗೆ ಇಷ್ಟೆಲ್ಲ ಗಲಾಟೆ ನಡೆಯುತ್ತಿದ್ದಾಗ ಅಲ್ಲಿ ಒಂದು ರೂಮಿನ ಬಾಗಿಲು ಸ್ವಲ್ಪ ತೆರೆದಿದ್ದು ಕಾಣಿಸಿತು. ಆದರೆ ಆ ರೂಮಿನಿಂದ ಯಾರೂ ಈಚೆಗೆ ಬಂದಿರಲಿಲ್ಲ. ಇಣುಕಿ ನೋಡಿದರೆ ಇಬ್ಬರು ಗಂಡಸರು ಗಾಢ ನಿದ್ರೆಯಲ್ಲಿದ್ದಾರೆ. ಹೊಸ್ತಿಲ ಪಕ್ಕ ಎರಡು ಮೂರು ಕೋಕ್, ಸೋಡಾ ಮತ್ತು ವ್ಹಿಸ್ಕೀ ಬಾಟಲಿಗಳನ್ನು ಬಿಸಾಕಿದ್ದಾರೆ. "ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲ, ಇಲ್ಲಾ, ಕೂಡಲಸಂಗಮದೇವ" ವಚನ ಜ್ಞಾಪಕಕ್ಕೆ ಬಂತು. ಮದಿರೆ ಇಷ್ಟೊಂದು ಮೈಮರೆಸುತ್ತಾಳಾ ಎನ್ನಿಸಿತು. ಮತ್ತೇ, ಕ್ವಾಲಿಸ್ ಗಾಡಿಯಲ್ಲಿ ಕಡೆಯದಾಗಿ ಬಂದ ಇನ್ನೊಂದು ಗುಂಪಿನವರೂ ಯಾರೂ ಆಚೆಗೆ ಬರಲಿಲ್ಲ. ಅವರಿಗೇನಾದರೂ ಹೀಗಾಗಬಹುದು ಎಂಬ ಸುಳಿವೇನಾದರೂ ಇತ್ತಾ?

"ಅವರೇನಾದರೂ ಇನ್ನೊಂದು ಸಲ ಬಾಗಿಲು ಬಡಿದರೆ ಪೋಲೀಸ್ ಸ್ಟೇಷನ್‌ಗೆ ಫೋನ್ ಮಾಡ್ರಿ. ಇಲ್ಲಾ ಅಂದ್ರೆ ನಮ್ಮ ಸೆಲ್ ಫೋನಿಂದ ನಾವೇ ಮಾಡ್ತೀವಿ. ಇಂಥ ಸರಿ ರಾತ್ರೀಲಿ ಬಂದು ಗಲಾಟೆ ಮಾಡಿ ನಿದ್ದೆ ಹಾಳ್ ಮಾಡ್ತಿದ್ದಾರೆ. ಒಳಗೆ ಬಿಡೋದಿಕ್ಕೆ ಈ ತರಹ ಜಬರಿಸ್ತಾ ಇದ್ದಾರೆ ಅಂದರೆ ಏನೋ ಮಾಡೋದಿಕ್ಕೆ ಬಂದಿರೋ ಪಾಕ್ಡಾಗಳೆ ಇರ್ಬೇಕು ಇವರು" ಎಂದೆ ನಾನು ಜೋರಾಗಿ, ಬಾಗಿಲ ಬಳಿ ನಿಂತು ಆಚೆಯೂ ಕೇಳಿಸುವ ಹಾಗೆ. ನಮ್ಮಣ್ಣನವರು "ಸರಿಯಾಗಿರೋ ಒಂದೆರಡು ದೊಣ್ಣೆ ಸರಿ ಮಾಡಯ್ಯ. ಅವರೇನಾದರೂ ಬಂದು ಇನ್ನೊಂದು ಸಾರಿ ತೊಂದರೆ ಕೊಟ್ಟರೆ ಪೋಲೀಸ್‌ಗೆ ಕರೆಯೋದಷ್ಟೇ ಅಲ್ಲ, ನಾವೇ ನಾಲ್ಕು ಚಿಗಿಯೋಣ. ಯಾರೋ ಕಳ್‌ನನ್ಮಕ್ಕಳಿದ್ದಾಗ್ ಇದ್ದಾರೆ. ಅವರಿಗೆ ಯಾಕೆ ನಾವು ಭಯ ಪಡಬೇಕು?" ಎಂದರು ಗಂಭೀರವಾಗಿ, ದೃಢಧ್ವನಿಯಲ್ಲಿ.

ಇದೇ ವಿಷಯವನ್ನೇ ಮತ್ತೆ ನಾಲ್ಕಾರು ಬಾರಿ ಪುನರಾವರ್ತಿಸಿ ಮಾತನಾಡುತ್ತ ಹತ್ತು ಹದಿನೈದು ನಿಮಿಷ ಕಳೆದೆವು. ಅಷ್ಟು ಕಾಲವೂ ಆಚೆಯಿಂದ ಯಾವುದೇ ಶಬ್ದ ಬರಲಿಲ್ಲ. ಮುಂದೆ ಏನಾದರೂ ಆದರೆ ಏನು ಮಾಡಬೇಕು ಎಂದು ನಿಶ್ಚಯಿಸಿದ್ದರಿಂದ ನಾವೆಲ್ಲ ಧೈರ್ಯವಾಗಿ ಮಲಗಲು ಹಿಂದಿರುಗಿದೆವು. ಆರಾಮವಾಗಿ ನಿದ್ರಿಸುತ್ತಿದ್ದ ಮಗುವನ್ನು ಬಿಟ್ಟು ಇನ್ನೂ ಭೀತಿಯ ಕಲ್ಪನೆಯಲ್ಲಿದ್ದ ನನ್ನಾಕೆ ನನ್ನತ್ತ ತಿರುಗಿ ಗಟ್ಟಿಯಾಗಿ ತಬ್ಬಿ ಮಲಗಿದಳು. ಉಸಿರಾಟ ಜೋರಾಗಿಯೇ ಕೇಳಿಸುತ್ತಿತ್ತು; ದೀಪ ಆರಿಸಿದ ಕತ್ತಲಿನಲ್ಲಿ. ಇದಾದ ಐದು ನಿಮಿಷಕ್ಕೆಲ್ಲಾ ಆಚೆ ಬೈಕ್ ಸ್ಟಾರ್ಟ್ ಮಾಡಿದ ಶಬ್ದ ಕೇಳಿಸಿತು. ಪೀಡೆಗಳು ತೊಲಗಿದವು; ಯಾರೋ ಇಬ್ಬರೇ ಬಂದ ಹಾಗೆ ಇದ್ದಾರೆ ಎಂದುಕೊಂಡೆ. ಆದರೂ ನಿರೀಕ್ಷೆಯಲ್ಲಿ ಮುಂದಿನ ಹತ್ತು ಹದಿನೈದು ನಿಮಿಷ ನಿದ್ದೆ ಬರಲಿಲ್ಲ. ನನ್ನ ಹೆಂಡತಿಗೆ ಅಷ್ಟೊತ್ತಿಗೆ ನಿದ್ದೆ ಬಂದಿದ್ದು ಸಡಿಲವಾದ ಅಪ್ಪುಗೆಯಲ್ಲಿ, ತಹಬಂದಿಗೆ ಬಂದಿದ್ದ ಅವಳ ಉಸಿರಾಟದಲ್ಲಿ ಗೊತ್ತಾಗಿತ್ತು. ನನಗೆ ಮತ್ತೆ ಯಾವಾಗ ನಿದ್ದೆ ಬಂತೋ ಗೊತ್ತಾಗಲಿಲ್ಲ. ಎಚ್ಚರ ಆಗಿದ್ದು ಮಾತ್ರ ಮತ್ತೇ ಜೋರಾದ ಶಬ್ದದಿಂದ; ನಮ್ಮ ರೂಮಿನ ಮುಂದೆಯೇ ನಿಲ್ಲಿಸಿದ್ದ ಕ್ವಾಲಿಸ್ ಗಾಡಿ ಸ್ಟಾರ್ಟ್ ಮಾಡಿದ ಸದ್ದಿನಿಂದ. ಕಣ್ಣು ಬಿಟ್ಟು ನೋಡಲು ಇನ್ನೂ ಕಪ್ಪು ಕತ್ತಲೆ. ಎಲ್ಲೋ ಬೆಳಗಿನ ಜಾವ ನಾಲ್ಕೋ ಐದೋ ಇರಬಹುದು. ಬೆಳಗಿಗೆ ಇನ್ನೂ ಸಮಯವಿದ್ದರೂ, ಸ್ವಲ್ಪ ಧೈರ್ಯ ವಿಶ್ವಾಸ ಕುದುರಿದ್ದೇ ಅವರು ಜಾಗ ಖಾಲಿ ಮಾಡುತ್ತಿದ್ದಾರೆ ಎನ್ನಿಸಿತು. ಗಾಡಿ ಆಚೆಗೆ ಹೋದ ತಕ್ಷಣ ಮತ್ತೆ ನಿದ್ದೆ ಬಂತು.

ಮತ್ತೆ ನಾವೆಲ್ಲ ಎದ್ದದ್ದು ಬೆಳಗ್ಗೆ ಚೆನ್ನಾಗಿ ಬೆಳಕಾದ ನಂತರವೇ. ಐದಕ್ಕೇ ಎಬ್ಬಿಸುತ್ತೇನೆ ಎಂದಿದ್ದ ಮ್ಯಾನೇಜರ್ ಮುಖ ತೋರಿಸಿದ್ದು ಗಂಟೆ ಆರಾದ ಮೇಲೆಯೇ, ಅದೂ ಬಿಸಿ ನೀರು ಕಾಯಿಸಿಕೊಡಬೇಕಾ ಎಂದು ಕೇಳುತ್ತಾ. ನಾನು ನಮ್ಮಣ್ಣ ರಾತ್ರಿ ನಡೆದ ಘಟನೆಯನ್ನು, ಕ್ವಾಲಿಸ್ ಬಂದು-ಹೋದ ಸಮಯ ಮತ್ತು ರೀತಿ, ಅದರಲ್ಲಿದ್ದ ಹೆಂಗಸರು ಮತ್ತು ಮಕ್ಕಳು, ಇದ್ದ ಇಬ್ಬರೇ ನರಪೇತಲ ಗಂಡಸರು, ಅವರ ವಯಸ್ಸು, ಮುಂತಾದವನ್ನೆಲ್ಲಾ ಯೋಚಿಸಿಕೊಂಡು "ರಾತ್ರಿ ಬಂದಿದ್ದವರು ಬಹುಶಃ ಲೋಕಲ್ ಗೂಂಡಾಗಳು. ಆ ಕ್ವಾಲಿಸ್‌ನವರನ್ನು ಎಲ್ಲೋ ನೋಡಿ ಹಿಂಬಾಲಿಸಿ ಬಂದಿದ್ದಾರೆ. ಊರಾಚೆಗೆ ಇರೋ ಈ ಲಾಡ್ಜಿನಲ್ಲಿ ಬಹುಶಃ ಕ್ವಾಲಿಸ್‌ನವರು ಮಾತ್ರ ಇದ್ದಾರೆ, ಬೇರೆ ಯಾರೂ ಇದ್ದ ಹಾಗೆ ಇಲ್ಲ ಅಂದುಕೊಂಡಿರಬೇಕು. ಒಳಗೆ ನುಗ್ಗಿ, ಗಲಭೆ ಎಬ್ಬಿಸಿ, ಕಳ್ಳತನವೋ, ಸುಲಿಗೆಯೋ, ಮತ್ತೆ ಎಂತಹುದೋ ಈ ರಾತ್ರಿಯಲ್ಲಿ ಮಾಡಬಹುದು ಅಂತ ಬಂದು ಆಚೆಯಿಂದ ಬಾಗಿಲು ತೆರೆಸುವುದಕ್ಕೆ ಪ್ರಯತ್ನಿಸಿದ್ದಾರೆ. ಯಾವಾಗ ಇಲ್ಲಿ ನಾವು ಒಳಗಿನಿಂದ ಜೋರಾಗಿ ಮಾತನಾಡಲು ಪ್ರಾರಂಭಿಸಿದೆವೋ ಆಗ ಇಲ್ಲಿ ಬೇರೆಯವರೂ ಇದ್ದ ಹಾಗೆ ಇದ್ದಾರೆ; ಪೋಲೀಸ್, ದೊಣ್ಣೆ ಎಲ್ಲಾ ಮಾತನಾಡುತ್ತಾ ಇದ್ದಾರೆ; ಸಲೀಸಾಗಿ ಏನೂ ಗಿಟ್ಟುವ ಹಾಗೆ ಇಲ್ಲ; ಅಪಾಯಕಾರಿ ಆಗುವ ಸಂಭವ ಇದೆ; ಸಮಯ ಸಂದರ್ಭ ನಮ್ಮ ಅನುಕೂಲಕ್ಕೆ ಇದ್ದ ಹಾಗೆ ಇಲ್ಲ ಎಂದುಕೊಂಡು ಇಲ್ಲಿಂದ ಕಳಚಿಕೊಂಡಿದ್ದಾರೆ." ಎಂಬ ಅಭಿಪ್ರಾಯಕ್ಕೆ ಬಂದು, ಸದ್ಯ ಅಷ್ಟಕ್ಕೇ ಮುಗಿಯಿತಲ್ಲ ಎಂದು ನಿರಾಳವಾಯಿತು. ಆ ಸಂದರ್ಭವನ್ನು ಮತ್ತೆ ಮತ್ತೆ ಯೋಚಿಸಿ ಪರಾಮರ್ಶಿಸಿದಾಗಲೆಲ್ಲ ನಂಜನಗೂಡಿನ ಆ ರಾತ್ರಿಯ ನಿಗೂಢ ಅದೇ ಅನ್ನಿಸುತ್ತದೆ. ನೀವೇನಂತೀರಿ?

◈

# CHAAT HOUSE

Large Seating Area for your Comfort

**Daily Lunch Specials** — Delicious Chaat

**Snacks & Refreshing Drinks**

**Open Daily • 11.30am to 9.30pm**

Catering Services for all your Special Occasions

893 E. El Camino Real • Sunnyvale, CA 94086
**Tel: (408) 733-9000 • Fax: (408) 733-9009**


NEW LOCATION
939 E. El Camino Real • Sunnyvale, CA 94087
**Tel: (408) 733-1111 • Fax: (408) 733-9111**

**www.chaatus.com**


Introducing Kwality ICE CREAM

Different Natural Flavors

100% Vegetarian
No Eggs
No Preservatives



# TAJ INDIA



Authentic Indian Cuisine

Veg-Non Veg
Daily Lunch Buffet
& To-Go available

:: Open 7 Days ::
**11.30am to 2.30pm and 5.30pm to 10.00pm**

*We Cater for all your special occassion*

**889 E. El Camino Real • Sunnyvale, CA 94086**

## 408-720-8396

**www.tajindiaus.com**

ಹಾರ್ದಿಕ ಶುಭಾಶಯಗಳು

# Pediatric Practice

**Rekha Udupa**, M.D., FAAP
**500 East Remington Drive, Ste. 11**
**Sunnyvale, CA 94087**
www.drudupa.yourmd.com



- **Board certified in Pediatrics**
- **Graduate of Madras Medical College, Chennai**

- Open for new patients
- Free Pre-natal consults offered
- Most insurances accepted
- Saturday Appointments available
- English, Kannada, Tulu , Tamil, Hindi spoken

**For appointments, call Dr. Rekha Udupa at: (408) 245 1050**

# ಅಪೂರ್ಣ ಕಥೆ




## ಪೂರ್ಣಿಮಾ ರಾಮಪ್ರಸಾದ್

ಮಿಲ್ಪೀಟಸ್, ಕ್ಯಾಲಿಫೋರ್ನಿಯ, *poornima_AT_sbcglobal.net*


*ಸ್ವರ್ಣಸೇತು ಓದುಗರಿಗೆ ಈ ಬಾರಿಯ ಹೊಸ ಪ್ರಯೋಗವೊಂದನ್ನು ಕೊಡಲು ಹರ್ಷಿಸುತ್ತೇವೆ. ಈ ಅಪೂರ್ಣ ಕಥೆಯನ್ನು ಪೂರ್ಣಗೊಳಿಸಿ, ತಕ್ಕ ಶೀರ್ಷಿಕೆಯನ್ನು ಕೊಡಲು ಮೂವರು ಕಥೆಗಾರರನ್ನು ಆಹ್ವಾನಿಸಿದ್ದೆವು. ಮೂವರು ಕಥೆಗಾರರೂ ಕುತೂಹಲಕಾರಿಯಾದ ಈ ಕಥೆಗೆ ಅಷ್ಟೇ ಕುತೂಹಲಕಾರಿಯಾದ ಹಾಗೂ ಅಚ್ಚರಿ ಮೂಡಿಸುವ ಅಂತ್ಯ ಒದಗಿಸಿದ್ದಾರೆ. ನಮ್ಮ ಈ ಪ್ರಯೋಗದಲ್ಲಿ ಸಹಕರಿಸಿದ ಡಾ. ರವಿ ಗೋಪಾಲರಾವ್, ಸರಯೂದೇವಿ ಮತ್ತು ಜ್ಯೋತಿ ಶೇಖರ್ ಅವರಿಗೆ ಧನ್ಯವಾದಗಳು.*

*--ಸ್ವರ್ಣಸೇತು*

ಅಂದು ಏಕೋ ಡಾ. ಕೇಶವ್ ಸುದೀಪ್ ಭಾರದ್ವಾಜನಿಗೆ ಕೆಲಸವೇ ಮುಂದುವರಿಯುತ್ತಿರಲಿಲ್ಲ. ಹಿಂದಿನ ದಿನ ನಡೆದುದನೆಲ್ಲಾ ಮೆಲಕು ಹಾಕಿಕೊಳ್ಳುತ್ತಾ ರಂಜನಿಯ ವಿಚಿತ್ರವಾದ ನಡವಳಿಕೆಗೆ ಏನು ಕಾರಣವಿರಬಹುದು ಎಂದು ಗಾಢವಾಗಿ ಯೋಚಿಸುತ್ತಿದ್ದ.

ಯೂನಿವರ್ಸಿಟಿ ಕಾಲೇಜಿನಲ್ಲಿ ಕೊನೆಯ ವರ್ಷದ ಬಿ. ಇ. ಓದುತ್ತಿದ್ದ ರಂಜನಿ ಐ. ಐ. ಎಸ್ಸಿಯಲ್ಲಿ ತನ್ನ ಪ್ರಾಜೆಕ್ಟ್ ಮಾಡಲು ಕೇಳಿಕೊಂಡು ಬಂದಾಗಲೇ ಅವನಿಗೆ ಅವಳಲ್ಲಿ ಅದೇನೋ ಆಕರ್ಷಣೆ ಹುಟ್ಟಿತ್ತು. ಅವಳು ವ್ಯಾಸಂಗಕ್ಕೆ ಬರಲು ಶುರುಮಾಡಿದಾಗ ಇವನೇ ಅತಿಯಾದ ಜವಾಬ್ದಾರಿ ವಹಿಸಿಕೊಂಡು ಅವಳಿಗೆ ಹೇಳಿಕೊಡುತ್ತಿದ್ದ. ರಂಜನಿ ಕೂಡ ಸದಾ ಡಾ. ಕೇಶವ್ ಎಂದುಕೊಂಡು ಯಾವಾಗಲೂ ಏನಾದರೂ ಕೇಳುತ್ತಿರುವಳು. ಹೀಗಿದ್ದಾಗ ಇಬ್ಬರ ಹೃದಯದಲ್ಲೂ ಹೊಂಗನಸು ಸಹಜವಾಗೇ ಚಿಗುರಿತ್ತು. ಒಂದು ದಿನ ಕ್ಯಾಂಟೀನಿನಲ್ಲಿ ಊಟಕ್ಕೆ ಹೋಗಿ ಇಬ್ಬರೇ ಕುಳಿತಿದ್ದಾಗ ಸುದೀಪನು ಧೈರ್ಯಮಾಡಿ, "ರಂಜನಿ, ನೀವು ನನಗೆ ಬಹಳ ಹಿಡಿಸಿದ್ದೀರಿ. ನಿಮಗೂ ನನ್ನ ಮೇಲೆ ಇದೇ ರೀತಿ ಭಾವನೆ ಇದ್ದಲ್ಲಿ ನಾವಿಬ್ಬರೂ ಜೀವನ ಸಂಗಾತಿಗಳಾಗಬಹುದಲ್ಲವೆ? ಯೋಚಿಸಿ ಹೇಳಿ," ಎಂದು ಹೇಳಿದ್ದ. ಅದಕ್ಕೆ ರಂಜನಿಯು ನಾಚುತ್ತಾ ತಲೆ ತಗ್ಗಿಸಿ "ಡಾ. ಕೇಶವ್ ಅವರೆ, ನಾನು ಒಪ್ಪಿದರೆ ಸಾಲದು, ನಮ್ಮ ಮನೆಯವರು ಹೇಗೆ ಹೇಳುತ್ತಾರೋ ಹಾಗೆ ಮಾಡಬೇಕು," ಎಂದು ಹೇಳಿದಳು. ಅದಕ್ಕೆ ಸುದೀಪನ ಮನಸ್ಸು ಹಗುರವಾಗಿ, "ನೀವು ಇಷ್ಟು ಹೇಳಿದರೆ ಸಾಕು, ನಾನು ಮುಂದಕ್ಕೆ ನೋಡಿಕೊಳ್ಳುತ್ತೇನೆ," ಎಂದು ಹೇಳಿ ಅವಳ ತಂದೆತಾಯಿಯರ ಹೆಸರು, ವಿಳಾಸವೆಲ್ಲ ತೆಗೆದುಕೊಂಡ. ಇದಾದ ಎರಡೇ ವಾರದಲ್ಲಿ, ಅವನ ಮನೆಯವರು ರಂಜನಿಯ ಮನೆಗೆ ಹೋಗಿ ಹೆಣ್ಣು ಕೇಳಿದ ಶಾಸ್ತ್ರವಾಗಿ, ಅವರು ಒಪ್ಪಿ ಲಗ್ನಪತ್ರಿಕೆಯೂ ಆಗೇಹೋಯಿತು. ಎಲ್ಲವೂ ಕನಸಿನಲ್ಲಿ ನಡೆದಂತೆ ಆಗಿತ್ತು ಸುದೀಪನಿಗೆ.

ಹೀಗಿರುವಾಗ, "ನೆನ್ನೆ ಫೋನಿನಲ್ಲಿ ನಾನೇ ಮಾತಾಡುತ್ತಿರುವುದು ಎಂದು ತಿಳಿದ ಮೇಲೆ ಕೂಡಾ, ಫೋನು ಕುಕ್ಕಿಬಿಟ್ಟಳಲ್ಲ ಏಕಿರಬಹುದು?" ಎಂದು ಚಿಂತಾಮಗ್ನನಾಗಿದ್ದ. ಇಂದು ಅವಳು ಬಂದ ಮೇಲೆ ಹೇಗಾದರೂ ರಮಿಸಲೇ ಬೇಕು ಎಂದುಕೊಳ್ಳುತ್ತಿದ್ದಂತೆಯೇ, ಅವನ ರೂಮಿನ ಬಾಗಿಲು ಸದ್ದು ಮಾಡುತ್ತಾ, "ಹಲೋ ಡಾ. ಕೇಶವ್, ಕಾಫಿಗೆ ಹೋಗೋಣವೇ?" ಎಂದು ಉಲ್ಲಾಸದಿಂದ ಕೇಳುತ್ತಾ ಕಣ್ಣು ಮುಂದೆ ನಿಂತಿದ್ದವಳು ಸ್ವತಃ ರಂಜನಿಯೇ. ಹೆಚ್ಚು ಏನೂ ಮಾತನಾಡದೆ ಹಿಂದಿನ ದಿನದ ಅವಳ ವರ್ತನೆಯ ಬಗ್ಗೆ ಪ್ರಶ್ನಿಸದೇ ಅವಳ ಹಿಂದೆ ಹೊರಟ. ಕಾಫಿ ಹೀರುತ್ತಾ, "ರಂಜು, ನಮ್ಮ ಮುಂದಿನ ಜೀವನದ ಬಗ್ಗೆ ನೀನು ಏನಾದರೂ ಕನಸು ಕಂಡಿರುವೆಯಾ? ನಾನಂತೂ ಬಹಳ ಆಶಾವಾದಿ, ನನ್ನಲ್ಲಿ ಸಾವಿರ ಆಸೆಗಳು ಇವೆ," ಎಂದು ಹೇಳಿದ ಸುದೀಪನನ್ನೇ ನೋಡುತ್ತಾ, "ಡಾ. ಕೇಶವ್, ನಾವು ಅಂದುಕೊಂಡಂತೇ ಎಲ್ಲವೂ ನಡೆಯುತ್ತದೆ ಎಂದು ನಂಬುವವಳಲ್ಲ ನಾನು. ಜೀವನ ನಡೆಸಿದ ದಾರಿಯಲ್ಲಿ ನಡೆಯುತ್ತೇನೆ ಅಷ್ಟೆ. ಪಾಲಿಗೆ ಬಂದದ್ದು ಪಂಚಾಮೃತ ಎಂದು ತಿಳಿಯುತ್ತೇನೆ," ಎಂದು ಚುಟುಕಾಗಿ ಉತ್ತರಿಸಿದಳು. "ಇದೇನು ರಂಜು, ಯಾರೋ ಕರೆದಂತೆ ಯಾವಾಗಲೂ ಡಾ. ಕೇಶವ್ ಎನ್ನುತ್ತೀಯಲ್ಲ, ಚಿಕ್ಕದಾಗಿ, ಪ್ರೀತಿಯಿಂದ ಸುದೀಪ್ ಎಂದು ಕರೆಯಬಾರದೇ?" ಎಂದು ಹೇಳಿದ್ದಕ್ಕೆ ಅವಳು ಏನೂ ಮಾತಾಡಲಿಲ್ಲ. "ಸರಿ ಇನ್ನು ಹೊರಡುತ್ತೇನೆ," ಎಂದು ಹೇಳಿ ಎದ್ದು ನಿಂತಳು.

ಮನೆಗೆ ಬಂದ ಕೃಷ್ಣಮೂರ್ತಿರಾಯರು ಮಗಳು ಏಕೋ ತಲೆನೋವು ಎಂದು ಮಲಗಿದ್ದಾಳೆ ಎಂದು ತಿಳಿದೊಡನೆ ಅವಳ ರೂಮಿಗೆ ಹೋಗಿ ವಿಚಾರಿಸಿಕೊಂಡರು. "ಅಪ್ಪ, ನನಗೇಕೋ ಈ ಮದುವೆ ಬೇಡ ಎಂದೆನಿಸುತ್ತಿದೆ. ನೀನು ಹೇಗಾದರೂ ಮಾಡಿ ಇದನ್ನು ನಿಲ್ಲಿಸು," ಎಂದು ಒಂದೇ ಮಾತಿನಲ್ಲಿ ಹೇಳಿದ್ದನ್ನು ಕೇಳಿ ಅವರು ನಿಂತಲ್ಲೆ ಕುಸಿದುಹೋದರು. ಯಾವ ಶ್ರಮವೂ ಇಲ್ಲದೆ ತಮ್ಮ ಮಗಳಿಗೆ ಒಳ್ಳೇ ಗಂಡನನ್ನು ಕೈಹಿಡಿಯುವ ಯೋಗವಿದೆ ಎಂದು ಸಂತೋಷಪಡುತ್ತಿದ್ದ ಅವರಿಗೆ ಒಮ್ಮೆಲ್ಲೇ ತಣ್ಣೀರೆರಚಿದಂತಾಯಿತು. "ಯಾಕಮ್ಮಾ, ಏನಾಯಿತು?" ಎಂದು ಉದ್ಗರಿಸಿದರವರು. "ಏಕೋ ಆತನ ಜೊತೆ ನಾನು ಸಂತೋಷವಾಗಿರುತ್ತೇನೆ ಎಂದೆನಿಸುತ್ತಿಲ್ಲ ಅಪ್ಪ, ಅಷ್ಟೆ. ದಯವಿಟ್ಟು ಈ ಮದುವೆ ನಿಲ್ಲಿಸು," ಎಂದು ಹೇಳಿದಳು. "ನಿನಗೆ ಏನಾದರೂ ಬೇಜಾರು ಆಗುವಂತೆ ನಡೆದಿದ್ದರೆ ನನಗೆ ಹೇಳಮ್ಮ, ನಾನು ವಿಚಾರಿಸುತ್ತೇನೆ. ಆದರೆ ಹೀಗೆ ನಿಶ್ಚಿತಾರ್ಥವಾಗಿರುವ ಮದುವೆಯನ್ನು ನಿಲ್ಲಿಸಿದರೆ ಜನ ಏನೆಂದಾರು?" ಎಂದು ಸಮಾಧಾನ ಪಡಿಸಿದರು. ಅದಕ್ಕೆ ರಂಜನಿಯು ಏನೂ ಹೇಳಲಿಲ್ಲ. ರಾಯರು ಹಾಗೇ ಅವಳ ಹಣೆಯ ಮೇಲೆ ಕೈಯಾಡಿಸಿ ಸುಧಾರಿಸಿಕೊಳ್ಳುವಂತೆ ಹೇಳಿ ಆಚೆ ನಡೆದರು. ತಮ್ಮ ಮೊಬೈಲಿನಿಂದ ತಕ್ಷಣ ಸುದೀಪನನ್ನು ಸಂಪರ್ಕಿಸಿದರು. "ಸುದೀಪ್, ನಿನ್ನ ರಂಜನಿಯ ನಡುವೆ ಏನು ನಡೆಯಿತು? ಅವಳು ಏಕೋ ಸ್ವಲ್ಪ ಬೇಜಾರಿನಲ್ಲಿದ್ದಾಳೆ. ನೀನೆ ಬಂದು ಸಮಾಧಾನ ಹೇಳು," ಎಂದು ಹೇಳಿದರು. ಸುದೀಪನಿಗೆ ಏಕೋ ದಿಗಿಲಾಯಿತು. ಇವರಿಗೆ ತನ್ನ ಮೇಲೆ ಅನುಮಾನವೇ ಎಂದು ಯೋಚಿಸತೊಡಗಿದ. "ಸರಿ, ನಾನು ಈಗಲೇ ಬರುತ್ತಿದ್ದೇನೆ," ಎಂದಿಷ್ಟೇ ಹೇಳಿ ಫೋನಿಟ್ಟು ಅವರ ಮನೆ ಕಡೆಗೆ ಹೊರಟ.

"ಹಲೋ ರಂಜನಿ, ನಾನು ಡಾ. ಕೇಶವ್ ಬಂದಿದ್ದೀನಿ ನೋಡು. ಏನಾಯಿತು, ಹುಷಾರಾಗಿರುವೆ ತಾನೆ?" ಎಂದು ಲಗುಬಗೆಯಿಂದ ಕೇಳಿದ. ಏನೂ ನಡೆದೇ ಇಲ್ಲವೇನೋ ಎಂಬಂತೆ ಎದ್ದು ಕುಳಿತಳು ರಂಜನಿ. "ನಾನು ಚೆನ್ನಾಗಿದ್ದೀನಿ. ತಲೆನೋವು ಕಮ್ಮಿ ಆಗಿದೆ. ಎಲ್ಲಾದರೂ ಸುತ್ತಾಡಿಕೊಂಡು ಬರೋಣವೇ?" ಎಂದು ಅಷ್ಟೇ ಲಗುಬಗೆಯಿಂದ ಅವಳು ಉತ್ತರಿಸಿದಾಗ, ಅವನಿಗೆ ಇವಳ ಪರಿಯೇ ಅರ್ಥವಾಗದಂತಾಯಿತು. "ಸರಿ ಬೇಗ ಹೊರಡು," ಎಂದು ಹೇಳಿ ಆಚೆ ನಡೆದ. ರಂಜನಿ ಎದ್ದು ಮುಖ ತೊಳೆದು, ತಲೆ ಬಾಚಿಕೊಂಡು ಸುಂದರವಾದ ಒಂದು ಗುಲಾಬಿ ಹೂವಿನ ಬಣ್ಣದ ಸಲ್ವಾರ್ ಕಮೀಜ್ ತೊಟ್ಟು ಕೈಯಲ್ಲಿ ವ್ಯಾನಿಟಿ ಬ್ಯಾಗ್ ಹಿಡಿದು ಹೊರಬಂದಾಗ ಅವನು ಅವಳ ಚೆಲುವನ್ನು ನೋಡಿ ಕಣ್ಣಲ್ಲೇ ಸಮ್ಮತಿಸಿದ. ಅವಳ ತುಟಿಯಂಚಿನಲ್ಲಿ ನಗೆ ಮೂಡಿತು. ಇಬ್ಬರೂ ಕಾರಲ್ಲಿ ಕುಳಿತು ಹೊರಟುಬಿಟ್ಟರು. ಕೃಷ್ಣಮೂರ್ತಿರಾಯರಿಗೆ ಏನೂ ತೋಚದಂತಾಯಿತು. "ಸದ್ಯ ಇಷ್ಟಕ್ಕೆ ಇತ್ಯರ್ಥವಾಯಿತಲ್ಲ!" ಎಂದುಕೊಂಡು ನೆಮ್ಮದಿಯ ನಿಟ್ಟುಸಿರು ಬಿಟ್ಟರು.



ಇತ್ತ ಇಬ್ಬರೂ ಲಾಲ್‌ಬಾಗ್ ಬಳಿ ಬಂದು ಕಾರು ನಿಲ್ಲಿಸಿ ಇಳಿದರು. ಕೈ-ಕೈ ಹಿಡಿದು ಉದ್ಯಾನವನದಲ್ಲಿ ಸುತ್ತಾಡಿದರು. ನಂತರ ಅಲ್ಲೇ ಇದ್ದ ಫ್ರೂಟ್ ಕಾರ್ನರ್‌ಗೆ ಹೋಗಿ ತಂಪಾದ ಮಾವಿನ ರಸ ತರಿಸಿಕೊಂಡು ಹೀರಲಾರಂಭಿಸಿದರು. "ನಿನ್ನ ನಡವಳಿಕೆಯೇ ನನಗೆ ಅರ್ಥವಾಗುತ್ತಿಲ್ಲ ರಂಜು. ನೀನು ಯಾವಾಗಲೂ ಹೀಗೆ ಇರಲು ಏನು ಮಾಡಬೇಕು ಹೇಳು, ಹಾಗೇ ಮಾಡುತ್ತಾನೆ ಈ ನಿನ್ನ ದಾಸ," ಎಂದು ತಮಾಷೆ ಮಾಡಿದಕ್ಕೆ, ರಂಜನಿಯು

"ಯಾವಾಗಲೂ ನನ್ನ ಹಿಂದೆ ಸುತ್ತುತ್ತಿರಬೇಕು," ಎಂದು ಬಿಂಕದಿಂದ ಉತ್ತರಿಸಿದಳು. ಇವಳ ಈ ಪರಿ ಸುದೀಪನಿಗೆ ಬಹಳ ಪ್ರಿಯವಾಯಿತು. ಇಬ್ಬರೂ ಪಕ್ಕಪಕ್ಕ ಕುಳಿತು ಮಾವಿನ ರಸ ಹೀರುತ್ತಿರುವಾಗ ಸುದೀಪನ ಕೆಲವು ಸ್ನೇಹಿತರು ಇನ್ನೊಂದು ಟೇಬಲ್ಲಿನಲ್ಲಿ ಕುಳಿತಿದ್ದವರು, ಇವರನ್ನು ನೋಡಿ ಹತ್ತಿರ ಬಂದು, "ಏನಮ್ಮ ಸುದೀಪು, ಹುಡುಗಿ ಸಿಕ್ಕಿದಾಳೆ ಅಂತ ನಮ್ಮನೆಲ್ಲ ಮರೆತೇ ಬಿಟ್ಟಿರೋಹಾಗಿದೆ," ಎಂದೆಲ್ಲ ಛೇಡಿಸಿ ಹೊರಟುಹೋದರು. ಅವರು ಹಾಗೆ ಹೋಗುತ್ತಿದಂತೆ "ನೋಡಿದೆಯಾ ರಂಜು, ಹೇಗಾಡುತ್ತಾರೆ," ಎಂದು ಹುಸಿಮುನಿಸಿನಿಂದ ಹೇಳುತ್ತಿದ್ದಾಗಲೇ, "ಸಾಕು ನಿಲ್ಲಿಸಿ, ನಿಮ್ಮದು ತೀರ ಜಾಸ್ತಿ ಆಯಿತು. ಇದೇನು ಮದುವೆಗೆ ಮುಂಚೆ ಹೀಗೆಲ್ಲ ಆಡುವುದು," ಎಂದೆಲ್ಲ ರೇಗಿ, "ನಾನು ಮನೆಗೆ ಈಗಲೇ ಹೋಗಬೇಕು," ಎಂದಳು ರಂಜಿನಿ. ಸುದೀಪನಿಗೆ ಮತ್ತೆ ಶಾಕ್ ಹೊಡೆದಹಾಗಾಯಿತು. ತನ್ನ ಕನಸಿನ ರಾಣಿ ಈ ರೀತಿ ವರ್ತಿಸಿದರೆ ಇವಳ ಜೊತೆ ಸಂಸಾರ ಮಾಡುವುದಾದರೂ ಹೇಗೆ ಎಂದು ಅವನಿಗೆ ಮೊದಲ ಬಾರಿ ಅನ್ನಿಸಿತು. ಹೆಚ್ಚು ಮಾತಾಡದೆ ದುಡ್ಡು ಕೊಟ್ಟು, ಕಾರ್ ಹತ್ತಿ ಅವಳನ್ನು ಅವಳ ಮನೆಯಲ್ಲಿ ಇಳಿಸಿ, ಏನೂ ಮಾತಾಡದೆ ಹೊರಟುಹೋದ.

ಕೃಷ್ಣಮೂರ್ತಿರಾಯರು ಏನೋ ಕೆಲಸ ಮಾಡುತ್ತಾ ಸುಮಾರು ಮಧ್ಯರಾತ್ರಿಯವರೆಗೂ ಕೆಳಗೇ ಇರುತ್ತಿದ್ದರು. ನಂತರ ದೀಪಗಳನ್ನಾರಿಸಿ ಮೇಲೆ ಹೋಗಿ ಮಲಗುವುದು ವಾಡಿಕೆ. ರಂಜಿನಿಯ ಕೊಠಡಿ ಕೆಳಗಡೆ ಇತ್ತು. ಅವರದ್ದು ಮತ್ತು ಇನ್ನಿಬ್ಬರು ಮಕ್ಕಳಾದ ಸೌದಾಮಿನಿ ಮತ್ತು ದೀಪಕರ ಕೊಠಡಿ ಮಹಡಿಯ ಮೇಲಿತ್ತು. ಅಂದು ರಾತ್ರಿ ಅವರು ತಮ್ಮ ಕೆಲಸ ಮುಗಿಸಿ ಹೊರಟರೂ ರಂಜಿನಿಯ ರೂಮಿನಲ್ಲಿ ದೀಪ ಉರಿಯುತ್ತಲೇ ಇತ್ತು. ಬಗ್ಗಿ ನೋಡಿದರೆ ಅವಳು ಎದ್ದು ಕನ್ನಡಿಯ ಮುಂದೆ ಕುಳಿತು ಸುಮ್ಮನೆ ಬಿಕ್ಕಿಬಿಕ್ಕಿ ಅಳುತ್ತಿದ್ದಳು. ಗಾಬರಿಗೊಂಡ ರಾಯರು ಏನಾಯಿತು ಎಂದು ಕೇಳಿದಾಗ, "ಅಪ್ಪ, ಈ ಸುದೀಪನು ನನ್ನೊಡನೆ ಅಶ್ಲೀಲವಾಗಿ ನಡೆದುಕೊಂಡ. ಅವನೊಂದಿಗೆ ಬಾಳಲು ನನಗಾಗದು ಅಪ್ಪ. ಈ ಮದುವೆ ನಿಲ್ಲಿಸು. ಇಲ್ಲದಿದ್ದರೆ ನನ್ನ ಪ್ರಾಣ ಕಳೆದುಕೊಳ್ಳುತ್ತೇನೆ," ಎಂದು ಹೆದರಿಸಿದಳು. "ರಂಜಿನಿ, ನೀನೇ ಪ್ರೀತಿಸಿದ ಹುಡುಗ ಅವನು. ಹೆಂಡತಿ ಆಗುವವಳು ಎಂದು ಸ್ವಲ್ಪ ಸಲಿಗೆ ತೆಗೆದುಕೊಂಡಿರಬಹುದು. ಅಷ್ಟು ದೊಡ್ಡ ತಪ್ಪೇನಲ್ಲ. ನಾನು ಅವನಿಗೆ ಹೇಳುತ್ತೇನೆ, ಸಮಾಧಾನ ಮಾಡಿಕೊ, ಸುದೀಪ್ ಖಂಡಿತ ಒಳ್ಳೆ ಹುಡುಗ," ಎಂದು ರಾಯರು ಅವಳ ಕೈ ಹಿಡಿದು ಹೇಳಿದರೆ, "ಆ ಹೆಸರೂ ಎತ್ತಬೇಡಿ ನನ್ನ ಮುಂದೆ, ಅವನು ಎಂದೂ ನನ್ನನ್ನು ಸುಖವಾಗಿಟ್ಟುಕೊಳ್ಳಲಾರ," ಎಂದು ಹೇಳಿ ಅವಳು ಹಾಗೇ ಕಣ್ಣು ಮುಚ್ಚಿದಳು. ರಾಯರಿಗೆ ಮತ್ತೆ ಯೋಚನೆ ಹತ್ತಿಕೊಂಡಿತು. ಮಗಳ ಮುಖ ನೋಡುತ್ತ ಅಲ್ಲೇ ಕುಳಿತರು. ಅವಳಿಗೆ ನಿದ್ದೆ ಹತ್ತಿದೆ ಎಂದು ಖಚಿತ ಪಡಿಸಿಕೊಂಡ ಮೇಲೆ ಎದ್ದು ತಮ್ಮ ಕೊಠಡಿಗೆ ಹೋದರು.

ಮುಂಜಾನೆ ಎದ್ದಾಗ ರಂಜಿನಿಯ ಹಣೆ ಕಾಯುತ್ತಿತ್ತು. ರಾಯರು ನೋಡಿ ತಕ್ಷಣ ತಮ್ಮ ಪತ್ನಿಯನ್ನು ಕೂಗಿದರು. "ಮೀನಾಕ್ಷಿ, ಇಲ್ಲಿ ನೋಡು ರಂಜಿನಿಗೆ ಯಾಕೋ ಬಹಳ ಜ್ವರ ಇರುವ ಹಾಗಿದೆ. ಡಾಕ್ಟರ್ ಬಳಿ ಕರೆದುಕೊಂಡು ಹೋಗೋಣ ನಡಿ," ಎಂದರು. ಮಗಳ ಹಣೆಯ ಮೇಲೆ ಕೈ ಇಟ್ಟು ನೋಡಿದ ಮೀನಾಕ್ಷಿ, "ಹೌದು ರೀ ಜ್ವರ ಇದೆ. ಇಲ್ಲಿ ಮನೆಕೆಲಸ ನಾನು ನೋಡಿಕೊಳ್ಳುತ್ತೇನೆ. ನೀವು ಕರೆದುಕೊಂಡು ಹೋಗಿಬನ್ನಿ," ಎಂದರು. ಮರು ಮಾತನ್ನಾಡದೆ ರಾಯರು ರಂಜಿನಿಯನ್ನು ಎಬ್ಬಿಸಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೊರಟರು. ಜ್ವರ ತೀರ ಹೆಚ್ಚಾಗಿ ಡೀಹೈಡ್ರೇಶನ್ ಆಗಿರುವ ಕಾರಣ ಒಂದು ದಿನ ಅಲ್ಲೇ ಇಟ್ಟುಕೊಳ್ಳುವುದಾಗಿ ಡಾಕ್ಟರ್ ಹೇಳಿದರು. ನಂತರ ರಾಯರು ರಾತ್ರಿ ನಡೆದದ್ದನೆಲ್ಲ ವಿವರಿಸಿ ಹೇಳಿದಾಗ ಏನೋ ಹುಡುಗಿ ಹೆದರಿದ್ದಾಳೆ ಎಂದು ಡಾಕ್ಟರ್ ಅಭಿಪ್ರಾಯಪಟ್ಟರು. "ಒಂದೆರಡು ದಿನ ಅವಳ ನಡವಳಿಕೆ ನೋಡೋಣ, ಎಲ್ಲಾ ಟೆಸ್ಟ್ ಮಾಡ್ತೀವಿ, ಹೆದರಬೇಡಿ ಸರಿಹೋಗತ್ತೆ," ಎಂದರು.

ಈ ವಿಷಯ ತಿಳಿಯುತ್ತಿದಂತೆ ಸುದೀಪನಿಗೆ ಕಸಿವಿಸಿಯಾಯಿತು. ಎಲ್ಲರೂ ತನ್ನನ್ನು ಅಪರಾಧಿ ದೃಷ್ಟಿಯಿಂದ ಕಾಣುತ್ತಿರುವರೊ ಎಂಬ ಅನುಮಾನವುಂಟಾಯಿತು. ಮನೆಯವರೆಲ್ಲ ಈ ಹುಡುಗಿಯನ್ನು ಮರೆತುಬಿಡು ಎಂದು ಬೇರೆ ಹೇಳುತ್ತಿದ್ದಾರೆ. ಸುದೀಪನ ಚಿಕ್ಕಪ್ಪ ಶಾಮಸುಂದರ್ ಅಂದು ಲಂಡನ್ನಿನಿಂದ ಬರುವವರಿದ್ದರು. ಸುದೀಪನಿಗೆ ಅವರ ಬಳಿ ಬಹಳ ಸಲಿಗೆ ಇತ್ತು. ಅವರು ಬೊಂಬಾಯಿಯಲ್ಲಿ ಯಾವುದೋ ಒಂದು ವೈದ್ಯರ ಸಮ್ಮೇಳನಕ್ಕಾಗಿ ಬಂದವರು ತಮ್ಮ ಅಚ್ಚುಮೆಚ್ಚಿನ ಅಣ್ಣನ ಮಗನ ಮದುವೆ ಗೊತ್ತಾಗಿದ್ದ ಕಾರಣ ಒಮ್ಮೆ ನೋಡಿಕೊಂಡು ಹೋಗಲು ಬೆಂಗಳೂರಿಗೆ ಬಂದಿದ್ದರು. ಚಿಕ್ಕಪ್ಪನನ್ನು ರಿಸೀವ್ ಮಾಡಲು ಅವನೇ ಏರ್‌ಪೋರ್ಟಿಗೆ ಹೊರಟ.

ಶಾಮಸುಂದರರು ಸುದೀಪನನ್ನು ಕಂಡೊಡನೇ, "ಏನಯ್ಯ ಮದುವೆ ಗಂಡು, ಎಲ್ಲಿ ನಿನ್ನ ಹುಡುಗಿ? ಏರ್‌ಪೋರ್ಟಿಗೇ ಕರೆ ತರ್ತೀನಿ ಎಂದಿದ್ದೆ, ಏನ್ ಸಮಾಚಾರ?" ಎಂದಾಗ, ಇವನು ಅವಳ ಇತ್ತೀಚಿನ ನಡವಳಿಕೆಯ ಬಗ್ಗೆ ಮತ್ತು ಎಲ್ಲರೂ ಈ ಮದುವೆ ನಿಲ್ಲಿಸುವ ಮಾತಾಡುತ್ತಿರುವ ಬಗ್ಗೆ ವಿವರಿಸಿ ಹೇಳಿದ. "ಸರಿ ನಡಿ, ಆಸ್ಪತ್ರೆಗೆ ಹೋಗಿ ರಂಜಿನಿಯನ್ನು ನೋಡಿಕೊಂಡೇ ಮನೆಗೆ ಹೋಗೋಣ," ಎಂದರು. ಆಸ್ಪತ್ರೆಗೆ ಹೋಗಿ ಡಾಕ್ಟರ್ ಬಳಿ ಮಾತನಾಡಿ ರಂಜಿನಿಯ ಕೊಠಡಿಗೆ ಹೋದರು. ಅವಳು ಅರ್ಧ ನಿದ್ರೆಯಲ್ಲಿ ಏನೋ ಗೊಣಗುತ್ತಿದುದು ಅವರು ಗಮನಿಸಿದರು. ಇವಳಿಗೆ ಏನೋ ಸಮಸ್ಯೆ ಇದೆ ಎಂದು ತಿಳಿದು ಸ್ವಲ್ಪ ಅವಳ ಹಿಂದೆ-ಮುಂದೆ ವಿಚಾರಿಸಿಕೊಳ್ಳಬೇಕು ಎಂದು ನಿರ್ಧರಿಸಿ ಹೊರಟರು.

ಮರುದಿನ ಬೆಳಗ್ಗೆ ಎಲ್ಲಾ ಪರೀಕ್ಷೆಗಳೂ ಸರಿಯಾಗಿಯೇ ಕಂಡುಬಂದದ್ದರಿಂದ ರಂಜಿನಿಯನ್ನು ವೈದ್ಯರು ಮನೆಗೆ ಕಳಿಸಿದರು. ಅಂದು ಸಂಜೆ ಸುಮಾರು ಸಂಜೆ ೫ ಘಂಟೆಯ ಹೊತ್ತಿಗೆ ಅವಳನ್ನು ನೋಡಿಕೊಂಡು ಬರುವುದಾಗಿ ಶಾಮಸುಂದರರು ರಂಜಿನಿಯ ಮನೆಗೆ ಹೋದರು. ಕೃಷ್ಣಮೂರ್ತಿರಾಯರು ಏನೋ ಕೆಲಸದ ಮೇಲೆ ಹೊರಗೆ ಹೋಗಿದ್ದರು. ರಂಜಿನಿ ಗೆಲುವಾಗಿದ್ದಳು. ಅವಳು ಮತ್ತು ಮೀನಾಕ್ಷಿ ಉತ್ಸಾಹದಿಂದ ಅವರನ್ನು ಸ್ವಾಗತಿಸಿದರು. ಶಾಮಸುಂದರರು ದೊಡ್ಡ ಡಾಕ್ಟರ್ ಮತ್ತು ಹಣವಂತರು ಎಂಬ ಕಾರಣದಿಂದ ವೈದ್ಯಕೀಯ ಓದುತ್ತಿದ್ದ ತಮ್ಮ ಎರಡನೆ ಮಗಳಾದ ಸೌದಾಮಿನಿಗೆ ಅವರಿಂದ ಅನುಕೂಲವಾಗಬಹುದು ಎಂದು ಭಾರೀ ಯೋಜನೆ ಹಾಕಿದ್ದರು ಮೀನಾಕ್ಷಿ. ಅವರನ್ನು ಅತೀ ವಿನಯದಿಂದ ಮಾತಾಡಿಸಿ ಅವರಿಗೆ ತಿಂಡಿ-ಕಾಫಿಯ ಉಪಚಾರವಾದ ಮೇಲೆ, "ನಮ್ಮ ಎರಡನೇ ಮಗಳು ವೈದ್ಯಕೀಯ ಪದವಿಗೆ ಓದುತ್ತಿದ್ದಾಳೆ ಮತ್ತು ಮಗ ಈ ವರ್ಷ ಪಿ.ಯು.ಸಿಗೆ ಕುಳಿತಿದ್ದಾನೆ. ನಿಮ್ಮ ವಿಷಯ ಹೇಳಿ," ಎಂದು ಉಭಯಕುಶಲೋಪರಿಗೆ ಪೀಠಿಕೆ ಹಾಕಿದರು ಮೀನಾಕ್ಷಿ. ಮಾತುಕಥೆ ಆದ ನಂತರ ಶಾಮಸುಂದರರು ರಂಜಿನಿಯನ್ನು ನೋಡುತ್ತ, "ನಿಮ್ಮ ಮನೆ ತೋರಿಸುವೆಯಾ, ಮಗು," ಎಂದರು. "ಹೂಂ," ಎಂದು ತಲೆ ಆಡಿಸುತ್ತಾ ರಂಜಿನಿ ಅವರನ್ನು ಕರೆದುಕೊಂಡು ಹೊರಟಳು. ಮಹಡಿಯ ಹತ್ತಿರ ಬಂದಾಗ, ಮೀನಾಕ್ಷಿ ಕೂಡ ಉತ್ಸಾಹದಿಂದ ಜೊತೆಗೂಡಿದರು. ಮೇಲೆ ಹೋಗುತ್ತಿದಂತೆ, ಹಜಾರದಲ್ಲಿ ಕೆಲವು ಛಾಯಾಚಿತ್ರಗಳು ಕಂಡುಬಂದವು. "ಯಾರಿದು?" ಎಂದು ರಂಜಿನಿಯನ್ನು ಕುರಿತು ಕೇಳಿದರು ಶಾಮಸುಂದರ್. ಅದಕ್ಕೆ ಮೀನಾಕ್ಷಿ ತಕ್ಷಣ, ಆ ದೊಡ್ಡ ಛಾಯಾಚಿತ್ರದಲ್ಲಿರುವುದು ನನ್ನ ಮಗಳು ಸೌದಾಮಿನಿ ಮತ್ತು ಮಗ ದೀಪಕ್. ನಮ್ಮ ಸುದು ಮತ್ತು ದೀಪು ಚಿಕ್ಕಂದಿನಿಂದ ಬಹಳ ಚೂಟಿಯಾದ ಮಕ್ಕಳು, ಇವಳೇ ಸ್ವಲ್ಪ ನಿಧಾನ, ಹೆದರಿಕೆ ಸ್ವಭಾವದವಳು," ಎಂದರು. ಶಾಮಸುಂದರರು ಇನ್ನು ಹೆಚ್ಚು ಮಾತನಾಡದೆ ಮಿಕ್ಕ ಕೊಠಡಿಗಳನ್ನೆಲ್ಲಾ ನೋಡಿಕೊಂಡು ಕೆಳಗೆ ರಂಜಿನಿಯ ಕೊಠಡಿಗೆ ಬಂದರು. ತುಂಬಾ ಓರಣವಾಗಿದ್ದ ಕೋಣೆ. ಒಂದು ಮೂಲೆಯಲ್ಲಿದ್ದ ಕಪಾಟಿನಲ್ಲಿ ಸಾಲಾಗಿರಿಸಿದ್ದ ಪುಸ್ತಕಗಳು. ಮೇಜಿನ ಮೇಲೊಂದು ಹೂದಾನಿ, ಮತ್ತೊಂದು ಫೋಟೋ ಇದ್ದುದನ್ನು ಶಾಮಸುಂದರರು ಗಮನಿಸಿದರು.

# ನಿಗೂಢ (ಮುಕ್ತಾಯ-೧)

**ಸರಯೂದೇವಿ**

ಫೋಟೋದಲ್ಲಿದ್ದ ಆ ಹುಡುಗಿಯರ ವಯಸ್ಸು-ರೂಪ ಒಂದೇ, ಆದರೆ ಬಲಗಡೆ ಇರುವ ಹುಡುಗಿಯ ಕಣ್ಣುಗಳಲ್ಲಿ ಪ್ರಪಂಚವನ್ನೇ ಗೆಲ್ಲುವೆನೆಂಬ ಹೊಳಪಿದ್ದರೆ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವಳ ಪಕ್ಕದಲ್ಲಿರುವ ಹುಡುಗಿಯ ಕಣ್ಣುಗಳಲ್ಲಿ ಅಂಜಿಕೆ ಇದೆ, ಹಿಂಜರಿಯುವ ಮನೋಭಾವ ಇದ್ದಂತಿದೆ. ಅಂದರೆ ಆ ದಿಟ್ಟ ಹುಡುಗಿ ರಂಜಿನಿಯ ಒಡಹುಟ್ಟಿದವಳೇ? ದೊಡ್ಡ ಛಾಯಾಚಿತ್ರದಲ್ಲಿರುವವರು ಸೌದಾಮಿನಿ, ದೀಪಕ್ "ನನ್ನ ಮಕ್ಕಳು" ಎಂದು ಮೀನಾಕ್ಷಿಯವರು ಒತ್ತಿ ಹೇಳಿದರಲ್ಲ, ರಂಜಿನಿ ಅವರೊಡನೆ ಚಿತ್ರದಲ್ಲಿ ಇಲ್ಲ ಯಾಕೆ? ರಂಜಿನಿ ಅವರ ಮಗಳಲ್ಲವೆ? ಅವರಿಬ್ಬರ ಬಗ್ಗೆ ಹೆಮ್ಮೆಯಿಂದ ಮಾತನಾಡಿದ ಮೀನಾಕ್ಷಿಯವರು ರಂಜಿನಿಯನ್ನು ಕುರಿತು ತಾತ್ಸಾರದಿಂದ ಹೇಳಿದರಲ್ಲ. ರಂಜಿನಿಯ ಕೊಠಡಿ ಕೆಳಗಿದೆ. ಮನೆಯಲ್ಲಿರುವ ಈ ತಾರತಮ್ಯದಿಂದ ಮನಸ್ಸು ಮುದುಡಿರಬಹುದೇ? ಈ ರೀತಿ ಯೋಚಿಸುತ್ತಾ ಶ್ಯಾಮಸುಂದರರು ರಂಜಿನಿಯತ್ತ ನೋಡಿದರು. ಮುಸುಕಿನೊಳಗಿದ್ದ ಮನಸ್ಸಿನಲ್ಲಿ ಏನೋ ವ್ಯಥೆ ಇದೆ, ಕಥೆ ಇದೆ ಎಂದೆನಿಸಿತು. ಮೂಕಳಾಗಿ ನಿಂತಿದ್ದ ರಂಜಿನಿಯ ಭುಜದ ಮೇಲೆ ವಿಶ್ವಾಸದಿಂದ ಕೈ ಇರಿಸಿ ಭರವಸೆಯ ಅಭಯವನ್ನಿತ್ತರು. "ಮೈ ಡಿಯರ್ ಚೈಲ್ಡ್, ಚಿಯರ್ ಅಪ್, ಲೆಟ್ ಅಸ್ ಗೋ ಔಟ್ ಫಾರ್ ಎ ವಾಕ್," ಎಂದರು. ಮರುತ್ತರ ನೀಡದೆ ರಂಜಿನಿ ತಲೆಯಾಡಿಸಿದಳು. ಮೀನಾಕ್ಷಿಯವರ ಅನುಮತಿ ಪಡೆದು, ರಂಜಿನಿಯನ್ನು ತಮ್ಮೊಡನೆ ಕರೆದುಕೊಂಡು ಹೋಗಿ, ಹತ್ತಿರವೇ ಇದ್ದ ಪಾರ್ಕಿನ ಬೆಂಚಿನ ಮೇಲೆ ಕುಳಿತು, ಅವಳ ಬೆನ್ನು ತಟ್ಟಿ, "ನೌ ಟೆಲ್ ಮಿ, ಅ ಫೋಟೋದಲ್ಲಿ ನಿನ್ನ ಜೊತೇಲಿರೋ ಹುಡುಗಿ ನಿನ್ನ ಸಿಸ್ಟರೇ?" ಎಂದು ಕೇಳಿದರು. "ಹೌದು. ನನ್ನ ಟ್ವಿನ್ ಸಿಸ್ಟರ್ ರಾಗಿಣಿ. ನನಗಿಂತ ಐದು ನಿಮಿಷಗಳ ಮೊದಲು ಹುಟ್ಟಿದವಳು. ಬಟ್ ಷಿ ಈಸ್ ನೋ ಮೋರ್," ಎಂದು ರಂಜಿನಿ ಎರಡೂ ಕೈಗಳಿಂದ ಮುಖ ಮುಚ್ಚಿ ದುಃಖದ ಪ್ರವಾಹದಲ್ಲಿ ಕೊಚ್ಚಿಹೋಗುವಂತೆ ಬಿಕ್ಕಿ ಬಿಕ್ಕಿ ಅತ್ತಳು.

"ಐ ಗಾಟ್ ದಿ ರೀಸನ್ ಫಾರ್ ಹರ್ ಬಿಹೇವಿಯರ್," ಅಂತಂದುಕೊಂಡ ಶ್ಯಾಮಸುಂದರ್ ವಿಷಯವನ್ನು ಎಳೆಎಳೆಯಾಗಿ ಅವಳಿಂದ ಬಿಡಿಸಿದರು. ರಾಗಿಣಿ-ರಂಜಿನಿ ಒಂದೇ ರೂಪದ ಅವಳಿ ಮಕ್ಕಳಾದರೂ ರಾಗಿಣಿ ದಿಟ್ಟ ಹುಡುಗಿ. ರಂಜಿನಿಯದು ಹಿಂಜರಿಯುವ ಸ್ವಭಾವ. ಹೊರಪ್ರಪಂಚದ ಬೆಳಕನ್ನು ಪಿಳಿಪಿಳಿ ಎಂದು ಅದೇ ತಾನೇ ನೋಡತೊಡಗಿದ ಆ ಮಕ್ಕಳನ್ನು ಪತಿಗೊಪ್ಪಿಸಿ ಹೆರಿಗೆಯ ಸಮಯದಲ್ಲಾದ ತೀವ್ರ ರಕ್ತಸ್ರಾವದಿಂದ ಕಣ್ಣುಮುಚ್ಚಿದ್ದರು ಅವರ ತಾಯಿ. ಚಿಕ್ಕ ಪ್ರಾಯ, ಜೊತೆಗೆ ಅನುಕೂಲವಾಗಿದ್ದ ಕೃಷ್ಣಮೂರ್ತಿರಾಯರು ಮೀನಾಕ್ಷಿಯನ್ನು ಮದುವೆಯಾಗಿ ಮನೆ, ಮಕ್ಕಳ ಜವಾಬ್ದಾರಿಯನ್ನು ಅವರಿಗೆ ಒಪ್ಪಿಸಿದರು. ಮಕ್ಕಳು ಬೆಳೆದಂತೆ ರಾಗಿಣಿ ತಾರತಮ್ಯವನ್ನು ಎದುರಿಸಿ ನಿಂತರೆ ರಂಜಿನಿ ಅಂಜುತ್ತಿದ್ದಳು. ಶಾಲೆ-ಕಾಲೇಜಿನಲ್ಲಿ ನಡೆಯುತ್ತಿದ್ದ ನೃತ್ಯ, ನಾಟಕ, ಚರ್ಚಾಸ್ಪರ್ಧೆಗಳಲ್ಲಿ ರಾಗಿಣಿಯದೇ ಮೇಲುಗೈ. ಅಂತಹ ದಿಟ್ಟ ಹುಡುಗಿ ಎರಡು ವರ್ಷಗಳ ಹಿಂದೆ ಒಂದು ದಿನ ಸಾಯಂಕಾಲ ಭೋರ್ಗರೆಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ಒದ್ದೆಮುದ್ದೆಯಾಗಿ ಮನೆಗೆ ಬಂದಳು. ಮಧ್ಯರಾತ್ರಿ ಜ್ವರವೇರಿ ಬಡಬಡಿಸತೊಡಗಿದಳು.

ಮಾರನೆಯ ದಿನ ನರ್ಸಿಂಗ್‌ಹೋಮಿಗೆ ಸೇರಿಸಿದರು. ಮೆದುಳಿನ ಜ್ವರವಿರಬಹುದೆಂದರು. ಪರಿಸ್ಥಿತಿ ಹದಗೆಟ್ಟಿತು. ಯಾವುದೇ ಚಿಕಿತ್ಸೆಗೆ ಜ್ವರ ಮಣಿಯಲಿಲ್ಲ. ತಾಯಿಯ ಗರ್ಭದಿಂದಲೇ ಜೊತೆಜೊತೆಯಾಗಿದ್ದ ರಂಜನಿ, ರಾಗಿಣಿಯ ಪರಿಸ್ಥಿತಿಯನ್ನು ಕಂಡು ಕುಸಿದಳು. ಅರೆಪ್ರಜ್ಞೆಯಲ್ಲಿದ್ದ ರಾಗಿಣಿ, ರಂಜನಿಯ ಕೈ ಹಿಡಿದು "ಎಲ್ಲರೂ ಸ್ವಾರ್ಥಿಗಳು, ಮೋಸಗಾರರು, ನಂಬಬೇಡ," ಎಂದಳು. ರಾಗಿಣಿ ಇನ್ನಿಲ್ಲವಾದಳು. ರಂಜನಿಯ ಮೆದುಳಿನಲ್ಲಿ ಆ ನುಡಿಗಳು ಅಚ್ಚೊತ್ತಿದ್ದವು. ರಾಗಿಣಿ ಯಾರಿಂದ ಮೋಸಹೋದಳು ಎಂಬ ಪ್ರಶ್ನೆ ನಿಗೂಢವಾಗಿಯೇ ಉಳಿದುಬಿಟ್ಟಿತು. ರಾಗಿಣಿ ಇಲ್ಲದ ಕೋಣೆಯಲ್ಲಿ ಒಂಟಿಯಾಗಿ ಉಳಿದ ರಂಜನಿ, ಅವಳ ನೆನಪಿನಲ್ಲಿ ನಿದ್ದೆ ಇಲ್ಲದೆ ನಿಟ್ಟುಸಿರೊಡನೆ ಅದೆಷ್ಟು ರಾತ್ರಿಗಳನ್ನು ಕಳೆದಿದ್ದಳೋ ಲೆಕ್ಕವಿಲ್ಲ.

ರಾಗಿಣಿಯ ದುರಂತದ ಕೊನೆ ರಂಜನಿಯ ಮನಸ್ಸಿನ ಅಸ್ಥಿರತೆಗೆ ಮೂಲಕಾರಣ ಎಂದರಿತ ಶಾಮಸುಂದರರು, "ರಾಗಿಣಿ ಯಾರಿಂದಲೋ ಮೋಸಹೋಗಿರಬಹುದು. ಪ್ರಪಂಚದಲ್ಲಿ ಎಲ್ಲರೂ ಮೋಸಗಾರರಲ್ಲ, ಸ್ವಾರ್ಥಿಗಳಲ್ಲ. ರಾಗಿಣಿಯಂತಹ ದಿಟ್ಟ ಹುಡುಗಿ ಪರಿಸ್ಥಿತಿಗೆ ಸೋತಿದ್ದು ದುರ್ದೈವ. ಮುಸುಕಿರುವ ನಿನ್ನ ಮನಸ್ಸನ್ನು ಹೊರತೆರೆ. ಮನಸ್ಸಿನಲ್ಲಾಗುತ್ತಿರುವ ಗೊಂದಲಕ್ಕೆ ಕಡಿವಾಣ ಹಾಕು. ಇಷ್ಟು ದಿನಗಳ ಕಾಲ ನಿನ್ನ ಮನಸ್ಸಿನಲ್ಲೇ ಮುಚ್ಚಿಟ್ಟುಕೊಂಡು ಕೊರಗಿದ್ದು ಸಾಕು. ಸುದೀಪನೊಡನೆ ಬಿಚ್ಚುಮನಸ್ಸಿನಿಂದ ಚರ್ಚಿಸಿ ಒಂದು ನಿರ್ಧಾರಕ್ಕೆ ಬಾ. ಆಗ ಮನಸ್ಸು ನಿರಾಳವಾಗುತ್ತದೆ. ಲೆಟ್ ಅಸ್ ಗೋ ಹೋಮ್. ಸುದೀಪನಿಗೆ ಫೋನ್ ಮಾಡ್ತೀಯಾ?" ಎಂದು ಶಾಮಸುಂದರರು ಮೊಬೈಲನ್ನು ಅವಳತ್ತ ನೀಡಿ ಹೇಳಿದರು. "ನೀವೇ ಮಾಡಿ ಅಂಕಲ್," ಅಂದಳು ರಂಜನಿ. "ಓಕೆ," ಎಂದು ಸುದೀಪನಿಗೆ ಕಾಲ್ ಮಾಡಿ, "ಹಲೋ ಸುದೀಪ, ನಾಳೆ ಸಾಯಂಕಾಲ ನಿನಗೂ ರಂಜನಿಗೂ ಸ್ಪೆಷಲ್ ಪಾರ್ಟಿ ಕೊಡ್ಬೇಕೂಂತ ಇದ್ದೀನಿ. ಡೋಂಟ್ ಹ್ಯಾವ್ ಎನಿ ಅದರ್ ಎಂಗೇಜ್ಮೆಂಟ್. ರಂಜನಿ ನನ್ನ ಪಕ್ಕದಲ್ಲೇ ಇದ್ದಾಳೆ. ನೈಸ್ ಗರ್ಲ್," ಎಂದರು ತುಂಬು ಹೃದಯದಿಂದ. ಅವರ ಮಾತನ್ನು ಕೇಳಿ ರಂಜನಿಯ ಮುಖದಲ್ಲಿ ರಂಗು ಮೂಡಿತು.

◈



# ತಳಮಳ (ಮುಕ್ತಾಯ-೨)


**ರವಿ ಗೋಪಾಲರಾವ್**

ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ, *ravi_gopalarao_AT_hotmail.com*


"ಈ ಫೋಟೋದಲ್ಲಿರುವ ಬೊಗಸೆಗಣ್ಣಿನ...." ಎಂದು ಶಾಮಸುಂದರರು ವಾಕ್ಯ ಪೂರ್ಣಗೊಳಿಸುವ ಮೊದಲೆ ರಂಜನಿ "ಇದು ನನ್ನ ಸ್ವಂತ ತಾಯಿಯ ಫೋಟೋ. ಅವರ ಬಗ್ಗೆ ಅಪ್ಪ ಹೇಳಿದ್ದು ಮಾತ್ರ ಮಸುಕುಮಸುಕಾಗಿ ನೆನಪಿದೆ ಅಷ್ಟೆ. ನನಗಿನ್ನೂ ಐದು ವರ್ಷವಾಗಿತ್ತಂತೆ ಅಮ್ಮ ತೀರಿಕೊಂಡಾಗ. ಆದರೆ ಅಮ್ಮನ ಆ ಬೊಗಸೆಗಣ್ಣುಗಳಲ್ಲಿರುವ ವಾತ್ಸಲ್ಯ ಎಂದೂ ನನ್ನನ್ನು ಅನಾಥ ಮಾಡಿಲ್ಲ ಅಂಕಲ್," ಎಂದು ಉಮ್ಮಳಿಸುತ್ತಿದ್ದ ದುಃಖವನ್ನು ತಡೆದು ಹೇಳಿದಳು. ಮನೋವೈಜ್ಞಾನಿಕ ವಿಷಯದಲ್ಲೇ ಪರಿಣಿತಿ ಪಡೆದ ಡಾಕ್ಟರ್ ಶಾಮಸುಂದರರಿಗೆ ರಂಜನಿಯ ಬಾಲ್ಯದ ಈ ವಿಚಾರ ಅವಳಿಂದಲೇ ಕೇಳಿ ತಿಳಿದಿದ್ದು ಅವಳ ಸಮಸ್ಯೆಗೆ ಅರ್ಧ ಉತ್ತರ ಸಿಕ್ಕಂತೆನಿಸಿತು. ಅವರ ಮನಸ್ಸಾಗಲೆ ಇನ್ನುಳಿದ ಅರ್ಧ ಉತ್ತರ ಹುಡುಕಲಾರಂಭಿಸಿತು. ಆದರೆ ರಂಜನಿಯ ಮನಸ್ಸು ತನ್ನ ಬಾಲ್ಯದ ಸುಂದರ ಕಾಮನಬಿಲ್ಲನ್ನು ಮರೆಮಾಡಿದ ಕಾರ್ಮೋಡಗಳಲ್ಲಿ ಯಾರನ್ನೋ ಹುಡುಕುತ್ತಿತ್ತು. ಇಬ್ಬರಿಗೂ ಮುಂದೇನು ಹೇಳಬೇಕು ಎಂದು ಗೊತ್ತಾಗಲಿಲ್ಲ. ಈ ಗಂಭೀರ ಸನ್ನಿವೇಶದ ಜೊತೆ ಎಲ್ಲೆಡೆ ಹರಡಿದ್ದ ಮೌನವನ್ನು ಹಗುರಗೊಳಿಸಲು ಡಾಕ್ಟರ್ ಶಾಮಸುಂದರರು ಕಪಾಟಿನ ಮೇಲಿದ್ದ ಒಂದು ಪಾರಿತೋಷಕದ ಕಡೆ ಬೆರಳು ಮಾಡಿ, "ಇದು ನೀನು ತೆನಾಲಿ ರಾಮಕೃಷ್ಣನ ಪಾತ್ರದಲ್ಲಿ ಗೆದ್ದ ಮೊದಲ ಬಹುಮಾನ ಇರಬೇಕು, ಹಿ ಹೀ," ಎಂದು ನಕ್ಕರು. "ಇಲ್ಲ ಅಂಕಲ್. ನನಗೆ ಯಾವ ಪಾರಿತೋಷಕಾನೂ ಬಂದಿಲ್ಲ. ಅದು ಸುದು ಗೆದ್ದಿದ್ದು ಹೈಸ್ಕೂಲ್ ಬ್ಯಾಡ್ಮಿಂಟನ್ ಸ್ಪರ್ಧೇಲಿ. ಇದು ದೀಪು ಚೆಸ್ ಆಟದಲ್ಲಿ ಗೆದ್ದಿದ್ದು," ಎಂದು ಮತ್ತೊಂದು ಪಾರಿತೋಷಕವನ್ನು ತೋರಿಸಿದಳು. ಮುಂದುವರಿಸಿ, "ಆ ಸುದು ದೀಪು ತುಂಬ ಕಾಟ ಕೊಡ್ತಾರೆ ಅಂಕಲ್. ನಾನು ಬೇಡ ಅಂದರೂ ಅವರಿಗೆ ಬೇಡವಾದ ವಸ್ತುಗಳನ್ನೆಲ್ಲ ತಂದು ನನ್ನ ರೂಮಿಗೆ ಹಾಕ್ತಾರೆ." ರಂಜನಿಯ ಸ್ವಾಭಿಮಾನ ಅಲ್ಪವಾಗಿರುವುದಕ್ಕೆ ನಿದರ್ಶನವೆನ್ನುವಂತೆ ತನ್ನ ಸಾಧನೆಗಳನ್ನು ಬದಿಗೊತ್ತಿ ಸುದು-ದೀಪು ಮೇಲೆ ಆಕ್ಷೇಪಣೆ ಹೊರೆಸಿದ್ದು ಮನೋವಿಜ್ಞಾನಿ ಶಾಮಸುಂದರರ ಗಮನಕ್ಕೆ ಬರಲು ಹೆಚ್ಚು ಸಮಯ ಬೇಕಾಗಲಿಲ್ಲ. "ಸುದು ದೀಪು ಬರೀ ಈ ಲೋಹದ ಪಾರಿತೋಷಕಗಳನ್ನು ಗೆದ್ದಿದ್ದು ಗಹನವಾದ ವಿಚಾರವಲ್ಲ ಬಿಡು," ಎಂದು ಹೇಳುತ್ತ ಡಾಕ್ಟರ್ ಶಾಮಸುಂದರ ಆ ಎರಡೂ ಪಾರಿತೋಷಕಗಳನ್ನು ಕಪಾಟಿನ ಹಿಂದಕ್ಕೆ ಕಾಣದಂತೆ ಸರಿಸಿ ತಮ್ಮ ಕೋಟಿನ ಜೇಬಿನಿಂದ ಒಂದು ಸಣ್ಣ ಫೋಟೋ ಫ್ರೇಮ್ ತೆಗೆದು ಓರಣವಾಗಿ ಕಪಾಟಿನ ಮೇಲಿಟ್ಟು ಮುಂದುವರೆಸಿದರು, "ಸುದು ದೀಪು ಆಟದಲ್ಲಿ ಗೆದ್ದರೆ ನೀನು ನಿಜಜೀವನದಲ್ಲಿ ನಮ್ಮ ಸುದೀಪನ ಮನಸ್ಸನ್ನೇ ಗೆದ್ದಿದ್ದೀಯಲ್ಲಮ್ಮ, ಇದು ನಿನ್ನ ಪಾರಿತೋಷಕ. ನಾನೆ ಲಂಡನ್ನಿಂದ ತಂದಿದ್ದು," ಎಂದು ಹೆಮ್ಮೆಯಿಂದ ಸುದೀಪನ ಫೋಟೋ ಕಪಾಟಿನ ಮೇಲೆ ಜೋಡಿಸಿದರು. ಹಸನ್ಮುಖಿ ಸುದೀಪನ ಫೋಟೋ ನೋಡಿ ರಂಜನಿಯ ಮುಖ ಚಹರೆ ಬದಲಾಯಿಸಿದರೂ ಅದನ್ನು ತೋರಿಸಿಕೊಳ್ಳದೆ, "ಅಂಕಲ್, ಡಾಕ್ಟರ್ ಕೇಶವ್ ಅವರ ಫೋಟೋ ಅಲ್ಲಿಡಬೇಡಿ. ಸುದು ದೀಪು ನೋಡಿದರೆ ನನ್ನ ಜೊತೆ ಜಗಳ ಆಡ್ತಾರೆ ಅಷ್ಟೆ," ಎಂದಳು. ಶಾಮಸುಂದರರಿಗೆ ಅವಳ ಧ್ವನಿಯಲ್ಲಿ ಅಡಗಿದ್ದ ಭಯದಿಂದಲೇ ತಿಳಿಯಿತು ಸುದು ದೀಪು ರಂಜನಿಯ ಜೀವನದಲ್ಲಿ ಎಷ್ಟು ಸಲ ನಿಕೃಷ್ಟವಾಗಿ ನಡೆದುಕೊಂಡಿರಬಹುದೆಂದು. ಹಾಗಾದರೆ ರಂಜನಿಯ ಸಮಸ್ಯೆಗೆ ಈ ಮನೆಯ ವಾತಾವರಣವೇ ಒಂದು ಮುಖ್ಯ ಕಾರಣವಿರಬಹುದೆಂದು ಅನಿಸಿತು ಶಾಮಸುಂದರರಿಗೆ. ಜೊತೆಗೆ ಶಾಮಸುಂದರ ಅವರು ಮೀನಾಕ್ಷಿಯವರನ್ನು ಭೇಟಿ ಮಾಡಿ ಇನ್ನು ಕೆಲವು ಗಂಟೆಗಳಷ್ಟೇ ಆಗಿದ್ದರೂ ಅವರ ಉತ್ಸಾಹಕ್ಕೆ ಕಾರಣ ಮದುವೆಯ ಸಂಬಂಧಕ್ಕಿಂತ ಮುಂದೆ ಉಪಯೋಗಕ್ಕೆ ಬರುವರೆಂಬುದೇ ಆಗಿದೆಯೆಂದು ಅರಿತು ಅವರ ಬಗ್ಗೆ ಸಹಜವಾಗಿ ಒಳ್ಳೆಯ ಅಭಿಪ್ರಾಯ ಬಂದಿರಲಿಲ್ಲ. ಅವರನ್ನು ಕರುಣೆಯಿಲ್ಲದ ಮಲತಾಯಿಯ ರೂಪದಲ್ಲಿ ಊಹಿಸಿಕೊಳ್ಳುವುದು ಅಷ್ಟು ಕಷ್ಟವಾಗಲಿಲ್ಲ ಶಾಮಸುಂದರರಿಗೆ. ಸುದು ದೀಪು ಅವರಿಗೆ ಈ ಮನೆಯಲ್ಲಿ ಸಿಕ್ಕ ಪ್ರಾಮುಖ್ಯತೆ ರಂಜನಿಗೆ ಸಿಕ್ಕಿಲ್ಲ ಎನ್ನುವುದಕ್ಕೆ ಪುರಾವೆ ಹುಡುಕಬೇಕಾಗಿರಲಿಲ್ಲ. "ಸುದು ದೀಪು ಕೇಳಿದರೆ ಲಂಡನ್ ಅಂಕಲ್‌ಗೆ ಫೋನ್ ಮಾಡೋಕೆ ಹೇಳು, ಹಿ ಹೀ," ಎಂದು ತಮಾಷೆ ಮಾಡಿ ರಂಜನಿಯ ರೂಮಿನಿಂದ ವರಾಂಡಕ್ಕೆ ಬಂದು, "ಮೀನಾಕ್ಷಮ್ಮ, ನಾನು ಇನ್ನು ಬರ್ತೀನಿ," ಅಂತ ಹೇಳಿ ಹೊರಟರು.

ರಂಜನಿಯ ಸಮಸ್ಯೆಯ ಬಗ್ಗೆ ಸಾಕಷ್ಟು ಮಾಹಿತಿ ದೊರಕಿಸಿಕೊಂಡು ಬಂದ ಡಾಕ್ಟರ್ ಶಾಮಸುಂದರರು ಕೃಷ್ಣಮೂರ್ತಿರಾಯರ ಜೊತೆ ಅವರ ಮೊಬೈಲಿನಲ್ಲಿ ಮಾತನಾಡಿದರು. "ರಂಜನಿಯ ಸಮಸ್ಯೆಗೆ ಮನಃಶಾಸ್ತ್ರದಲ್ಲಿ 'passive-aggressive' ನಡತೆ ಎಂದು ಕರೆಯುತ್ತೇವೆ. ಈ 'ನಿಷ್ಕ್ರಿಯ-ಆಕ್ರಮಣ' ನಡತೆಯಲ್ಲಿ ನರಳುತ್ತಿರುವವರು ತಮ್ಮ ಹಿಂದಿನ ಕೆಟ್ಟ ನೆನಪುಗಳನ್ನು ಬೇರೆಯವರ ಮೇಲೆ ಉಪಯೋಗಿಸಿ ಅವರನ್ನು ದಂಡಿಸಲು ಅಥವಾ ಅವರ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸುತ್ತಾರೆ. ಹೆಚ್ಚಾಗಿ ಯಾರ ಮೇಲೆ ತುಂಬ ಪ್ರೀತಿ ಇರುತ್ತದೆಯೋ ಅಂತಹವರನ್ನೇ ಈ ಮಾನಸಿಕ ದುರ್ಬಲ ವ್ಯಕ್ತಿಗಳು ಬಲಿಪಶುವಾಗಿ ಆಯ್ದುಕೊಳ್ಳುವುದು," ಎಂದರು. ಸ್ವಲ್ಪ ತಡೆದು, "ನಮ್ಮ ಸುದೀಪನನ್ನು ಕಂಡರೆ ತುಂಬ ಪ್ರೀತಿಯಿರುವುದರಿಂದಲೆ ರಂಜನಿ .., " ಎಂದು ಹೇಳಿ ಮುಗಿಸುವ ಮುಂಚೆಯೇ ಕೃಷ್ಣಮೂರ್ತಿರಾಯರಿಗೆ ಮಿಕ್ಕೆಲ್ಲ ವಿಚಾರ ಅರ್ಥವಾಗಿತ್ತು. ಡಾಕ್ಟರ್ ಶಾಮಸುಂದರ ಮುಂದುವರೆಸಿ, "ನಾಳೆ ನಮ್ಮ ಮನೆಗೆ ಬನ್ನಿ. ಸಮಸ್ಯೆಗೆ ಪರಿಹಾರ ತಿಳಿಸುತ್ತೇನೆ," ಎಂದು ಹೇಳಿ, ರಂಜನಿ ಮತ್ತು ಕೃಷ್ಣಮೂರ್ತಿರಾಯರನ್ನು ಮಾತ್ರ ತಮ್ಮ ಮನೆಗೆ ಬರಲು ಆಹ್ವಾನಿಸಿದರು. ಅಂದು ರಾತ್ರಿ ಡಾ. ಶಾಮಸುಂದರ ರಂಜನಿಯ ಸಮಸ್ಯೆಯ ಬಗ್ಗೆ ಮತ್ತಷ್ಟು ಸಂಶೋಧನೆ ಮಾಡಿ ಒಂದು ನಿರ್ದಿಷ್ಟ ಚಿಕಿತ್ಸೆ ಯೋಜಿಸಿದರು. ಮಾರನೆಯ ದಿನ ಸಂಜೆ ಮನೆಗೆ ಬಂದ ರಂಜನಿ ಮತ್ತು ಕೃಷ್ಣಮೂರ್ತಿರಾಯರನ್ನು ಆದರದಿಂದ ಬರಮಾಡಿಕೊಂಡು, ತಾವು ಯೋಜಿಸಿದ 'narco analysis' ಚಿಕಿತ್ಸೆಯ ಬಗ್ಗೆ ಸರಳ ರೀತಿಯಲ್ಲಿ ವಿವರಿಸಿದರು. "ಈ ಚಿಕಿತ್ಸೆಯಲ್ಲಿ ರಂಜನಿಗೆ ಒಂದು ನಿದ್ದೆ ಬರಿಸುವ ಚುಚ್ಚುಮದ್ದು ಕೊಟ್ಟು, ಅರೆನಿದ್ರೆಯಲ್ಲಿರುವ ಅವಳನ್ನು ತನ್ನ ಮನಸ್ಸಿನಲ್ಲಿ ಕೊರೆಯುತ್ತಿರುವ ಸಮಸ್ಯೆ ಅಥವಾ ಭಯಗಳಿಗೆ ಕಾರಣ ಹುಡುಕುವಂತೆ ಕೆಲವು ಪ್ರಶ್ನೆ ಕೇಳುತ್ತೇನೆ. ಚಿಕ್ಕಂದಿನ ಕೆಟ್ಟ ನೆನಪುಗಳು, ನಡೆದ ಕೆಟ್ಟ ಸನ್ನಿವೇಶಗಳು ಅಥವಾ ಇನ್ಯಾವುದೇ ಕಾರಣವಿದ್ದರೂ ಈ ಚಿಕಿತ್ಸೆಯ ಕಾರ್ಯವಿಧಾನದಲ್ಲಿ ನನಗೆ ತಿಳಿಯುತ್ತೆ. ನಂತರ ರಂಜನಿಯನ್ನು ಸುಪ್ತಾವಸ್ಥೆಗೆ ಬರಿಸಿ ಅವಳ ದುರ್ಬಲ ಮನಸ್ಸಿನಿಂದ ಆ ಕಾರಣಗಳನ್ನು ಹೋಗಲಾಡಿಸುತ್ತೇನೆ, ಅಷ್ಟೆ. ಏನಮ್ಮ, ರಂಜನಿ ರೆಡಿನಾ?" ಎಂದು ಕೇಳಿದರು. "ಹೂಂ," ಎಂದಷ್ಟೆ ಹೇಳಿ ರಂಜನಿ ಅವರು ತೋರಿಸಿದ ಮಂಚದಲ್ಲಿ ಮಲಗಿದಳು. ಚುಚ್ಚುಮದ್ದು ಕೊಟ್ಟದ್ದೇ ಗೊತ್ತಾಗಲಿಲ್ಲ. ಸ್ವಲ್ಪ ಹೊತ್ತಿಗೆ ನಿದ್ರಾವಸ್ಥೆಗೆ ಬಂದ ರಂಜನಿಯನ್ನು ಡಾಕ್ಟರ್ ಶಾಮಸುಂದರ ಹಲವಾರು ಪ್ರಶ್ನೆಗಳನ್ನು ಕೇಳಿದರು. ಅವಳು ಕೊಟ್ಟ ಉತ್ತರಗಳನ್ನು ವಿಶ್ಲೇಷಣೆ ಮಾಡಿದ ಡಾ. ಶಾಮಸುಂದರರಿಗೆ ಅವರಂದುಕೊಂಡಂತೆ ಅವಳ ಸಮಸ್ಯೆಗೆ ಕಾರಣಗಳು ಮುಖ್ಯವಾಗಿ ಅವಳು ಬೆಳೆದ ಮನೆಯ ವಾತಾವರಣ, ಪ್ರಾಮುಖ್ಯತೆ ಇಲ್ಲದ ಜೀವನದಲ್ಲಿ ಸ್ವಾಭಿಮಾನ ಅಧೋಗತಿಯಾದದ್ದು ಮತ್ತು ಸುದು ದೀಪುವಿನ ದೂಷಣೆ. ಆದರೆ ಅವರ ಗಮನ ಸೆಳೆದದ್ದು ರಂಜನಿಯ ಮನಸ್ಸಿನಲ್ಲಿ ಆಗುತ್ತಿದ್ದ ಸುದು-ದೀಪು ಮತ್ತು ಸುದೀಪರ ಹೋಲಿಕೆ. ಸುದು-ದೀಪು ಸೇರಿದರೆ ಸುದೀಪ್! ಅದಕ್ಕೇ ಇರಬೇಕು ಸುದೀಪನನ್ನು ಹೆಸರು ಹಿಡಿದು ಕರೆಯಲೂ ಅಂಜಿಕೆ ರಂಜನಿಗೆ. ಜೊತೆಗೆ 'ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ' ಎನ್ನುವ ಹಾಗೆ ಮೀನಾಕ್ಷಮ್ಮನವರ ಪಕ್ಷಪಾತದ ನೆರಳಲ್ಲೇ ಬೆಳೆದ ರಂಜನಿ ತೀರ ಅನಾಯಸವಾಗಿ ಕಲಿತದ್ದು 'ಪಾಲಿಗೆ ಬಂದದ್ದು ಪಂಚಾಮೃತ' ಎನ್ನುವ ಮಂತ್ರ. ಆದರೆ ಅವಳ ನಿಕಟವರ್ತಿಯಾಗಿ ಸದಾ ಆತ್ಮವಿಶ್ವಾಸ ಬೆಳೆಸಿದ್ದು ತಂದೆ ಕೃಷ್ಣಮೂರ್ತಿರಾಯರು. ಅವರು ಅವಳ ದೂರುಗಳಿಗೆ ಪರಿಹಾರ ಹುಡುಕಿ ಸುದು-ದೀಪು ಮತ್ತು ಕೆಲವು ಬಾರಿ ಮೀನಾಕ್ಷಮ್ಮನವರನ್ನು ಕೂಡ ಗದರಿಸುತ್ತಿದ್ದ ಹಲವಾರು ಘಟನೆಗಳನ್ನು 'ತಾನೇ ಗೆದ್ದದ್ದು' ಎಂದು ಜಂಭವಾಗಿ ಅರೆನಿದ್ರೆಯಲ್ಲೂ ಉದಾಹರಿಸಿದಳು ರಂಜನಿ. ಚುಚ್ಚುಮದ್ದಿನ ಪ್ರಭಾವ ಕಡಿಮೆಯಾದ ನಂತರ ರಂಜನಿಯನ್ನು ಸುಪ್ತಾವಸ್ಥೆಯಲ್ಲಿ ವಶೀಕರಣ ಮಾಡಿಕೊಂಡು ಡಾ. ಶಾಮಸುಂದರ ಕೆಲವು ಅವ್ಯಕ್ತ ಸಲಹೆಗಳನ್ನು ಕೊಡತೊಡಗಿದರು. "ರಂಜನಿ, ನಾನು ಹೇಳುವುದನ್ನು ಪುನಃ ಹೇಳು... ಡಾ.ಕೇಶವ್ ಮತ್ತು ಸುದೀಪ್ ಒಬ್ಬರೆ. ಸುದೀಪ್ ಬೇರೆ ಸೌದಾಮಿನಿ ಮತ್ತು ದೀಪಕ್ ಬೇರೆ." ಹೀಗೆ ಇಪ್ಪತ್ತು ನಿಮಿಷಗಳಲ್ಲಿ ಹಲವಾರು ಅವ್ಯಕ್ತ ಸಲಹೆಗಳನ್ನು ಪುನರುಚ್ಚರಿಸಿದ ನಂತರ ಬಳಲಿದ ರಂಜನಿಗೆ ಗಾಢನಿದ್ರೆ ಬಂದಿತ್ತು.

ಕಂಬಳಿ ಹುಳ ಸುಂದರ ಚಿಟ್ಟೆಯಾಗಿ ಹೂವನ್ನರಸುವ ಬದಲು, ಅದರ ಸೌಂದರ್ಯಕ್ಕೆ ಹೂವುಗಳೇ ಮೋಡಿಯಾಗಿ ಚಿಟ್ಟೆಯನ್ನು ಮುತ್ತಿದಂತೆ ಕನಸು ಕಂಡು ವಿಸ್ಮಯದಲ್ಲಿ ಎಚ್ಚೆತ್ತಾಗ ಸುದೀಪನ ನಗು ಮುಖ ಕಂಡಿತು.

◈



# ಅಕಳಂಕಿತೆ (ಮುಕ್ತಾಯ-೩)

**ಜ್ಯೋತಿ ಶೇಖರ್**

ಮಿಲ್ಪಿಟಸ್, ಕ್ಯಾಲಿಫೋರ್ನಿಯ, *jyothi_shekar_AT_yahoo.com*

ಕುತೂಹಲದಿಂದ ಆ ಫೋಟೋ ಬಳಿ ಶಾಮಸುಂದರ್ ನಿಂತರು. ಪುಟ್ಟಹುಡುಗಿ ರಂಜನಿ ಬಿಳಿ ಪಾಮರೇನಿಯನ್ ನಾಯಿಯೊಂದನ್ನು ಅಪ್ಪಿ ಹಿಡಿದು ನಿಂತ ಚಿತ್ರ. ಮೀನಾಕ್ಷಿಯೇ ವಿವರಣೆ ನೀಡಿದರು, "ಅದು ನಮ್ಮ ರಂಜುವಿನ ಪ್ರೀತಿಯ ನಾಯಿ ಜೂಲಿ. ಅಬ್ಬಬ್ಬಾ! ಅದು ಸತ್ತಾಗ ಇವಳ ಗೋಳು, ಸಾಕಪ್ಪ ಸಾಕು! ನೋಡಿ, ಈ ಹುಚ್ಚು ಹುಡುಗಿಗೆ, ಮನುಷ್ಯರಾದ ಅಪ್ಪ ಅಮ್ಮನ ಮೇಲೆ ಸಹ ಇಲ್ಲದ ಅಟ್ಯಾಚ್ಮೆಂಟ್, ಆ ಪ್ರಾಣಿಯ ಮೇಲೆ!" "ರಂಜನಿಗೆ ಈ ಮಾತು ರುಚಿಸಲಿಲ್ಲ. ಅದಕ್ಕವಳು ಖಾರವಾಗಿ, "ಅಮ್ಮ, ಅಟ್ಯಾಚ್ಮೆಂಟ್ ಬೆಳೆಯೋದಕ್ಕೆ, ಪ್ರಾಣಿಗಳು ತೋರುವ ಅನ್ಕಂಡೀಶನಲ್ ಪ್ರೀತಿಯನ್ನು ಅಪ್ಪ ಅಮ್ಮ ತೋರುತ್ತಾರೇನಮ್ಮ?" ಎಂದು ಸವಾಲೆಸೆದಳು. ಮೀನಾಕ್ಷಮ್ಮನಿಗೆ ಮಗಳ ಈ ಚುರುಕು ಮಾತಿನ ವರಸೆ ಹಿಡಿಸದೆ ಮುಖ ಚಿಗಿಸಿದರು. ವಾತಾವರಣ ತಿಳಿಯಾಗಿಸಲು, ಶಾಮಸುಂದರ್ ನಗೆಯಾಡುತ್ತಾ, "ಅಲ್ಲಮ್ಮ ರಂಜನಿ, ಮನುಷ್ಯನಿಂದ ಅನ್ಕಂಡೀಶನಲ್ ಲವ್ ಎಕ್ಸ್ಪೆಕ್ಟ್ ಮಾಡೋದು ತಪ್ಪಲ್ವೇ? ಎನಿ ರಿಲೇಷನ್ಶಿಪ್ ಇಸ್ ಬೇಸ್ಡ್ ಆನ್ ಗಿವ್ ಅಂಡ್ ಟೇಕ್, ಇಸ್ನ್ಟ್ ಇಟ್?" ಎಂದರು.

"ಅದ್ಸರಿ, ಎಷ್ಟಿದ್ದರೂ ಇದು ಮೇಲ್ ಡಾಮಿನೇಟೆಡ್ ಸೊಸೈಟಿಯಲ್ಲವೇ? ಫೀಮೇಲ್ಸ್ ಗಿವ್, ಮೇಲ್ಸ್ ಟೇಕ್, ರೈಟ್ ಅಂಕಲ್?" ರಂಜನಿಯ ವ್ಯಂಗ್ಯ ಬೆರೆತ ದನಿಯಲ್ಲಿ ನೋವಿನ ಎಳೆ ಗೋಚರವಾಯಿತು ಡಾ. ಶಾಮಸುಂದರ್‌ಗೆ. ತಕ್ಷಣ ಸಂತೈಸುವಂತೆ ನುಡಿದರು, "ಎಲ್ಲಾ ಗಂಡಸರನ್ನೂ ಒಂದೇ ಅಳತೆಗೋಲಿನಲ್ಲಿ ಅಳೆಯಬೇಡಮ್ಮ. ಈಗ ನಮ್ಮ ಸುದೀಪನನ್ನೇ ತೊಗೊ. ಎಷ್ಟು ಸಭ್ಯ ಹುಡುಗ, ಹೆಂಗಸರೆಂದರೆ ಎಂತಹ ಗೌರವ, ಅಲ್ಲವೇ?" ರಂಜನಿ ಏನೊಂದೂ ಮಾತನಾಡದೆ ಮುನ್ನಡೆದಾಗ, ಶಾಮಸುಂದರರು ನಿಟ್ಟುಸಿರಿಟ್ಟರು. ಅವರೊಳಗಿನ ವೈದ್ಯನಿಗೆ ರಂಜನಿಯ ವರ್ತನೆಯ ಹಿಂದೆ ಯಾವುದೋ ಆಳವಾದ ಮನೋವೇದನೆ ಅಡಗಿರುವುದು ಸ್ಪಷ್ಟವಾಗಿತ್ತು. ಆದರೆ ಅದು ಏನು ಎನ್ನುವುದು ಬಿಡಿಸಲಾರದ ಕಗ್ಗಂಟು.

ಶಾಮಸುಂದರ್ ಮನೆಯಿಂದ ಹೊರಟ ಕೂಡಲೆ ಮೀನಾಕ್ಷಿ ರೂಮಿನಲ್ಲಿದ್ದ ರಂಜನಿಯನ್ನು ತರಾಟೆಗೆ ತೆಗೆದುಕೊಂಡರು. "ದೊಡ್ಡವರು ಮನೆಗೆ ಬಂದರೆ ಸರಿಯಾಗಿ ಮಾತನಾಡಿಸಬೇಕೆಂಬ ಪರಿಜ್ಞಾನ ಬೇಡವೇ ನಿನಗೆ? ಅವರ ಎದುರು ನನ್ನ ಜೊತೆ ವಾದ ಮಾಡುತ್ತೀಯಲ್ಲಾ, ನಿನಗೆ ಬುದ್ಧಿ ಇದೆಯಾ?" ರಂಜನಿಯ ಉತ್ತರ ಅಷ್ಟೇ ಹರಿತವಾಗಿತ್ತು, "ಇಲ್ಲ! ನನಗೆ ಬುದ್ಧಿ ಇಲ್ಲ! ನಿನ್ನ ತರಹ, ಎಂದಾದರೂ ನಿನ್ನ ಮುದ್ದಿನ ಮಗಳು ಸೌದಾಮಿನಿಗೆ ಅವರು ಕೆಲಸ ಕೊಡಿಸಬಹುದೆಂದು ಈಗಿನಿಂದಲೇ ಅವರ ಕಾಲು ತೊಳೆದು ತೀರ್ಥ ತೆಗೆದುಕೊಳ್ಳುತ್ತೇನೆ, ಆಯಿತಾ?" ಮೀನಾಕ್ಷಿಗೆ ಮಗಳ ಉದ್ಧಟತನದಿಂದ ಕೋಪ ಭುಗಿಲೆದ್ದಿತು. "ಅಲ್ವೇ ರಂಜನಿ, ಸುದೀಪನಂತಹ ಚಿನ್ನದಂಥ ಗಂಡು ತಾನೇ ಹುಡುಕಿಕೊಂಡು ಬಂದರೆ, ಏನೋ ಸಣ್ಣ ಕಾರಣ ಹಿಡಿದು ಅವನನ್ನು ದೂರ ದೂಡಿದೆ. ಸಾಲದ್ದಕ್ಕೆ ಈಗ ಅವರ ಚಿಕ್ಕಪ್ಪನನ್ನು ಹೀಗೆ ಅವಮಾನಿಸಿದೆ. ಛೆ! ನಿನಗೇನು ಕೇಡುಗಾಲ ಬಂದಿದೆಯೋ ನಾ ಬೇರೆ ಕಾಣೆ! ಇದೆಲ್ಲ ತಿಳಿದರೆ ಜನ ಏನೆಂದಾರು? ನಿನ್ನ ಮದುವೆ ಆಗುವುವಾದರೂ ಹೇಗೆ?..." ಹೀಗೆ ಹಣೆ ಹಚ್ಚಿಕೊಳ್ಳುತ್ತಾ ಪುಂಖಾನುಪುಂಖವಾಗಿ ಬೈಗುಳಗಳ ಸುರಿಮಳೆಗೈಯುತ್ತಿದ್ದ ಮೀನಾಕ್ಷಿಯನ್ನು ಕಡೆಗಾಣಿಸಿ ಸದ್ದಿಲ್ಲದೆ ರಂಜನಿ ಕೋಣೆಯಿಂದ ಕಾಲ್ತೆಗೆದಳು. ಮನೆಯವರೊಂದಿಗೆ ಮನಸ್ತಾಪವಾದಾಗಲೆಲ್ಲ ರಂಜನಿ ನೇರ ನಡೆಯುತ್ತಿದ್ದುದು ಮಹಡಿಯ ಮೇಲಿನ ಟೆರೇಸಿಗೆ. ಅಲ್ಲಿನ ತಣ್ಣನೆಯ ಗಾಳಿಗೆ ಮೈಯೊಡ್ಡಿ ನಿಂತರೆ ಮನಸ್ಸಿಗೆ ಏನೋ ಸಮಾಧಾನ. ಇಂದೂ ಸಹ ಅಲ್ಲಿಗೇ ನಡೆದಳು.

ಶೂನ್ಯದತ್ತ ನಿಟ್ಟಿಸುತ್ತಾ ನಿಂತ ರಂಜನಿಗೆ, ತನ್ನ ತಂಗಿ ಸೌದಾಮಿನಿ ಪಕ್ಕದಲ್ಲಿ ಬಂದ ಅರಿವಾಯಿತು. "ನೀನು ಇಲ್ಲಿರ್ತೀಯ ಅಂತ ನನಗೆ ಚೆನ್ನಾಗಿ ಗೊತ್ತು," ಅಕ್ಕನೆಡೆಗೆ ಮಂದಹಾಸ ಬೀರುತ್ತ ಸೌದಾಮಿನಿ ಮಾತು ಶುರು ಮಾಡಿದಳು, "ಕೆಳಗೆ ಅಮ್ಮ ಬಹಳ ಗರಂ ಆಗಿದ್ದಾಳೆ, ಗೊತ್ತೋ ತಮಗೆ?" ತನಗಿಂತ ಎರಡು ವರುಷ ಚಿಕ್ಕವಳಾದರೂ, ಕ್ಷಣಮಾತ್ರದಲ್ಲಿ ಎಲ್ಲವನ್ನೂ ಗ್ರಹಿಸುವ ಸೂಕ್ಷ್ಮಮತಿ. ಅದಕ್ಕೇ ಇರಬೇಕು ಅಮ್ಮ ಅವಳನ್ನು ಅಷ್ಟು ಕೊಂಡಾಡುವುದು. ರಂಜನಿಯ ಮನದಲ್ಲಿ ಅಸಹನೆ ಮೂಡಿತು. "ಗೊತ್ತು ತಾಯಿ! ಚೆನ್ನಾಗಿ ಗೊತ್ತು! ದಯವಿಟ್ಟು ಅಮ್ಮನ ವಕಾಲತ್ತು ವಹಿಸಿಕೊಂಡು ನೀನು ಬರಬೇಡ ತಿಳಿಯಿತಾ?" ನಾಟಕೀಯವಾಗಿ ನಮಸ್ಕರಿಸುತ್ತಾ ರಂಜನಿ ದೂರ ಸರಿದಳು.

"ಅಲ್ಲಾ ಕಣೆ, ರಂಜು, ಅಮ್ಮನ ಉಪದೇಶದಲ್ಲಿ ತಪ್ಪೇನಿದೆ ಹೇಳು? ನೀನು ಸುದೀಪನಂತಹ ಎಜುಕೇಟೆಡ್, ಹ್ಯಾಂಡ್ಸಮ್ ಫೆಲೋನ ರಿಜೆಕ್ಟ್ ಯಾಕೇ ಮಾಡ್ದೆ? ನಾನಾಗಿದ್ರೆ ಕಣ್ಮುಚ್ಚಿಕೊಂಡು ಮದ್ವೆ ಆಗ್ತಿದ್ದೆ!"

"ಈಗ್ಲೂ ಆಗು, ನನ್ನದೇನೂ ಅಭ್ಯಂತರವಿಲ್ಲ!" ತಟ್ಟನೆ ಸಿಡಿಯಿತು ರಂಜನಿಯ ಉತ್ತರ. "ಹೇಯ್, ಹೇಯ್, ಹೋಲ್ಡಾನ್, ಓಕೆ? ಸುದೀಪ ಬಿದ್ದಿರುವುದು ನಿನ್ನ ಹಿಂದೆ, ನನ್ನ ಹಿಂದಲ್ಲ! ಕೆಲವೇ ದಿನಗಳ ತನಕ ನೀನೂ ಅವನನ್ನು ಪ್ರೀತಿಸುತ್ತಿದ್ದೆ. ಇದ್ದಕ್ಕಿದ್ದ ಹಾಗೆ ಏನಾಯಿತು? ಹೇಳು ರಂಜು!" ಅಕ್ಕನ ಭುಜಗಳನ್ನು ತನ್ನೆಡೆಗೆ ತಿರುಗಿಸಿಕೊಂಡು ಸೌದು ಒತ್ತಾಯಿಸಿದಳು. "ಹೇಳಿದ್ನಲ್ಲ, ಅವನ ನಡತೆ ಸರಿಯಿಲ್ಲ ಅಂತ." ಸೌದು ರಂಜನಿಯ ಬಾಗಿದ ತಲೆಯೆತ್ತಿ ಕಣ್ಣಲ್ಲಿ ಕಣ್ಣಿಟ್ಟು ಹೇಳಿದಳು, "ನೋಡು ರಂಜು, ನೀನು ಅಮ್ಮ ಅಪ್ಪನನ್ನು ನಂಬಿಸಬಹುದು. ಆದರೆ ಅವನು ನಿನ್ನ ಜೊತೆ ಅನುಚಿತವಾಗಿ ವರ್ತಿಸಿದ ಅನ್ನೋದು ನಾನು ನಂಬೋಲ್ಲ. ಯಾಕೆ ನಿನ್ನ ಬಾಳನ್ನು ನೀನೇ ಹಾಳು ಮಾಡ್ಕೊತಾ ಇದ್ದಿಯ ಅಕ್ಕ? ನನ್ನ ಹತ್ತಿರ ಹೇಳಲ್ವ? ಹೇಳಮ್ಮ ಪ್ಲೀಸ್, ನಾನ್ಯಾರಿಗೂ ಹೇಳೋಲ್ಲ," ತಂಗಿಯ ಕಕ್ಕುಲತೆಯ ಧ್ವನಿ ಕೇಳಿ ರಂಜನಿಯ ಕಣ್ಣಲ್ಲಿ ನೀರು ಜಿನುಗಿತು. "ಸುದೀಪನದೇನೂ ತಪ್ಪಿಲ್ಲ ಸೌದು. ಹಿ ಇಸ್ ಅ ರಿಯಲ್ ಜೆಂಟಲ್‌ಮನ್. ಬಟ್ ಐ ಡೋಂಟ್ ಡಿಸರ್ವ್ ಹಿಮ್, ದಟ್ಸ್ ಆಲ್! ಅವನಿಗೆ ನನಗಿಂತ ಒಳ್ಳೆಯ ಹೆಣ್ಣು ಸಿಗಬೇಕು. ಆದ್ದರಿಂದ ಈ ಮದುವೆ ನಿಲ್ಲಿಸಲು ಪ್ರಯತ್ನಿಸುತ್ತಿದ್ದೇನೆ."

ಸೌದಾಮಿನಿಗೆ ತನ್ನ ಕಿವಿಗಳನ್ನು ತಾನೇ ನಂಬಲಾಗಲಿಲ್ಲ. ಪ್ರೀತಿಗಾಗಿ ತನ್ನ ಸುಖವನ್ನೇ ಬಲಿ ಕೊಡಲು ಸಿದ್ಧಳಾಗಿದ್ದಾಳೆ ತನ್ನ ಸ್ವಂತ ಅಕ್ಕ! ಕಥೆ ಕಾದಂಬರಿಗಳಲ್ಲಿ ನಡೆಯುವ ಮಾತು ತನ್ನ ಮನೆಯಲ್ಲೇ ನಡೆಯುತ್ತಿದೆ. ಯಾವ ತಪ್ಪಿಗಾಗಿ ರಂಜನಿ ತನ್ನನ್ನು ತಾನೇ ಶಿಕ್ಷಿಸಿಕೊಳ್ಳುತ್ತಿದ್ದಾಳೆ? ಉತ್ತರ ಹುಡುಕಲು ಪ್ರಯತ್ನಿಸಿದಳು ಸೌದಾಮಿನಿ.

"ಹುಚ್ಚಿಯ ಹಾಗೆ ಮಾತಾಡಬೇಡ! ನಿನಗೇನು ಕಮ್ಮಿಯಾಗಿದೆ ರಂಜು? ರೂಪವಿಲ್ಲವೇ? ವಿದ್ಯೆಯಿಲ್ಲವೇ? ನಿನ್ನನ್ನು ಮದುವೆಯಾಗಲು ಸುದೀಪ ಏಳು ಜನ್ಮದ ಪುಣ್ಯ ಮಾಡಿರಬೇಕು. ಹೀಗಿರುವಾಗ ನೀನ್ಯಾಕೆ ಹೀಗೆ ಯೋಚಿಸುತ್ತಿದ್ದೀಯ?"



"ನೋಡು ಸೌದು, ಯಾಕೆ ಅಂತ ಮಾತ್ರ ಕೇಳ್ಬೇಡ! ನಾನು ಹೇಳೋದಿಕ್ಕಾಗೊಲ್ಲ. ಇದನ್ನು ಅಪ್ಪ ಅಮ್ಮನ ಬಳಿ ಹೇಳಿದ್ರೆ ನನ್ನಾಣೆ! ಈಗ ಬಾ, ಇಲ್ಲದಿದ್ದರೆ ನಮ್ಮನ್ನು ಹುಡುಕಿಕೊಂಡು ಅಮ್ಮನೇ ಇಲ್ಲಿಗೆ ಬಂದ್ಬಿಡ್ತಾಳೆ," ರಂಜನಿ ಸೌದಾಮಿನಿಯ ಕೈ ಹಿಡಿದೆಳೆಯುತ್ತಾ ಕೆಳಗೆ ನಡೆದಳು.

ಸೌದಾಮಿನಿಗೆ ಅಂದು ರಾತ್ರಿಯೆಲ್ಲ ತಲೆಯಲ್ಲಿ ಯೋಚನೆಗಳ ಸುಳಿ. ನಾನು ಎಣಿಸಿದಂತೆ ಸುದೀಪ ಸಭ್ಯಸ್ಥನೇ. ಹಾಗಾದರೆ, ರಂಜನಿಯ ವಿಚಿತ್ರ ನಡವಳಿಕೆಯ ಹಿಂದಿನ ಕಾರಣವೇನು? ನನ್ನಿಂದ ಸಹ ಮುಚ್ಚಿಡುವಂಥ ಗುಟ್ಟು ಯಾವುದು? ಅವಳಿಗೇಕೆ ತನ್ನ ಬಗ್ಗೆ ಇಷ್ಟೊಂದು ಜಿಗುಪ್ಸೆ, ಕೀಳರಿಮೆ? ಇದು ಮನೋವ್ಯಾಧಿ ಇದ್ದರೂ ಇರಬಹುದು. ನಾಳೆ ನನ್ನ ಮನಶಾಸ್ತ್ರದ ಪ್ರೊಫೆಸರರ ಬಳಿ ಈ ಕುರಿತು ಮಾತನಾಡಬೇಕು, ಅವರಾದರೂ ದಾರಿ ತೋರಿಸಿಯಾರು. ಹೀಗೆ ನಿರ್ಧರಿಸಿದ ಮೇಲೆ ಸೌದಾಮಿನಿಯ ಬಳಿ ಸ್ವಲ್ಪ ನಿದ್ದೆ ಸುಳಿಯಿತು.

ಮರುದಿನ ಪ್ರೊ. ಸುಲೋಚನರ ಬಳಿ ಸೌದಾಮಿನಿ ತನ್ನ ಅಕ್ಕನ ವಿಷಯ ತೋಡಿಕೊಂಡಳು. ನಿಧಾನವಾಗಿ ಎಲ್ಲವನ್ನೂ ಕೇಳಿದ ಸುಲೋಚನ, "ಆಕೆಗೆ ಹುಡುಗ ಮೆಚ್ಚಿಗೆಯಾದರೂ ಯಾವುದೋ ಪಾಪಪ್ರಜ್ಞೆಯಿಂದಾಗಿ ಅವನನ್ನು ದೂರ ತಳ್ಳುತ್ತಿದ್ದಾಳೆ. ಇದನ್ನು "ಫಿಯರ್ ಆಫ್ ಇಂಟಿಮಸಿ" ಎನ್ನುತ್ತೇವೆ. ಕೆಲವೊಮ್ಮೆ ಚಿಕ್ಕಂದಿನಲ್ಲಿ ನಡೆದ ಚಿಕ್ಕ ದುರ್ಘಟನೆಯೂ ಸಹ ಮನುಷ್ಯರಿಗೆ, ತಮ್ಮ ಸೂಕ್ಷ್ಮ ಮನಸ್ಸಿನ ಸುತ್ತ ಕೋಟೆ ಕಟ್ಟಿ, ಆ ಮನಸ್ಸನ್ನು ಸಂರಕ್ಷಿಸಲು ಪ್ರೇರೇಪಿಸುತ್ತದೆ. ಯಾರನ್ನೂ ಮನಸ್ಸಿನ ಹತ್ತಿರ ಸೇರಿಸಲು ಬಿಡುವುದಿಲ್ಲ. ಆಕೆಗೂ ಹೀಗೇನಾದರೂ ಆಗಿರಬಹುದು. ಮದುವೆಯೆಂಬುದು ಮೈ-ಮನಸ್ಸಿನ ಸಮ್ಮಿಲನ. ಆದರೆ ಸದ್ಯಕ್ಕೆ, ಆಕೆ ಎರಡಕ್ಕೂ ಸಿದ್ಧಳಾಗಿಲ್ಲ. ಆದ್ದರಿಂದ, ಮೊದಲು ಆಕೆಯ ಈ ಮನಃಸ್ಥಿತಿಗೆ ಕಾರಣವೇನೆಂದು ತಿಳಿದುಕೊಂಡರೆ, ಮುಂದೆ ಸೈಕೋಥೆರಪಿಯಿಂದ ಇದನ್ನು ಗುಣಪಡಿಸುವ ಸಾಧ್ಯತೆ ಇದೆ," ಎಂದರು. ಪ್ರೊಫೆಸರರ ಮಾತು ಕೇಳುತ್ತಿದ್ದ ಹಾಗೆ ಸೌದಾಮಿನಿಗೆ ಮಿಂಚಿನಂತೆ ಏನೋ

ಹೊಳೆಯಿತು. ತಕ್ಷಣ ಅವರಿಗೆ ಧನ್ಯವಾದ ಅರ್ಪಿಸಿ, ರಂಜಿನಿಯನ್ನು ಕಾಣಲು ಹೊರಟಳು.

ಐ. ಐ. ಎಸ್ಸಿ. ಕ್ಯಾಂಪಸ್ಸಿನ ವಿಶಾಲವಾದ ಹುಲ್ಲಿನ ಹೊದಿಕೆಯ ಮೇಲೆ ರಂಜಿನಿಯ ಜೊತೆ ಕುಳಿತ ಸೌದಾಮಿನಿಗೆ ಮಾತು ಹೇಗೆ ಪ್ರಾರಂಭಿಸಬೇಕೋ ತಿಳಿಯಲಿಲ್ಲ. ನಾನು ಕೇಳುವ ಪ್ರಶ್ನೆಯಿಂದ ಮೊದಲೇ ಘಾಸಿಯಾಗಿರುವ ರಂಜಿನಿಯ ಮನಸ್ಸಿಗೆ ಮತ್ತೆ ಆಘಾತವಾಗಬಹುದು. ಆದರೆ, ಸುಮ್ಮನಿದ್ದರೆ, ಅವಳು ಹೀಗೇ ಕೊರಗಿ ಕೊರಗಿ ತನ್ನನ್ನು ತಾನೇ ಕೊಂದುಕೊಳ್ಳುತ್ತಾಳೆ. ನೀಳವಾಗಿ ಉಸಿರೆಳೆದುಕೊಂಡು, ರಂಜಿನಿಯ ಕೈಯನ್ನು ತನ್ನ ಕೈಯಲ್ಲಿ ಮೃದುವಾಗಿ ಹಿಡಿದು ಹೇಳಿದಳು, "ನೋಡು ರಂಜು, ನಾವು ಹುಟ್ಟಿದಂದಿನಿಂದ ಸಹೋದರಿಯರಿಗಿಂತ ಹೆಚ್ಚಾಗಿ ಆಪ್ತ ಸ್ನೇಹಿತರು. ಎಲ್ಲವನ್ನೂ ಹಂಚಿಕೊಂಡಿದ್ದೇವೆ. ಆದರೆ, ಒಬ್ಬ ಪರ್ವರ್ಟ್‌ನಿಂದಾಗಿ ...," ತಟ್ಟನೆ ಕೈ ಸೆಳೆದುಕೊಂಡು ರಂಜಿನಿ, ಉದ್ವೇಗದಿಂದ ನುಡಿದಳು, "ಏನು ಹೇಳ್ತಾ ಇದ್ದೀಯ, ಸೌದು?" ಸೌದಾಮಿನಿಗೆ ತಡೆಹಿಡಿದಿದ್ದ ದುಃಖ ಉಕ್ಕಿ ಹರಿಯಿತು. "ತಾತನ ಮನೆಯಲ್ಲಿ ರಾಮು ಮಾಮ ನಿನಗೆ ಏನು ಮಾಡ್ದ ಅಂತ ನನಗೆ ಗೊತ್ತು. ನಿನ್ನನ್ನು ಕರೆದುಕೊಂಡು ಹೋಗಿ ಬಾಗಿಲು ಹಾಕಿಕೊಂಡಾಗ ನನಗಿನ್ನೂ ನಿದ್ದೆ ಬಂದಿರಲಿಲ್ಲ. ಎದ್ದು ಬಂದು ಬಾಗಿಲ ಕಿಂಡಿಯಲ್ಲಿ ನೋಡ್ದೆ. ಕಿರುಚಲು ಭಯ. ವಾಪಸ್ಸು ಹೋಗಿ ಗಟ್ಟಿಯಾಗಿ ಕಣ್ಮುಚ್ಚಿ ಮಲಗಿಬಿಟ್ಟೆ. ಮತ್ತೆ, ಇಷ್ಟೂ ವರ್ಷ ಅದರ ನೆನಪೂ ಸಹ ಮರುಕಳಿಸದ ಹಾಗೆ ಮನಸ್ಸಿನಿಂದ ಅಳಿಸಿಹಾಕಿಬಿಟ್ಟಿದ್ದೆ. ನನ್ನನ್ನು ಕ್ಷಮಿಸು, ರಂಜು, ನಾನು ನಿನಗೆ ಯಾವುದೇ ರೀತಿಯ ಸಹಾಯ ಮಾಡಲಿಲ್ಲ. ಐ ವಿಷ್ ಐ ಹ್ಯಾಡ್ ಡನ್ ಸಮ್ಥಿಂಗ್. ಐಯಾಮ್ ಸಾರಿ, ಐಯಾಮ್ ವೆರಿ ಸಾರಿ!" ಅಕ್ಕನನ್ನು ತಬ್ಬಿ ಹಿಡಿದು ಅತ್ತಳು.

ರಂಜಿನಿಯದು ಮೂಕ ರೋದನ. ಕಣ್ಣುಗಳಿಂದ ಧಾರಾಕಾರ ನೀರು. ತಾತನ ಮನೆಗೆ ರಜೆಯಲ್ಲಿ ಹೋದಾಗಲೆಲ್ಲ, ತಾಯಿಯ ಸಂಬಂಧಿಕನಾದ ರಾಮು ಮಾಮ ತಮ್ಮೆಲ್ಲರ ಜೊತೆ ಉಯ್ಯಾಲೆ ಆಡುತ್ತಿದ್ದ, ಮಾವಿನಕಾಯಿ ಕಿತ್ತು ಕೊಡುತ್ತಿದ್ದ, ಹಾಸ್ಯದ ಚಟಾಕಿ ಹಾರಿಸಿ ನಗಿಸುತ್ತಿದ್ದ. ಆದರೆ ಅದೇ ನಂಬಿಕೆಯ ಮನುಷ್ಯ, ತನ್ನ ಕಾಮನೆಗಳ ಮೇಲೆ ಹತೋಟಿಯಿಲ್ಲದೆ, ಒಬ್ಬ ಮುಗ್ಧ ಏಳು ವರುಷದ ಬಾಲಕಿಯನ್ನು ತನ್ನ ಬಯಕೆಯ ಬಲಿಪಶುವಾಗಿಸಿದ್ದ. ಜೊತೆಗೆ ಅವಳನ್ನೇ ತಪ್ಪಿತಸ್ಥಳೆಂದು ದೂರಿ, ಹಿರಿಯರಿಗೆ ತನ್ನ ಕೃತ್ಯ ತಿಳಿಸದಂತೆ ತಡೆದಿದ್ದ. ಆ ರಾತ್ರಿ ನಡೆದ ದೌರ್ಜನ್ಯದ ಪೆಟ್ಟಿನಿಂದ ಜರ್ಜರಿತವಾದ ರಂಜಿನಿಯ ಪುಟ್ಟ ಮನಸ್ಸು ಚೇತರಿಸಿಕೊಳ್ಳಲೇ ಇಲ್ಲ. ಪದೇ ಪದೇ ಅಸಹ್ಯ, ಅವಮಾನ, ನಾಚಿಕೆ, ಆತ್ಮನಿಂದನೆಯ ಕಹಿ ಭಾವನೆಗಳಿಗೆ ಅವಳನ್ನು ಈಡು ಮಾಡುತ್ತಿತ್ತು. ಒಂದೆಡೆ ಅವಳು ಬೆಳೆಸಿಕೊಂಡ ಆತ್ಮವಿಶ್ವಾಸ ಸುದೀಪನ ಜೊತೆ ಹೊಸ ಬಾಳಿಗೆ ಅವಳನ್ನು ಹುರಿದುಂಬಿಸಿದರೆ, ಇನ್ನೊಂದೆಡೆ ಅವಳು ಮೈಗೂಡಿಸಿಕೊಂಡಿದ್ದ ಆತ್ಮಭರ್ತ್ಸನೆ ಅವಳನ್ನು ಪಾಪಿಯೆಂದು ದೂಷಿಸಿ ಸುದೀಪನ ಬಾಳಸಂಗಾತಿಯಾಗದಂತೆ ತಡೆಯುತ್ತಿತ್ತು. ಈ ದ್ವಂದ್ವದ ನಡುವೆ ತೂಗುಯ್ಯಾಲೆಯಾಗಿ ಸಾಗಿತ್ತು ಅವಳ ಈಗಿನ ಬದುಕು.

ರಂಜಿನಿಯ ಕಣ್ಣೀರು ಒರೆಸುತ್ತಾ ಸೌದಾಮಿನಿ ಸಮಾಧಾನ ಹೇಳಿದಳು, "ಇದರಲ್ಲಿ ನಿನ್ನದೇನೂ ತಪ್ಪಿಲ್ಲ, ರಂಜು. ಆಗ ನೀನಿನ್ನೂ ಅರಿಯದ ಮಗು. ಇದರಿಂದ ನಿನ್ನ ಉಜ್ವಲ ಭವಿಷ್ಯ ಹಾಳುಮಾಡಿಕೋಬೇಡ. ಇನ್ನೂ ನಿನ್ನನ್ನು ನೋಯಿಸಿದ ಆ ಕ್ರೂರ ಪಿಶಾಚಿಯ ಬಾಳು ಸರ್ವನಾಶವಾಗಬೇಕು. ನೋಡು, ನಿನ್ನನ್ನು ನಾನು ಒಳ್ಳೆಯ ಥೆರಪಿಸ್ಟ್ ಬಳಿ ಕರೆದೊಯ್ಯುತ್ತೇನೆ. ಅವರ ಜೊತೆ ಮನಸ್ಸು ಬಿಚ್ಚಿ ಮಾತನಾಡು. ಮುಂದೆ ನಿನಗೇ ಸರಿಯಾದ ದಾರಿ ಕಾಣಿಸುತ್ತೆ. ಎಲ್ಲಿ, ಈಗ ಒಂದು ಸ್ಮೈಲ್ ಕೊಡು. ನನಗಾಗಿ ಅಲ್ಲದಿದ್ದರೂ ಇತ್ತ ಬರುತ್ತಿರುವ ನಿನ್ನ ರಾಜಕುಮಾರನಿಗಾದರೂ ಕೊಡಬಾರದೆ?"

ತಂಗಿ ತೋರಿದ ಕಡೆ ತಿರುಗಿದ ರಂಜಿನಿಗೆ ದೂರದಲ್ಲಿ ಸುದೀಪ್ ನಡೆದು ಬರುತ್ತಿರುವುದು ಕಾಣಿಸಿತು. ಎತ್ತರದ ಆಕರ್ಷಕ ನಿಲುವು, ಗಂಭೀರ ನಡೆ, ಸದಾ ತನ್ನನ್ನು ಗೆಲ್ಲುವ ಹಸನ್ಮುಖ. ಅವನನ್ನು ನೋಡುತ್ತಲೂ ತನ್ನ ಸುತ್ತಲಿನ ವಾತಾವರಣ ತಂಪಾದಂತೆನಿಸಿ ರಂಜಿನಿ ಕೈ ಬೀಸಿ ಅವನನ್ನು ಹತ್ತಿರಕ್ಕೆ ಕರೆದಳು.

◈



# ಎರಡು ಮನಸ್ಸು (ಮುಕ್ತಾಯ-೪)

ಹಾರ ಹಾಕಿದ್ದ ಆ ಚಿತ್ರವನ್ನು ನೋಡಿ ಶಾಮಸುಂದರರು, "ಇವರು...." ಎಂದು ಅವಳ ಮುಖ ನೋಡಿದರು. "ಅವರು ನನ್ನ ಹೆತ್ತ ತಾಯಿ, ನನಗೆ ವರ್ಷವಾಗಿದ್ದಾಗ ತೀರಿ ಹೋದರು," ಎಂದಿಷ್ಟೇ ಹೇಳಿದಳು. "ಓ!" ಎಂದರು ಶಾಮಸುಂದರರು. ಏನೋ ಹೊಳೆದವರಂತೆ ಇನ್ನು ಹೆಚ್ಚು ಮಾತನಾಡದೆ ನಗುಮುಖದಿಂದ ಎಲ್ಲರನ್ನೂ ಬೀಳ್ಕೊಟ್ಟು ಹೊರಟುಬಿಟ್ಟರು. ಮಾನಸಿಕ ತಜ್ಞರಾಗಿದ್ದ ಅವರು ಎಲ್ಲವನ್ನೂ ಒಮ್ಮೆ ಅವಲೋಕಿಸಿಕೊಂಡರು. ಆಸ್ಪತ್ರೆಯಲ್ಲಿ ಅವಳು, "ಕೇಶವ್, ನನ್ನ ಬಿಟ್ಟು ಹೋಗಬೇಡ, ನಾನು ನಿನ್ನನ್ನು ಪ್ರೀತಿಸುತ್ತೇನೆ," ಎಂದು ಬಡಬಡಾಯಿಸುತ್ತಿದುದು, ಮನೆಯಲ್ಲಿ ಮಲತಾಯಿ ತನ್ನ ಮಕ್ಕಳಾದ ಸುದು ಮತ್ತು ದೀಪುವನ್ನು ಯಾವಾಗಲೂ ವಹಿಸಿಕೊಂಡು ಇವಳನ್ನು ಕಡೆಗಾಣಿಸುವುದು, ಹಲವು ಬಾರಿ ಸುದೀಪನನ್ನು ಇವಳು ಸಹಿಸಲಾರದೆ ಹೋಗಿದ್ದುದು ಎಲ್ಲ ಒಟ್ಟಿಗೆ ಸೇರಿಸಿಕೊಂಡಾಗ ಅವರಿಗೆ ಅವಳ ಸಮಸ್ಯೆ ಸರಿಯಾಗಿ ಅರ್ಥವಾಯಿತು.

"ಕೇಶವ್ ಭಾರದ್ವಾಜ್, ನಿನ್ನ ತೊಂದರೆ ಎಲ್ಲ ಕಳೆಯಿತು. ರಂಜಿನಿ ಕನಸುಮನಸಿನಲ್ಲೂ ನಿನ್ನನ್ನೇ ಇಟ್ಟುಕೊಂಡಿದ್ದಾಳೆ. ಮದುವೆಗೆ ಎಲ್ಲಾ ತಯಾರಿ ಮಾಡಿಕೊ," ಎಂದರು ಶಾಮಸುಂದರ್. "ಇದೇನು ಚಿಕ್ಕಪ್ಪ, ಇದ್ದಕ್ಕಿದ್ದಂತೆ ನೀವೂ ಈ ರೀತಿ ಹೇಳಲು ಶುರುಮಾಡಿದಿರಿ, ರಂಜಿನಿ ಹೇಳಿಕೊಟ್ಟಳೋ?" ಎಂದು ಸುದೀಪ ಕೇಳಿದ. "ಯಾಕೆ?" ಎಂದರು ಶಾಮಸುಂದರ್. "ಅವಳಿಗೆ ಪ್ರೀತಿಯಿಂದ ಸುದೀಪ್ ಎಂದು ಕರಿ ಎಂದರೆ ಒಪ್ಪುವುದೇ ಇಲ್ಲ, ಡಾ. ಕೇಶವ್ ಎಂದೇ ಹೇಳುತ್ತಾಳೆ, ಮದುವೆ ಆದ ಮೇಲೂ ಹಾಗೇ ಫಾರ್ಮಲ್ ಆಗಿ ಕರೆಯುತ್ತಾಳೋ ಏನೋ," ಎಂದು ನಕ್ಕ. ಶಾಮಸುಂದರರಿಗೆ ಈಗ ತಾವು ಅಂದುಕೊಂಡಿದ್ದು ಸರಿ ಎಂದು ಖಾತ್ರಿಯಾಯಿತು. "ಸಂಜೆ ರಾಗಿಗುಡ್ಡದ ದೇವಸ್ಥಾನಕ್ಕೆ ಚಿಕ್ಕಪ್ಪನ ಜೊತೆ ಹೋಗೋಣ ಎಂದು ರಂಜಿನಿಗೆ ಹೇಳು," ಎಂದರು. ಇವನು ಇತ್ತ ಫೋನೆತ್ತುತ್ತಿದ್ದಂತೆ ಅವರು ಒಳಗೆ ಹೋಗಿ ಇನ್ನೊಂದು ರಿಸೀವರ್ ತೆಗೆದುಕೊಂಡರು. ಆ ಕಡೆ ರಂಜಿನಿಯೇ ಫೋನ್ ತೆಗೆದುಕೊಂಡಳು. "ಸುದೀಪ್ ಇಲ್ಲಿ, ರಂಜು. ಇಂದು ಸಂಜೆ ಚಿಕ್ಕಪ್ಪ ನಮ್ಮಿಬ್ಬರನ್ನೂ ರಾಗಿಗುಡ್ಡಕ್ಕೆ ಹೋಗೋಣ ಎಂದು ಕರೆದಿದ್ದಾರೆ," ಎಂದ. "ನಿನ್ನೊಡನೆ ನಾನು ಎಲ್ಲೂ ಬರುವುದಿಲ್ಲ ನೀನೊಬ್ಬ ಮೋಸಗಾರ," ಎಂದು ಹೇಳಿ ಫೋನ್ ಇಟ್ಟುಬಿಟ್ಟಳು ರಂಜಿನಿ. ಸುದೀಪನಿಗೆ ಬಹಳ ನಿರಾಸೆಯಾಯಿತು. ಈಗ ತಾನೆ ಚಿಕ್ಕಪ್ಪ ಪ್ರಾಣ ಇಟ್ಟುಕೊಂಡಿದ್ದಾಳೆ ಎಂದು ಸುಮ್ಮಸುಮ್ಮನೆ ಹೇಳಿದರು ಎಂದು ಅವರ ಮೇಲೂ ಕೋಪ ಬಂದಿತು. ಇವನ ಕೋಪವನ್ನು ಅರಿತ ಶಾಮಸುಂದರರು ಅವನನ್ನು ಸಮಾಧಾನ ಪಡಿಸುತ್ತಾ, ತಾವು ಫೋನ್ ತೆಗೆದುಕೊಂಡು ಅವನಿಗೆ ಒಳಗೆ ತೆಗೆದುಕೊಳ್ಳಲು ಹೇಳಿದರು. "ರಂಜಿನಿ, ನಾನಮ್ಮ ಶಾಮಸುಂದರ ಮಾತಾಡುತ್ತಿರುವುದು. ಇಂದು ಸಂಜೆ ನಾನು ಮತ್ತು ಕೇಶವ್ ನಿಮ್ಮ ಮನೆಗೆ ಬರುತ್ತೇವೆ, ಒಟ್ಟಿಗೆ ರಾಗಿಗುಡ್ಡಕ್ಕೆ ಹೋಗೋಣವೇ?" ಎಂದರು. "ಸರಿ ಚಿಕ್ಕಪ್ಪ, ಕೇಶವ್ ಜೊತೆ ಮತ್ತು ನಿಮ್ಮ ಜೊತೆ ಹೋಗುವ ಅವಕಾಶ ಬಿಡುತ್ತೀನಾ, ಖಂಡಿತ ತಯಾರಾಗಿರುತ್ತೇನೆ ಬನ್ನಿ," ಎಂದು ಹೇಳಿ ರಂಜಿನಿ ಫೋನ್ ಇಟ್ಟಳು. ಸುದೀಪನಿಗೆ ಸಿಕ್ಕಾಪಟ್ಟೆ ಕೋಪ ಬಂದಿತು. "ಇವಳು ಎಷ್ಟು ನಾಟಕ ಮಾಡುತ್ತಾಳೆ ನೋಡಿ, ಇಂತಹವಳನ್ನು ನಾನು ಕಟ್ಟಿಕೊಳ್ಳುವುದಿಲ್ಲ," ಎಂದುಬಿಟ್ಟ. "ಸುಮ್ಮನೆ ನಡಿ. ಸಂಜೆ ಹೇಳುತ್ತೀನಿ," ಎಂದರು ಚಿಕ್ಕಪ್ಪ. ಸಂಜೆ ಮೂವರೂ ದೇವಸ್ಥಾನಕ್ಕೆ ಹೋಗಿ ಆಂಜನೇಯಸ್ವಾಮಿಗೆ ಅರ್ಚನೆ ಮಾಡಿಸಿ ನಂತರ ಒಂದು ತಂಪಾದ ಗಲಾಟೆ ಇಲ್ಲದ ಜಾಗಕ್ಕೆ ಹೋಗಿ ಕುಳಿತರು. "ಸುದು ಮತ್ತು ದೀಪು ಹೇಗಮ್ಮ ರಂಜಿನಿ? ಸುದುವನ್ನು ನನ್ನ ಮಗನಿಗೆ ಕೊಡುವುದಾಗಿ ನಿನ್ನ ಚಿಕ್ಕಮ್ಮ ಹೇಳುತ್ತಿದ್ದರು. ಮಾಡಿಕೊಳ್ಳಬಹುದಾ ನಿನ್ನ ತಂಗಿಯನ್ನು?" ಎಂದು ಶಾಮಸುಂದರರು ಕೇಳಿದಾಗ, "ಆ ರಾಕ್ಷಸಿಯನ್ನು ಮಾಡಿಕೊಂಡರೆ ನೀವು ನಿಮ್ಮ ಮಗನನ್ನು ಶಾಶ್ವತವಾಗಿ ಮರೆತುಬಿಡಬೇಕು ಅಷ್ಟೇ. ಸುದು ಮತ್ತು ದೀಪು ಚಿಕ್ಕ ವಯಸ್ಸಿನಿಂದ ನನ್ನನ್ನು ಬಹಳ ಗೋಳು ಹೊಯಿದುಕೊಂಡಿದ್ದಾರೆ. ಚಿಕ್ಕಮ್ಮ ಯಾವಾಗಲೂ ಅವರ ಪರ. ಆ ಹೆಸರು ಕೇಳಿದರೆ ರೇಗಿ ಹೋಗುತ್ತೆ ನನಗೆ," ಎಂದಳು. "ಸರಿ ಬಿಡು. ಆದರೆ ನಿನಗೆ ನಮ್ಮ ಕೇಶವನ ಕೈಹಿಡಿಯಲು ಇಷ್ಟ ತಾನೇ?" ಎಂದಾಗ ರಂಜಿನಿಯ ಮುಖದಲ್ಲಿ ರಂಗೇರಿತು. "ನಾನು ಏಳೇಳು ಜನ್ಮಕ್ಕೂ ಕೇಶವನನ್ನೇ ಗಂಡನಾಗಿ ಪಡೆಯಬೇಕೆಂದು ಬೇಡಿಕೊಳ್ಳುತ್ತೇನೆ," ಎಂದಳು. "ನಮ್ಮ ಕೇಶವ್ ಸುದೀಪ್ ಭಾರದ್ವಾಜ್ ಮನೆಯವರಿಗೆಲ್ಲಾ ಕೇಶವನೇ. ಸ್ನೇಹಿತರು ಸುದೀಪ್ ಎಂದು ಕರೆಯುವುದುಂಟು, ನಿನಗೆ ಯಾವುದಿಷ್ಟ?" ಎಂದು ಶಾಮಸುಂದರರು ಕೇಳಿದಕ್ಕೆ, "ನಾನು ಕೇಶವ್ ಎಂದೇ ಕರೆಯುವುದು," ಎಂದು ಸ್ವಲ್ಪ ನಿಷ್ಠುರವಾಗೇ ಹೇಳಿದಳು. "ಹಾಗಿದ್ದಲ್ಲಿ ಈ ಮೂರನೇ ಹೆಸರೇ ಬೇಡ. ಇನ್ನು ಮೇಲೆ ಅವನು ಡಾ. ಕೇಶವ್ ಭಾರದ್ವಾಜ್ ಆಗಿಬಿಡಲಿ," ಎಂದು ಶಾಮಸುಂದರರು ಹಗುರವಾಗಿ ಹೇಳಿದಾಗ ರಂಜಿನಿಯ ಕಣ್ಣಲ್ಲಿ ಹೊಳಪು ಕಂಡಿತು. ಮೂವರೂ ಸ್ವಲ್ಪ ಹೊತ್ತು ಅದೂ-ಇದೂ ಹರಟುತ್ತ ಮನೆಯ ಕಡೆ ಹೊರಟರು. ರಂಜಿನಿಯನ್ನು ಅವರ ಮನೆಯಲ್ಲಿ ಬಿಟ್ಟು ಇವರಿಬ್ಬರೂ ಮುಂದೆ ಹೊರಟರು.

ಸುದೀಪನನ್ನು ಕುರಿತು, "ನೋಡಿದೆಯಾ ಮರೀ, ಚಿಕ್ಕ ವಯಸ್ಸಿನಲ್ಲಿ ಸುದು-ದೀಪು ಎಂಬ ಹೆಸರಿನವರು ಅವಳ ಮನಸ್ಸಿಗೆ ಹಿಂಸೆ ಕೊಟ್ಟಿರುವ ಕಾರಣ ವೀಕ್ ಆಗಿರುವ ಅವಳ ಮನಸ್ಸಿಗೆ ಆ ಹೆಸರಿನ ಮೇಲೆ ದ್ವೇಷ ಬಂದಿದೆ. ಆದ್ದರಿಂದ ನೀನು ಸುದೀಪ್ ಎಂಬ ಹೆಸರು ಉಪಯೋಗಿಸಿದರೆ ಅವಳು ನಿನ್ನನ್ನು ದ್ವೇಷಿಸುತ್ತಾಳೆ. ಸದ್ಯಕ್ಕೆ ಆ ಹೆಸರನ್ನು ಬಿಟ್ಟು ಬಿಡು. ಕ್ರಮೇಣ ನಿನ್ನ ಪ್ರೀತಿಯಿಂದ ಅವಳ ಮನಸ್ಸಿನ ಭಯ ಹೋಗಿ ಅವಳು ಹಳೆ ವಿಷಯಗಳನ್ನೆಲ್ಲ ಮರೆತು ಬಿಡುತ್ತಾಳೆ. ಅಷ್ಟರಲ್ಲೇ ಸರಿಹೋಗದಿದ್ದಲ್ಲಿ ಬೇರೆ ಚಿಕಿತ್ಸೆಯೂ ಇದೆ. ನೋಡೋಣ," ಎಂದರು ಶಾಮಸುಂದರರು. ಈಗ ಸುದೀಪನಿಗೆ (ಅಲ್ಲ, ಕೇಶವನಿಗೆ) ಅವಳ ಮೇಲೆ ಪ್ರೀತಿಯ ಜೊತೆ ಕರುಣೆ ಕೂಡ ಹುಟ್ಟಿತು. "ಚಿಕ್ಕಪ್ಪ, ನನ್ನ ರಂಜಿನಿಯನ್ನು ನಾನು ಚೆನ್ನಾಗಿ ನೋಡಿಕೊಳ್ಳುತ್ತೇನೆ. ಅವಳಿಗೆ ಇಷ್ಟವಿಲ್ಲದ ಹೆಸರು ನನಗೆ ಬೇಡವೇ ಬೇಡ ಬಿಡಿ," ಎಂದು ಕೇಶವ್ ನೆಮ್ಮದಿಯಿಂದ ಚಿಕ್ಕಪ್ಪನನ್ನು ನೋಡಿದ.

◈

*ಮೊದಲ ಭಾಗದ ಕಥೆಗಾರ್ತಿಯಾದ ಪೂರ್ಣಿಮಾರ ಹಾಗೂ ಡಾ. ರವಿ ಗೋಪಾಲ ರಾವ್ ಅವರ ಕಥಾಂತ್ಯವು ಹೆಚ್ಚು ಕಡಿಮೆ ಒಂದೇ ರೀತಿಯದಾಗಿರುವುದು ತೀರ ಆಕಸ್ಮಿಕ. ಈ ಮೇಲಿನ ನಾಲ್ಕು ಕಥಾಂತ್ಯಗಳಲ್ಲಿ ನಿಮಗೆ ಯಾವುದು ಹಿಡಿಸಿತೆಂದು ನಮಗೆ ತಿಳಿಸಲು ಮರೆಯದಿರಿ.*

*- ಸ್ವರ್ಣಸೇತು*

◈




# Best wishes from Subbarao family

**Office Of Dr. Meena Subbarao**
640 E. Alvin Dr., Suite B-
Salinas, California  Zip-93906
831-444-6263
831-444-6168  (FAX)
me_na_AT_msn.com
www.Drsubbarao-peds.yourmd.com



# ಓದಿನ ಮೋಜು

*“ನೀನು ಇಂಜಿನಿಯರಾಗಿ ಬೇಗ ನಮ್ಮ ಹಳ್ಳಿಗೆ ಬಂದು ಬಿಡಬೇಕು, ನಮ್ಮ ಹಳ್ಳಿಯ ಕೆರೆ, ನಾಲೆ ನಿನಗಾಗಿ ಕಾಯ್ಕೊಂಡಿವೆ. ನಿನ್ನ ಬರುವಿಗಾಗಿ ಇಡೀ ಹಳ್ಳಿಯೇ ಕಾದೈತೆ. ನೀನು ದೊಡ್ಡ ಇಂಜನಿಯರಾಗಿ ನಮ್ಮ ಹಳ್ಳಿಗೆ ದೊಡ್ಡ ಹೆಸರು ತರಬೇಕು.”*

**ಜಿ. ಉದಯ ಶಂಕರ್**
ಸರಟೋಗ, ಕ್ಯಾಲಿಫೋರ್ನಿಯ, *udayakavi_AT_yahoo.com*

ಮೇಲಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಎರಡು ಮೂರು ಸಾರಿ ಹುಡುಕಿದ್ದಾಯ್ತು. ಏಕೋ, ಇನ್ನೂ ಹುಡುಕುವ ಆಸೆ ನಂಬರಿಗಾಗಿ, ರಿಸಲ್ಟ್ ಲಿಸ್ಟಿನಲ್ಲಿ. ಅಷ್ಟರಲ್ಲಿ ಹಿಂದಿನಿಂದ ನನ್ನನ್ನು ರಮೇಶ ಕೂಗಿದಂತಾಯ್ತು. “ಏನೋ, ಹುಡುಕಾಡುತ್ತಿದ್ದೀಯಾ? ನಿನ್ನ ನಂಬರ್ ಪ್ರಿಂಟ್ ಆಗಿಲ್ಲ ಕಣೋ” ಎಂದದ್ದನ್ನು ಕೇಳಿ ಸೂಟು ಬೂಟು ಧರಿಸಿ ದಾರಿಯ ಪಕ್ಕದ ಕೊಳಚೆಯ ಚರಂಡಿಯಲ್ಲಿ ಬಿದ್ದಂತಾಯಿತು.

ಸ್ನೇಹಿತರ ಗುಂಪನ್ನು ಕೂಡಿದಾಗ ಮುಖದಲ್ಲಿ ಹೊಸದಾಗಿ ಮೂಡಿದ್ದ ಮಬ್ಬಾದ ಗೆರೆಗಳು ತಾವಾಗಿ ಕಾಣದಂತಾದವು. ಎಲ್ಲರೂ ಫಸ್ಟ್ ಕ್ಲಾಸಿನಲ್ಲಿ ಪಾಸಾದವರಂತೆ, ಬೇರೆಯವರ ಮೇಲೆ ಹಾಸ್ಯಾಸ್ಪದವಾಗಿ ಮಾತನಾಡಿಕೊಳ್ಳುತ್ತ, ಕೆಂಪೇಗೌಡ ಸರ್ಕಲ್ಲಿಗೆ ಬಂದೆವು. ನಮ್ಮ ಚುರುಕಾದ ಕಣ್ಣುಗಳು ನಮ್ಮಂತೆಯೇ ಹೊರಟ ಲಲನಾಮಣಿಯರ ತಂಡವನ್ನು ಕಂಡುಹಿಡಿದವು. ಕೇಳಬೇಕೆ ಇನ್ನು, ದಾರಿಕಾಣದವರ ಹಾಗೆ ನಡೆದವು ಅವರ ಹಿಂದೆ. ಹಿಂದೆ ಬರುತ್ತಿರುವ ನಮ್ಮನ್ನು ನೋಡಿ ಅವರಿಗೂ ನಿಧಾನವಾಗಿಯೇ ಸಾಗುವ ಆಸೆ! ಹಿಂದೆ ತಿರುಗುತ್ತ, ಸನ್ನೆ ಮಾಡುತ್ತ ’ಕಲ್ಪನಾ’ ಚಿತ್ರಮಂದಿರಕ್ಕೆ ನುಗ್ಗಿತು ಆ ತಂಡ. ಅವರ ಹಿಂದೆಯೇ ಸಾಗಿದ್ದ ನಾವೂ ಸಹ ಅವರ ಹಿಂದೆಯೇ ಕ್ಯೂನಲ್ಲಿ ನಿಂತೆವು. ಚಿತ್ರಮಂದಿರದ ಒಳಗೂ, ಅವರ ಹಿಂದಿನ ಸಾಲಿನಲ್ಲೇ ನಮ್ಮ ಠಿಕಾಣಿ.

ಪಿಕ್ಚರ್ ಶುರುವಾದರೂ ಆ ಲಲನಾಮಣಿಯರು ಹಿಂದಕ್ಕೆ ತಿರುಗಿತಿರುಗಿ ನಗುತ್ತಿದ್ದರು. ಪಿಕ್ಚರಿನಲ್ಲಿ ‘ರೋಮ್ಯಾಂಟಿಕ್ ಸೀನ್’ ಬಂದಾಗಲಂತೂ ಅವರು ಜೋರಾಗಿ ನಗುವುದಕ್ಕೆ ನಾವೆಲ್ಲ ಮರುನಕ್ಕು ಪ್ರತಿಕ್ರಿಯೆ ತೋರಿಸುತಿದ್ದೆವು. ಚಕಿತಗೊಳಿಸುವ ಸನ್ನಿವೇಶಗಳು ಬಂದಾಗ, ನಮ್ಮ ಆ ಲಲನಾಮಣಿಯರು ಆಶ್ಚರ್ಯಗೊಂಡಿರಬೇಕೆಂದುಕೊಂಡು ಅವೆಲ್ಲ ಕೇವಲವಾದವುಗಳೆಂಬಂತೆ, ಏನೂ ತಿಳಿದಿಲ್ಲದಿದ್ದರೂ ಊಹಿಸಿಕೊಳ್ಳುತ್ತ, ಮುಂಬರುವ ಸನ್ನಿವೇಶಗಳನ್ನು ಗಟ್ಟಿಯಾಗಿ ವಿವರಿಸುತ್ತ, ಗುದ್ದಾಟಗಳು ಬಂದಾಗ, ನಮ್ಮ ನಮ್ಮ ಹೀರೋಗಳಿಗೆ, ಹೀರೋಯಿನ್‌ಗಳಿಗೆ ನಾವು ಕೂತಲ್ಲಿಂದಲೇ ಮುಂದೆ ಬಾಗಿ ಬಾಗಿ, ಕೂಗಾಡಿ, ಅವರ ಗುದ್ದಾಟದಲ್ಲಿ ಸಹಾಯ ಮಾಡುವವರಂತೆ ಪ್ರತಿಕ್ರಿಯೆ ತೋರಿಸುತ್ತಿದ್ದೆವು. ಅಂತೂ ಅಂದು ಪಿಕ್ಚರ್ ನೋಡಿದ ಜ್ಞಾಪಕವೇ ಇಲ್ಲ. ಹೊರಬರುವಷ್ಟರಲ್ಲಿ ಆ ತಂಡ ಹಳೆಯದಾಗಿತ್ತು.

ಆ ಸಾರಿ ಎರಡೇ ಸಬ್ಜೆಕ್ಟ್‌ನಲ್ಲಿ ಫೇಲ್ ಆಗಿ ‘ಗ್ರಾಂಡ್ ಸಕ್ಸಸ್’ ಆಗಿದ್ದ ರಮೇಶನನ್ನು ಬಹಳ ಪೀಡಿಸಿದ ಮೇಲೆ ವಿಷ್ಣು ಭವನಕ್ಕೆ ಕರೆದುಕೊಂಡು ಹೋದ. ನಮ್ಮನ್ನೇ ಹಿಂಬಾಲಿಸುತ್ತಿರುವವರಂತೆ ಆ ನಮ್ಮ ಹತ್ತಿರದ ಹಳೆಯ ಲಲನಾಮಣಿಗಳ ತಂಡ ಅದೇ ಹೋಟೆಲ್ಲಿಗೇ ನುಗ್ಗಬೇಕೆ? ಹಣವೇ ಇಲ್ಲವೆಂದು ನಟಿಸುತ್ತಿದ್ದ ರಮೇಶ, ಅವನ ಪ್ರಿಯವಾದ ಜಿಲೇಬಿಯನ್ನು ನಮ್ಮ ಮುಂದೆಯೇ ಕುಳಿತಿದ್ದ ಆ ನಮ್ಮ ಹೊಸ ಸ್ನೇಹಿತರಿಗೂ ಆರ್ಡರ್ ಮಾಡಿದ. ಅದಾದ ಮೇಲೆ ಖಾರ ಮತ್ತು ಕಾಫಿ ಬಂತು. ನಾವಿನ್ನೂ ಜಿಲೇಬಿಯನ್ನು ತಿನ್ನುತ್ತಿರುವಂತೆಯೇ ಅವರು ಕಾಫಿಯನ್ನೂ ಕುಡಿದು ಠೀಕಾಗಿ ಕೈಬೀಸಿಕೊಂಡು ಎದ್ದು ಹೊರಡುವುದೇ? ಎಲ್ಲಾರಿಗೂ ಬಾಯಿಗಿಟ್ಟುಕೊಂಡ ಕಾಫಿ ಸಪ್ಪೆಯೆನಿಸಿತು. ಕೂಡಲೇ ಹೊಳೆಯಿತು ನಾವು ಜಿಲೇಬಿಯನ್ನು ತಿಂದು, ಖಾರ ತಿಂದಿಲ್ಲವೆಂದು! ಅಷ್ಟರಲ್ಲೇ ಎರಡರಷ್ಟು ಬಿಲ್ ಬಂದಾಗ ರಮೇಶನ ಮುಖ ಸತ್ತವನ ಮುಖವಾಗಿತ್ತು.

ಹಾಗೆಯೇ ಇನ್ನೂ ಸ್ವಲ್ಪ ಹೊತ್ತು ತಿರುಗಾಡಿ ಹಾಸ್ಟೆಲ್ಲಿಗೆ ಬರುವಷ್ಟರಲ್ಲಿ ರಾತ್ರಿ ಒಂಭತ್ತಾಗಿತ್ತು. ರೂಮಿಗೆ ಬಂದು ಹಾಸಿಗೆಗೆ ಒರಗಿದೆ. ಪಕ್ಕದ ಮೇಜಿನ ಮೇಲೆ ಅಪ್ಪನ ಕಾಗದ ಕಂಡಿತು! ಸ್ವಲ್ಪ ದಿನಗಳ ಹಿಂದೆ ತಾನು ಊರಿಂದ ಹೊರಟಾಗ ಅಪ್ಪ ಅಂದಿದ್ದ ಮಾತುಗಳು ನೆನಪಾದವು - “ಮಗಾ ಈ ವರ್ಸನಾದ್ರು ಓದಿದ್ ಮುಗ್ಸಿ ಬಂದ್ಬಿಡು; ನನ್‌ಕೈನಾಗು ಇನ್ನಾಗಾಕಿಲ್ಲ” ಎಂದದ್ದು ನೆನಪಾಯ್ತು. ಮತ್ತೆ, “ನಮ್ಹಳ್ಳಿಯ ನಾಲೆಗೆ ನೀನೆ ಇಂಜನಿಯರಾಗಿ ಅಣೆಕಟ್ಟು ಕಟ್ಟಬೇಕಪ್ಪ, ನಮ್ಮ ಹಳ್ಳಿ ಕೆರೆ ಕಟ್ಟೀನ ಇನ್ನೂ ಎತ್ತರ ಮಾಡಬೇಕು.” ಎಂದಾಗ ನಾನು ನಕ್ಕು “ಅವೆಲ್ಲ ಮಾಡಿಸೋಕೆ ಸರಕಾರದೋರಿದಾರೆ. ಅದೂ ಅಲ್ಲದೆ ನಾನು ಓದ್ತಿರೋದು ಎಲೆಕ್ಟ್ರಾನಿಕ್ಸ್. ಅದನ್ನೆಲ್ಲಾ ಮಾಡಿಸಬೇಕಾದೋರು ಸಿವಿಲ್ ಇಂಜನಿಯರುಗಳು” ಎಂದು ಅಂದದ್ದು ನೆನಪಾಯ್ತು. ಅಷ್ಟೊಂದು ಓದಿನ ಬಗ್ಗೆ ತಿಳುವಳಿಕೆ ಇಲ್ಲದೆ ಆ ಹಳ್ಳಿಗಾಡಿನಲ್ಲಿ ಬೆಳೆದವರಿಗೆ ಇವೆಲ್ಲ ಹೇಗೆ ತಿಳಿದಿರುತ್ತೆ ಎಂದು ನನ್ನೊಳಗೇ ನಕ್ಕೆ. “ನೀನ್ಯಾಕೆ ಯೋಚ್ನೆ ಮಾಡ್ತೀಯ? ಈ ಸಾರ್ತಿ ರಿಸಲ್ಟ್ ಬಂದ ಮೇಲೆ ಕಾಲೇಜಿಗೇ ಹೋಗುವಾಗಿಲ್ಲ!” ಎಂದು ಹೇಳಿ ಇನ್ನೂರು ರೂಪಾಯಿಗಳನ್ನು ತೆಗೆದುಕೊಂಡು ಬಂದದ್ದು ಕಣ್ಣ ಮುಂದೆ ಬಂತು.

ಪತ್ರವನ್ನೊಡೆಯಲು ಒಡೆದಂತಾಯ್ತು ಹೃದಯ! ಮೊದಲ ಸಾಲುಗಳಲ್ಲಿ ಕಂಡದ್ದು ಅಮ್ಮನಿಗೆ ಹುಷಾರಿಲ್ಲ, ನೀನು ಕೂಡಲೇ ಹೊರಟು ಬಾ.....

“ನೀನು ಇಂಜನಿಯರಾಗಿ ಬೇಗ ನಮ್ಮ ಹಳ್ಳಿಗೆ ಬಂದು ಬಿಡಬೇಕು, ನಮ್ಮ ಹಳ್ಳಿಯ ಕೆರೆ, ನಾಲೆ ನಿನಗಾಗಿ ಕಾಯ್ಕೊಂಡಿವೆ. ನಿನ್ನ ಬರುವಿಗಾಗಿ ಇಡೀ ಹಳ್ಳಿಯೇ ಕಾದೈತೆ. ನೀನು ದೊಡ್ಡ ಇಂಜನಿಯರಾಗಿ ನಮ್ಮ ಹಳ್ಳಿಗೆ ದೊಡ್ಡ ಹೆಸರು ತರಬೇಕು. ನಿನ್ನೆಯೋ ಮೊನ್ನೆಯೋ ಬಂದಿರುವ ಪರೀಕ್ಷೆ ಫಲಿತಾಂಶದಲ್ಲಿ ಫಸ್ಟ್‌ಕ್ಲಾಸ್ನಲ್ಲಿ ಪಾಸಾಗಿರುವ ಭರವಸೆ ನನಗಿದೆ.... . ನನಗೆ ವಯಸ್ಸಾಯ್ತು, ನಿಮ್ಮವ್ವನಿಗೆ ಹುಷಾರಿಲ್ಲ, ಬೇಗ ಹೊರಟು ಬಾ....” ಎಂದೆಲ್ಲಾ ಇತ್ತು.

ಕಾಗದವನ್ನು ಓದಿ ಏನೂ ಹೊಳೆಯದೆ, ಏನೂ ತೋಚದಂತಾಯಿತು. ಓದುತ್ತ ಯಾವುದೋ ತಪ್ಪು ಮಾಡಿದಂತಾಯಿತು ಎಂದುಕೊಂಡೆ. ಸುತ್ತಿಸುತ್ತಿ ಸುಸ್ತಾದ ಕಾಲುಗಳು ಪದ ಹೇಳುತ್ತಿದ್ದವು. ಹಾಗೆಯೇ ದಿಂಬಿಗೆ ಒರಗಿದೆ. ಎದುರಿನ ಆ ಐದಾರು ಅರೆನಗ್ನ ಫೋಟೋಗಳಲ್ಲೂ ಯಾವುದೋ ಸವಿನೆನಪು. ಕಿಟಕಿಯ ಹೊರಗೆ ಕಣ್ಣಾಡಿಸಿದಾಗ ತರತರದ ಮಿಂಚು ಹಾರಿತ್ತು ಮನದಲ್ಲಿ.

ಹಾಗೆಯೇ ಕಣ್ಣು ಮುಚ್ಚಿದೆ. ರಂಗುರಂಗಾದ ರಮ್ಯವಾದ ಕನಸು...., ನಾನು-ಸರಸು ಕೈ-ಕೈ ಹಿಡಿದು ಕಾಲೇಜಿಗೆ ಬೆನ್ನು ಮಾಡಿ ಎದುರಿಗೆ ಬಣ್ಣಬಣ್ಣವಾಗಿ, ಎತ್ತರವಾಗಿ ಕಾಣುತಿದ್ದ ಕಟ್ಟಡಗಳ ಕಡೆಗೆ ಹೋಗುತ್ತಿದ್ದೆವು. ದೂರಕ್ಕೆ ಹೋಗುತ್ತಲೇ ಇದ್ದೆವು , ದೂರದ ರಸ್ತೆಯ ತಿರುವಿನವರೆಗೂ

◈


## ಚದರ ಮಕಾರ

ಕಪ್ಪಿನಿಯ*

ಕೊಟ್ಟಿರುವ ಸುಳಿವುಗಳಿಗೆ ಉತ್ತರ ಎರಡು ಮಕಾರಗಳಿಂದ ಪ್ರಾರಂಭವಾಗುವ ಒಂದು ಪದಪುಂಜ.

ಉದಾಹರಣೆ: ಕುವೆಂಪು ಅವರ ಕಾದಂಬರಿ - **ಮ**ಲೆಗಳಲ್ಲಿ **ಮ**ದುಮಗಳು

೧. ರೈತ?
೨. ಸ್ವಾತಂತ್ರ್ಯ ಹೋರಾಟಗಾರ
೩. ಕೋಗಿಲೆಯ ತಾಣ
೪. ಕೆ. ಎಸ್. ನರಸಿಂಹಸ್ವಾಮಿಯವರ ...
೫. ಹೆಂಡತಿ
೬. ಕರ್ನಾಟಕ ಸಂಗೀತಗಾರ
೭. ಹೆಂಡತಿಯಾಗುವುದಕ್ಕೆ ಮುಂಚೆ?



*ಕಪಿನಯ್ಯ ಅಲ್ಲ

**ಉತ್ತರಗಳು:**

೧. ಮಣ್ಣಿನ ಮಗ
೨. ಮದನಮೋಹನ ಮಾಳವೀಯ
೩. ಮಾವಿನ ಮರ
೪. ಮೈಸೂರು ಮಲ್ಲಿಗೆ
೫. ಮಾವನ ಮಗಳು
೬. ಮದುರೆ ಮಣಿ
೭. ಮದುಮಗಳು



# ಮಹಾತಾಯಿ

**ವೀಣಾ ಗೌಡ**

ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ, vshivaraj_AT_hotmail.com

*ನಾನು ಏನಾದರೂ ಹೇಳಬೇಕು ಅನ್ನುವಷ್ಟರಲ್ಲಿ ಆ ಪುಟ್ಟ ಸೆಲ್ವಿ ಓಡಿ ಬಂದು ತನ್ನ ಅಮ್ಮನ ಕೊರಳಿಗೆ ತೆಕ್ಕೆ ಬಿದ್ದು, ಒಂದು ಮುತ್ತು ಕೊಟ್ಟು, ಹೊನಗೆ ಮಿಂಚಿಸಿ ಮಾಯವಾಯ್ತು. ಆಗ ಆ ತಾಯಿಯ ಮುಖದಲ್ಲಿ ತುಳುಕಿದ ಸಂತೋಷ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ.*

ಸುಮಾರು ನಾಲ್ಕು ವರ್ಷಗಳ ಹಿಂದೆ ನನ್ನ ಮಕ್ಕಳಿಬ್ಬರ ಜೊತೆ ಬೇಸಿಗೆ ರಜೆ ಕಳೆಯಲು ಬೆಂಗಳೂರಿಗೆ ಹೋಗಿದ್ದೆ. ಬೆಂಗಳೂರಿನ ಅಜ್ಜಿ ಮನೆಯಲ್ಲಿ ಟಿ. ವಿ. ನೋಡಿ ನೋಡಿ ಬೇಸತ್ತ ಮಕ್ಕಳು "ಇಂಡಿಯಾ ಈಸ್ ಬೋರಿಂಗ್," ಎಂಬ ಮಾಮೂಲಿ ರಾಗ ಶುರು ಮಾಡಿದರು. ನನಗೂ ಒಂದು ಚೇಂಜ್ ಬೇಕೆನಿಸಿ, ನಮ್ಮ ಹಳ್ಳಿ, ಕೊಪ್ಪಲಿಗೆ ಹೋಗುವುದೆಂದು ತೀರ್ಮಾನಿಸಿದೆವು.

ಇಲ್ಲಿ ನಮ್ಮೂರು ಕೊಪ್ಪಲಿನ ಬಗ್ಗೆ ಹೇಳಲೇಬೇಕು. ಮೈಸೂರಿನ ಹತ್ತಿರದ ಪಾಂಡವಪುರದಿಂದ ಸ್ವಲ್ಪವೇ ದೂರದಲ್ಲಿ, ಇನ್ನೂ ಪಟ್ಟಣದ ಗಾಳಿ ಬಹಳಷ್ಟು ಬೀಸದೇ ಇರುವ ಒಂದು ಪುಟ್ಟ ಹಳ್ಳಿ ಈ ಕೊಪ್ಪಲು. ಊರಾಚೆ ತೋಟದ ಮಧ್ಯೆ ಇರುವ ನಮ್ಮ ವಿಶಾಲವಾದ ಮನೆಯ ಉಪ್ಪರಿಗೆಯ ಮೇಲೆ ನಿಂತರೆ ಕಣ್ಣಿಗೆ ಹಬ್ಬ. ಸುತ್ತಲೂ ಮೈಚಾಚಿ ನಿಂತಿರುವ ಹಚ್ಚನೆಯ ಹಸಿರಿನ ಭತ್ತದ ಗದ್ದೆ, ನಳನಳಿಸುವ ಕಬ್ಬು, ತೂಗಾಡುವ ತೆಂಗು, ಅಡಿಕೆ, ಭೂದೇವಿಯೇ ಹಸಿರು ಸೀರೆ ಹೊದ್ದಂತೆ...... ದೂರದಲ್ಲಿ ಕಾಣುವ ಕುಂತಿ ಬೆಟ್ಟ, ಅದರ ತಪ್ಪಲಿನಲ್ಲಿ ಮಲಗಿರುವ ಪುಟ್ಟ ಪುಟ್ಟ ಹಳ್ಳಿಗಳು, ಜಳಜಳನೆ ಹರಿಯುವ ನಾಲೆಯ ನೀರಿನ ಶಬ್ದ, ದೂರದಲ್ಲೆಲ್ಲೋ ಕೇಳಿಸುವ ಆಲೆಮನೆಯ ಕಿರ್ರ್ ಕಿರ್ರ್ ಸದ್ದು, ಗಾಳಿಯಲ್ಲಿ ತೇಲಿಬರುವ ಹಿತವಾದ ಎಳೆಬೆಲ್ಲದ ವಾಸನೆ. ವಾಹ್! ನೀವು ಕೊಪ್ಪಲಿನ ಸೊಬಗನ್ನು ಅನುಭವಿಸಿಯೇ ಸವಿಯಬೇಕು.

ನಾನು, ಮಕ್ಕಳು, ಅಂತೂ ಇಂತೂ ಕೊಪ್ಪಲಿಗೆ ಬಂದಿಳಿದಾಗ, ಪ್ರಯಾಣದ ಆಯಾಸವನ್ನೂ ಮರೆತ ಮಕ್ಕಳು, "ದಿಸ್ ಈಸ್ ಕೂಲ್, ಲೆಟ್ಸ್ ಸ್ಟೇ ಹಿಯರ್!" ಎಂದು ಒಳ್ಳೆ ಚಿಗರೆ ಮರಿಗಳಂತೆ ಕುಣಿದು ಕುಪ್ಪಳಿಸಿದರು. ಈ ಸುಂದರವಾದ ಪರಿಸರದಲ್ಲಿ ಮಕ್ಕಳಿಗೆ ಆಡಲು ಕೋಳಿಮರಿ, ಕುರಿಮರಿ, ಹಸು, ಕರು, ಎತ್ತಿನಗಾಡಿ! ಸಧ್ಯ, ಮಕ್ಕಳು ಹಳೇ ರಾಗ ಹಾಡದೆ ಖುಷಿಯಾಗಿದ್ದಾರಲ್ಲಾ ಅಂತ ನನಗೂ ಸಮಾಧಾನ. ಸದಾ ಕಾಲ ಹೊರಗಡೆ ಆಡುತ್ತಿದ್ದ ಮಕ್ಕಳ ಮೇಲೆ ಒಂದು ಕಣ್ಣಿಡಲು, ಅಲ್ಲೇ ಪಡಸಾಲೆಯ ಮೇಲೆ ಕುಳಿತಿರುತ್ತಿದ್ದ ನನಗೆ ಸುಧಾ, ಮಯೂರ ಹಾಗೂ ಅಡಿಕೆಲೆ ಕೇಳಿಕೊಂಡು ಮೆಲ್ಲಲು ಬರುತ್ತಿದ್ದ ಹಳ್ಳಿಯ ಮುದುಕಿಯರೇ ಸಂಗಾತಿಗಳು. ಜೊತೆಗೆ ನನ್ನ ಚಿಕ್ಕತ್ತೆ, ಮಾವನವರ ಆತಿಥ್ಯ, ಊಟೋಪಚಾರಗಳಲ್ಲಿ ಹೊತ್ತು ಹೋಗುತ್ತಿದ್ದುದೇ ಗೊತ್ತಾಗುತ್ತಿರಲಿಲ್ಲ.

ಆಗ ಕಬ್ಬಿನ ಕುಯ್ಲಿನ ಕಾಲ. ಸುಮಾರು ಆರಡಿ ಎತ್ತರದ ಒತ್ತಾಗಿ ಬೆಳೆದು ನಿಂತಿರುವ ಕಬ್ಬಿನ ಕುಯಿಲು ಬಹಳ ಕಷ್ಟದ ಕೆಲಸವೇ ಸರಿ. ಗದ್ದೆ ಒಳಗೆ ನುಗ್ಗಿ, ಹುಳಹುಪ್ಪಟೆಗಳ ಕೈಲಿ ಕಡಿಸಿಕೊಳ್ಳದೇ, ಹರಿತವಾದ ಎಲೆಗಳಿಂದ ಮೈಕೈ ತುರಿಸಿಕೊಳ್ಳದೇ, ಆ ಧಗೆಯಲ್ಲಿ ಕಬ್ಬನ್ನು ಹುಷಾರಾಗಿ ಕುಯ್ದು ಪೇರಿಸುವುದೆಂದರೆ ಒಂದು ಸಾಹಸವೇ ಸರಿ!

ಈ ಕೆಲಸ ಮಾಡಲು ಕೊಪ್ಪಲಿಗೆ ಬಂದಿಳಿಯಿತೊಂದು ಕೆಲಸಗಾರರ ತಂಡ. ವಿಚಾರಿಸಲಾಗಿ ಇವರು ತಮಿಳುನಾಡಿನಿಂದ ವಲಸೆ ಬಂದು, ವ್ಯವಹರಿಸುವಷ್ಟು ಕನ್ನಡ ಕಲಿತು, ಕುಯ್ಲಿನ ಕೆಲಸಕ್ಕಾಗಿ ಊರೂರು ತಿರುಗುವ ಅಲೆಮಾರಿಗಳೆಂದು. ಸುಮಾರು ಇಪ್ಪತ್ತು ಮಂದಿಯಿಂದ ಕೂಡಿದ ಈ ತಂಡ ಕೊಪ್ಪಲಿಗೆ ಬಂದಿಳಿದಾಗ ಮಧ್ಯಾಹ್ನದ ಸಮಯ. ಗಂಡಸರು, ಹೆಂಗಸರು, ಮಕ್ಕಳು ಮರಿಗಳು, ಜೊತೆಗೆ ನಾಲ್ಕೈದು ದೊಡ್ಡ ದೊಡ್ಡ ಗಂಟು ಮೂಟೆ ಬೇರೆ. ಬಂದೊಡನೆಯೇ ಕಾಲಹರಣ ಮಾಡದೆ ಹಿತ್ತಲಿನ ಬಳಿಯ ನೆಲವನ್ನು ಸಮಗೊಳಿಸಿ, ತೆಂಗಿನ ತೋಟದಲ್ಲಿ ಬಿದ್ದಿದ್ದ ರೆಕ್ಕೆಗಳನ್ನು ಆಯ್ದು ತಂದು, ಚಾಪೆ ಹೆಣೆದು, ಕಲ್ಲು ಮಣ್ಣು ಸೇರಿಸಿ, ನಾನು ನೋಡುನೋಡುತ್ತಿದ್ದಂತೆಯೇ ಕಟ್ಟೇಬಿಟ್ಟರು ನಾಲ್ಕು ಗುಡಿಸಲುಗಳನ್ನು ಆ ಗುಂಪಿನ ಗಂಡಸರು. ಹೆಂಗಸರು ನೆಲವನ್ನು ಸಗಣಿಯಲ್ಲಿ ಸಾರಿಸಿ ಶುದ್ಧ ಮಾಡಿದರು. ಗುಡಿಸಿಲಿನ ಹೊರಗೆ ನಾಲ್ಕು ಮಣ್ಣಿನ ಒಲೆಗಳನ್ನು ಕಟ್ಟಿಕೊಂಡರು. ಹೀಗೆ ತಯಾರಾಯ್ತು ಇವರ ಕ್ಯಾಂಪಿಂಗ್ ಸೈಟು!

ಏನೂ ಕೆಲಸ ಇಲ್ಲದೆ ರಿಲ್ಯಾಕ್ಸ್ ಮಾಡುತ್ತಿದ್ದ ನನಗೆ ಈ ತಂಡವನ್ನು ಗಮನಿಸುವುದೇ ಒಂದು ಸೋಜಿಗ. ನಸುಕಿನಲ್ಲೇ ಎದ್ದು ಗಂಜಿ ಕಾಯಿಸಿ, ಎಲ್ಲರೂ ಕುಡಿದು, ದೊಡ್ಡವರೆಲ್ಲಾ ಕೆಲಸಕ್ಕೆ ಹೊರಟರೆಂದರೆ ಬರುವುದು ಮಧ್ಯಾಹ್ನದ ಊಟದ ಹೊತ್ತಿಗೇ. ಈ ಸಮಯದಲ್ಲಿ ಪುಟ್ಟ ಮಕ್ಕಳನ್ನು ನೋಡಿಕೊಳ್ಳುವ ಕೆಲಸ ತಂಡದ ಅಫೀಶಿಯಲ್ ಬೇಬಿ ಸಿಟ್ಟರ್ಸ್ ಆದ ಆರರಿಂದ ಎಂಟು ವರುಷದ ಆ ಚಿಣ್ಣರ ಅಣ್ಣ ಅಕ್ಕಂದಿರದು. ಈ ಚಿಕ್ಕ ವಯಸ್ಸಿನಲ್ಲೇ ಇವರಿಗೆ ಎಷ್ಟೊಂದು ಜವಾಬ್ದಾರಿ ಎನ್ನಿಸಿತು. ಆ ಮಕ್ಕಳಲ್ಲಿ ನನ್ನ ಮನಸೆಳೆದದ್ದು ದುಂಡುದುಂಡುಗಿನ, ಚುರುಕಾಗಿ ಓಡಿಯಾಡಿಕೊಂಡಿದ್ದ ಸುಮಾರು ಎರಡು ವರುಷದ ಒಂದು ಹೆಣ್ಣು ಮಗು. ಹೆಸರು ಕೇಳಿದ್ದಕ್ಕೆ ಚೆವ್ವಿ ಎಂದು ಮುದ್ದಾಗಿ ಉಲಿಯಿತು. ಅಲ್ಲೇ ಇದ್ದ ಅವಳಣ್ಣ ಸೆಲ್ವಿ ಎಂದು ಸರಿಮಾಡಿದ. ಅತ್ಯಂತ ಚುರುಕಾಗಿದ್ದ ಸೆಲ್ವಿಯನ್ನು, ಆರು ವರುಷದ ಅವಳಣ್ಣ ಹಾಗೂ ಎಂಟು ವರುಷದ ಅವಳಕ್ಕ ಎಷ್ಟು ಹುಷಾರಾಗಿ ನೋಡಿಕೊಂಡರೂ ಸಾಲದು. ಬಹಳ ತುಂಟಾಟ ಮಾಡುತ್ತಿತ್ತು. ಆಟ ಆಡಿ ಸಾಕಾಗಿ ಸೆಲ್ವಿ ಅತ್ತರೆ, ಅವಳಕ್ಕ ನೀರು, ಬಿಸ್ಕತ್ತು ಕೊಟ್ಟು ಸಮಾಧಾನ ಮಾಡುತ್ತಿದ್ದಳು. ಪುಟ್ಟ ಸೆಲ್ವಿಯ ಮಧ್ಯಾಹ್ನದ ನ್ಯಾಪ್ ನಡೆಯುತ್ತಿದ್ದುದು ಅಲ್ಲೇ ನಿಲ್ಲಿಸಿದ್ದ ಎತ್ತಿನಗಾಡಿಯಲ್ಲಿ. ಕಾವಲಿಗೆ ಪಕ್ಕದಲ್ಲಿ ಅವಳಣ್ಣ! ಮಧ್ಯಾಹ್ನದ ಊಟಕ್ಕೆ ಬರುವ ಅಪ್ಪ ಅಮ್ಮಂದಿರು ಹಿಂದಿನ ದಿನ ಉಳಿದುದನ್ನೇ ತಿಂದು, ಮಕ್ಕಳನ್ನು ವಿಚಾರಿಸಿಕೊಂಡು ಹೊರಟರೆಂದರೆ ಇನ್ನು ಬರುವುದು ಸಂಜೆ ಐದು ಘಂಟೆಗೇ. ಬಂದ ಕೂಡಲೇ ದೊಡ್ಡ ಪಾತ್ರೆಗಳಲ್ಲಿ ನೀರು ಕಾಯಿಸಿ, ಮಕ್ಕಳಿಗೆಲ್ಲಾ ಮೀಯಿಸಿ, ತಾವೂ ಮಿಂದು, ಅಡಿಗೆ ಶುರು ಮಾಡುತ್ತಿದ್ದರು ಆ ಗುಂಪಿನ ಹೆಂಗಸರು. ಆಮೇಲೆ ಎಲ್ಲರೂ ಕುಳಿತು ಊಟ ಮಾಡಿ, ನಂತರ ನಮ್ಮ ಮನೆಯ ಮಂದ ಬೆಳಕಿನ ಪಡಸಾಲೆಯಲ್ಲಿ ಎಲ್ಲಾ ಸೇರಿ, ಕಷ್ಟ ಸುಖ ಮಾತಾಡಿಕೊಳ್ಳುತ್ತಾ ದಣಿವಾರಿಸಿಕೊಳ್ಳುತ್ತಿದ್ದರು ಈ ಕಷ್ಟ ಜೀವಿಗಳು. ಅಮೇರಿಕಾದಲ್ಲಿನ ಆರಾಮವಾದ ಜೀವನಕ್ಕೆ ಹೊಂದಿಕೊಂಡಿದ್ದ ನನ್ನ ಮಕ್ಕಳಿಗೆ ಇವರನ್ನು ನೋಡಿ ಆಶ್ಚರ್ಯ, ಜೊತೆಗೆ ಪ್ರಶ್ನೆಗಳ ಸರಮಾಲೆ. "ವೈ ಡೋಂಟ್ ದೀಸ್ ಕಿಡ್ಸ್ ಗೊ ಟು ಸ್ಕೂಲ್? ಇಸ್ ಇಟ್ ನಾಟ್ ಇಲ್ಲೀಗಲ್ ಟು ಲೀವ್ ದ ಕಿಡ್ಸ್ ಅಲೋನ್? ".....ಅಲ್ಲಾ ಶಾಲೆಗೇ ಹೋಗದೆ ಜೀವನದ ನಿಜವಾದ ಅನುಭವಗಳಿಂದ ಪಾಠ ಕಲೀತಿಲ್ವಾ ಈ ಮಕ್ಕಳು ಅಂತ ನನಗನ್ನಿಸದೇ ಇರಲಿಲ್ಲ.



ಅದೇ ಪಡಸಾಲೆಯಿಂದ ನನ್ನ ಕಣ್ಣು ಮತ್ತೆ ಅಲ್ಲೇ ಓಡಿಯಾಡಿಕೊಂಡಿದ್ದ ಪುಟ್ಟ ಸೆಲ್ವಿಯ ಕಡೆ ಹರಿಯಿತು. ಅವರಮ್ಮನ ತೊಡೆಯೇರಿ ಕುಳಿತ ಸೆಲ್ವಿಗೆ ಆ ಹೆಂಗಸು ತಲೆಗೆ ಎಣ್ಣೆ ಹಚ್ಚಿ, ನೀಟಾಗಿ ತಲೆ ಬಾಚಿ, ಬಣ್ಣದ ಟೇಪು ಬಿಗಿದು ಜುಟ್ಟು ಕಟ್ಟಿದಳು. ಎಷ್ಟಪ್ಪಾ ಪೇಷೆನ್ಸ್ ಈಕೆಗೆ ಅನ್ನಿಸಿತು. ಆ ಹೆಂಗಸಿನ ಇನ್ನೆರಡು ಮಕ್ಕಳು ಹಾಗೂ ಗಂಡ ಆಚೀಚೆ ಕುಳಿತಿದ್ದರು. ಆ ಇಡೀ ಗುಂಪಿನ ಕಣ್ಮಣಿ ಈ ಪುಟ್ಟ ಸೆಲ್ವಿ, ಅವಳ ತೊದಲು ನುಡಿಗಳಿಂದ ಎಲ್ಲರನ್ನೂ ರಂಜಿಸುತಿದ್ದಳು. ಏನನ್ನಿಸಿತೋ ತಡೆಯಲಾರದೇ ನಾನು ಸೆಲ್ವಿಯ ಅಮ್ಮನನ್ನು ಕೇಳಿಯೇಬಿಟ್ಟೆ, "ಅಲ್ಲಮ್ಮಾ ಇಷ್ಟೊಂದು ಕಷ್ಟ ಪಟ್ಟು ದುಡೀತಿದ್ದೀಯಲ್ಲಾ, ನಿನಗೆ ಮೂರು ಮಕ್ಕಳು ಯಾಕೆ ಬೇಕಿತ್ತು?" ಅಂತ. "ದೇವ್ರು ದೊಡ್ಡೋನು, ಎಂಗೋ ನಡೀತೈತೆ," ಎಂದು ಹೇಳಿ ಸುಮ್ಮನಾದ ಆಕೆಯನ್ನು ಕಂಡು, ಅಲ್ಲೇ ಪಕ್ಕದಲ್ಲಿದ್ದ ಇನ್ನೊಂದು ಹೆಂಗಸು, "ಇಲ್ಲ ಕಣವ್ವಾ, ಇವ್ಳಿಗೆ ಎರಡೇ ಮಕ್ಕಳು ಉಟ್ಟಿದ್ದು. ಓದ್ವರ್ಸ ಮೈಗೆ ಉಸಾರಿಲ್ಲ ಅಂತ ಆಸ್ಪತ್ರೆಗೆ ಓಗಿದ್ಲು, ಅಲ್ಲಿ ಯಾರೋ ಬಿಟ್ಟೋದ ಒಂದು ಎಣ್ಮಗು ಅಳ್ತಾ ಇತ್ತು. ಪೋಲೀಸ್ ಕರ್ಸಿ ಅನಾಥಾಶ್ರಮಕ್ಕೆ ಕಳಿಸ್ತೀನಿ ಅಂತ ಏಳಿದ್ದ ಡಾಕ್ಟ್ರನ್ನ ಒಪ್ಸಿ ಅಯ್ಯೋ ಪಾಪ ಅಂತ ಕರ್ಕೊಂಡ್ಬಂದು ಸಾಕ್ತಾ ಅವ್ಳೇ, ನಾವೆಲ್ಲಾ ಬೈದ್ರೂ ಕೇಳ್ದೇನೇ," ಅಂತಂದಳು.

ನಾನು ಏನಾದರೂ ಹೇಳಬೇಕು ಅನ್ನುವಷ್ಟರಲ್ಲಿ ಆ ಪುಟ್ಟ ಸೆಲ್ವಿ ಓಡಿ ಬಂದು ತನ್ನ ಅಮ್ಮನ ಕೊರಳಿಗೆ ತೆಕ್ಕೆ ಬಿದ್ದು, ಒಂದು ಮುತ್ತು ಕೊಟ್ಟು, ಹೊನಗೆ ಮಿಂಚಿಸಿ ಮಾಯವಾಯ್ತು. ಆಗ ಆ ತಾಯಿಯ ಮುಖದಲ್ಲಿ ತುಳುಕಿದ ಸಂತೋಷ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ.

"ಅಲ್ಲಾ, ಕಿತ್ತು ತಿನ್ನುವ ಬಡತನದ ನಡುವೆಯೂ ಒಂದು ಅನಾಥ ಮಗುವಿಗೆ ತಾಯಾಗಿ, ತನ್ನ ಪ್ರೀತಿ ವಾತ್ಸಲ್ಯಗಳನ್ನು ನೀಡಿ ಆ ಮಗುವನ್ನು ಸಾಕುವ ಜವಾಬ್ದಾರಿ ಹೊತ್ತಿರುವಳಲ್ಲಾ ಈ ತಾಯಿ, ಹ್ಯಾಟ್ಸ್ ಆಫ್ ಟು ಹರ್," ಎಂದು ಮನದಲ್ಲೇ ಆಕೆಗೆ ವಂದಿಸಿದೆ. ಆ ರಾತ್ರಿ ಕಣ್ಣಿಗೆ ನಿದ್ದೆ ಹತ್ತದೇ ಎದ್ದು ಕುಳಿತಿದ್ದ ನನಗೆ ಆ ಸೆಲ್ವಿ ಹಾಗೂ ಅವಳಮ್ಮನ ಚಿತ್ರವೇ ಕಣ್ಮುಂದೆ. ಜೊತೆಗೆ

ಮನಸ್ಸಿನ ತುಂಬಾ ಬಗೆಹರಿಯದ ದ್ವಂದ್ವಗಳು. ಅನುಕೂಲಸ್ಥರಾಗಿರೋ ನಮಗೇ ಇಲ್ಲದ ಆ ಧೈರ್ಯ, ವಿಶಾಲ ಮನೋಭಾವ ಈ ಬಡ ಹೆಂಗಸಿಗೆ ಯಾವ ಸಂಸ್ಕೃತಿಯಿಂದ ಬಂತು, ಹೇಗೆ ಬಂತು? ಅವಳ ಹಾಗೆ ಈ ಮಹಾಕಾರ್ಯವನ್ನು ನಾನೂ ಯಾಕೆ ಮಾಡಬಾರದು? ಹೇಳೋದಕ್ಕೇನೋ ಸುಲಭ, ಆದ್ರೆ ನಿಜವಾಗಿ ಮಾಡಿ ತೋರ್ಸೋದಕ್ಕೆ ದಂ ಇಲ್ವಲ್ಲಾ. ಛೇ ಛೇ. ಹೀಗೆ ಹತ್ತು ಹಲವಾರು ಯೋಚನೆಗಳು ಕಾಡಿದವು. ಬೆಳಗ್ಗೆ ಎದ್ದು ಆ ತಾಯಿಯ ಕೈಗೆ ನನ್ನ ಕೈಲಾದಷ್ಟು ನೋಟು ತುರುಕಿ ಇದು ಸೆಲ್ವಿಗೆ ಎಂದು ಹೇಳಿದಾಗಲೇ ಮನಸ್ಸಿಗೆ ಒಂದು ಬಗೆಯ ಸಮಾಧಾನ.

ಈ ಘಟನೆ ನಡೆದ ಎರಡು ವರ್ಷಗಳ ನಂತರ, ಸ್ಯಾನ್ ಹೋಸೆಯಲ್ಲಿ ಮಾಮೂಲಿನಂತೆ ಯಾಂತ್ರಿಕ ಜೀವನ ನಡೆಸುತ್ತಾ ಇದ್ದ ನನಗೆ, ಆಪ್ತ ಗೆಳತಿಯೊಬ್ಬಳಿಂದ ಬಂದ ಈ ಮೇಲ್ ಹಳೆಯ ನೆನಪುಗಳನ್ನು ಕೆದಕಿತು. ಆ ಈ ಮೇಲ್‌ನ ಒಕ್ಕಣೆ, "ನಮ್ಮ ಆಪ್ತರಲ್ಲಿ ಹಂಚಿಕೊಳ್ಳಬೇಕಾದ ಒಂದು ಸಂತೋಷದ ವಿಷಯವೇನೆಂದರೆ, ಹೋದವಾರ ತಾನೇ ನಾವು ಒಂದು ಮಗುವನ್ನು ದತ್ತು ತೆಗೆದುಕೊಂಡೆವು. ನಮ್ಮ ಹಿರಿಯ ಮಗಳಿಗೆ ಜೊತೆಯಾಗಿ ಆಡಲು ಪುಟ್ಟ ತಂಗಿ ಹಾಗೂ ನಮ್ಮ ಮನೆ ಬೆಳಗಲು ಇನ್ನೊಬ್ಬಳು ಮಗಳು ಸಿಕ್ಕಳೆಂದು ನಮಗೆಲ್ಲಾ ತುಂಬಾ ಸಂತೋಷವಾಗಿದೆ. ಪೇಪರ್‌ವರ್ಕ್ ಮುಗಿದ ಕೂಡಲೇ ಎಲ್ಲರೂ ಹೊರಟುಬರುವೆವು." ಜೊತೆಗೆ ಒಂದು ಮುದ್ದಾದ ಹೆಣ್ಣು ಮಗುವಿನ ಚಿತ್ರ. ನನಗೆ ಕೂಡಲೇ ಸೆಲ್ವಿಯ ನೆನಪಾಯ್ತು. ಜೊತೆಗೆ ಅವಳಮ್ಮ ಸಹ. ಈ ನನ್ನ ಗೆಳತಿಯ ಬಗ್ಗೆ ಹೆಮ್ಮೆಯೆನಿಸಿ ಆನಂದದಿಂದ ಕಣ್ಣೀರು ತುಳುಕಿತು. ಇಂತಹ ಸಹೃದಯೀ ಮಹಾತಾಯಂದಿರು ಇರುವ ತನಕ ಈ ಪ್ರಪಂಚದಲ್ಲಿ ಯಾವ ಮಕ್ಕಳೂ ಅನಾಥರಲ್ಲ. ಅಲ್ಲವೇ?

◈




# ಮೈ ನೆಗಡಿ

**ವನಿತ ಪದ್ಮನಾಭ ರಾವ್**

ಮಿಲ್ಪಿಟಾಸ್, ಕ್ಯಾಲಿಫೋರ್ನಿಯ

ಹಲವು ಬಾರಿ ನಮ್ಮ ಮಕ್ಕಳ ಮಾತುಗಳು ನಮಗೆ ಬಹಳ ನಗು ತರಿಸುತ್ತವೆ. ಆ ಮಾತುಗಳನ್ನು, ಘಟನೆಗಳನ್ನು ಮೆಲಕು ಹಾಕುತ್ತಾ, ಇತರರೊಂದಿಗೆ ಹಂಚಿಕೊಳ್ಳುವುದರಲ್ಲಿ ಸಹ ಸಂತೋಷವಿರುತ್ತದೆ. ಇಂತಹ ಒಂದು ಸಂದರ್ಭ ಇಲ್ಲಿದೆ. ನಮ್ಮ ಶ್ರೇಯಸ್‌ಗೆ ವರ್ಷದ ಹಲವು ತಿಂಗಳುಗಳಲ್ಲಿ "ನೆಗಡಿ" ಉತ್ತಮ ಗೆಳೆಯ. ಸದಾಕಾಲ ಸುರು-ಬುರು ಎನ್ನುತ್ತಾ ಹಾಕಿರುವ ಬಟ್ಟೆಯನ್ನೆಲ್ಲಾ ಒದ್ದೆಮಾಡಿಕೊಂಡಿದ್ದರೂ, ಐಸ್‌ಕ್ರೀಮ್ ಮತ್ತು ಕಲ್ಲಂಗಡಿ ಹಣ್ಣುಗಳೆಂದರೆ ಪ್ರಾಣ. ತನ್ನ ಊಟವನ್ನು ಬಿಟ್ಟರೂ ಐಸ್‌ಕ್ರೀಮ್ ಮತ್ತು ಕಲ್ಲಂಗಡಿ ಹಣ್ಣುಗಳನ್ನು ಬಿಡಲಾರ. ಹೊಟ್ಟೆ ತುಂಬಾ ತಿಂದಿದ್ದರೂ ಇವುಗಳನ್ನು ನೋಡಿದರೆ ಸ್ವಲ್ಪ ತಿನ್ನಬಲ್ಲ!



ಪ್ರತಿದಿನ ಮಕ್ಕಳನ್ನು ಶಾಲೆಯಿಂದ ಮನೆಗೆ ಕರೆದುಕೊಂಡು ಬರುವುದು ನನ್ನ ಜವಾಬ್ದಾರಿ. ಅವನನ್ನು ಶಾಲೆಯಿಂದ ಕರೆದುಕೊಂಡು ಅವನ ಅಕ್ಕನ ಶಾಲೆಗೆ ಹೋಗಿ, ಅವಳನ್ನೂ ಕರೆದುಕೊಂಡು ಮನೆಗೆ ಬರುವುದಕ್ಕೆ ಸುಮಾರು ೪೦ ನಿಮಿಷಗಳು ಬೇಕು. ಈ ಸಮಯದಲ್ಲಿ ಶ್ರೇಯಸ್‌ನ ಅನೇಕಾನೇಕ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲಿ ಸಾಕಾಗಿಹೋಗುತ್ತದೆ. ಹೀಗೇ ಮನೆಗೆ ಬರುವ ದಾರಿಯಲ್ಲಿ ಶುಕ್ರವಾರದ ದಿನದಲ್ಲಿ ಒಮ್ಮೊಮ್ಮೆ ಮಕ್ಕಳನ್ನು, ಬಾಯಿ ಚಪಲಕ್ಕಾಗಿ, ಮ್ಯಾಕ್‌ಡೊನಾಲ್ಡಿಗೋ, ಬ್ಯಾಸ್ಕಿನ್ ರಾಬಿನ್ಸಿಗೋ ಅಥವಾ ಮಿಲನ್ನಿಗೋ ಕರೆದುಕೊಂಡು ಹೋಗಿ ಏನಾದರೂ ಕೊಡಿಸುವುದುಂಟು. ಒಂದು ದಿನ ಶ್ರೇಯಸ್‌ಗೆ ಬಹಳ ನೆಗಡಿ. ಪ್ರತಿದಿನ ಬೆಳಗ್ಗೆ-ರಾತ್ರಿ ಔಷಧಿ ಕುಡಿಸಿ ಕುಡಿಸಿ ಬೇಸರಬಂದಿತ್ತು, ಶುಕ್ರವಾರ ಬೇರೆ!! ಅಮ್ಮಾ "ಐಸ್‌ಕ್ರೀಮ್ ಬೇಕು" ಎಂದಾಗ ನನಗೆ ಏನು ಹೇಳಬೇಕೋ ತೋಚಲಿಲ್ಲ. ಎಷ್ಟು ವಿಧವಿಧವಾಗಿ ಹೇಳಿದರೂ ಒಂದೇ ರಾಗ! "ಐ ವಾಂಟ್ ಐಸ್‌ಕ್ರೀಮ್!!". ಮತ್ತೆ ಅದೇ ಉತ್ತರ ನೀಡಿದೆ "ಶ್ರೇಯಸ್! ನಿನಗೆ ನೆಗಡಿ ಬಂದಿದೆ, ಐಸ್‌ಕ್ರೀಮ್ ತಿಂದರೆ ನೆಗಡಿ ಜಾಸ್ತಿಯಾಗುತ್ತದೆ!" ತಕ್ಷಣ ಬಂದಿತು ಮರು ಉತ್ತರ " ಮೈ ನೆಗಡಿ ಈಸ್ ಫೀಲಿಂಗ್ ಬೆಟರ್, ಅಮ್ಮಾ! ನಡಿ ಐಸ್‌ಕ್ರೀಮ್ ಕೊಡಿಸು. ಏನೂ ಆಗಲ್ಲ, ಇಟ್ಸ್ ಓಕೇ!" ಎಂದಾಗ ನನಗೆ ನಗು ತಡೆಯಲು ಆಗಲೇ ಇಲ್ಲ.

◈



# 'ಅಮ್ಮಾ', ಮಹಾತ್ಯಾಗಿ ಅಮ್ಮ

**ಡಾ. ಮೀನಾ ಸುಬ್ಬರಾವ್**

ಸಲಿನಾಸ್, ಕ್ಯಾಲಿಫೋರ್ನಿಯ, *subbaraomeena_AT_yahoo.com*


ನಾ ಹುಟ್ಟುವ ಮೊದಲೇ ಆಸೆ ಹೊತ್ತಿದ್ದೆ.
ನನ್ನ, ಆ ಸಮಯ ಬಂದಾಗ ಹೆತ್ತಿದ್ದೆ.
ಮಗುವ ಆ ಮುಗ್ಧ ಮುಖವ ನೋಡಿ ಸೋತಿದ್ದೆ.
ಮುಗುಳ್ನಗೆಯ ಮುಖದಿಂದ ಅಕ್ಕರೆಯ ಸುರಿದಿದ್ದೆ.

"ಅಮ್ಮಾ" ಎಂಬ ಕರೆಗೆ ಅರಳಿದಮುಖದಿ ಅವಸರದಿ ಓಡೋಡಿ ಬಂದೆ.
ಅತ್ತು ಅಬ್ಬರದ ಕರೆಗೆ ಅನುಕಂಪದಿ ಅಭಿಮಾನ ತೋರಿಸಿ ನಿಂದೆ.
"ಕಂದಾ" ಎಂಬ ಕೂಗಿಗೆ ಅನುಕರಿಸಿದ ಕಾಲ್ಗಳ ಹೆಮ್ಮೆಯಿಂದ ನೋಡುತ್ತಾ ನಿಂತೆ.
ಕೋಪ ಕೆಂಡದಷ್ಟಾದರೂ, ತಂಪನು ತರಿಸಿ ನಗುತ್ತಾ ನಗಿಸಿದೆ.

ಬೆಳೆದುದ್ದಕ್ಕೂ ಮೈಮರೆತು ಕಾಪಾಡಿ ದೃಷ್ಟಿಸಿದೆ.
ಬಂಧು ಬರುವವರನು ಸ್ನೇಹದಲಿ ಕಾಣೆಂದೆ.
ಬರೆದು, ಓದುಗಳ ಪಾಠಕೆ ನೀ ಮೊದಲ ಗುರುವಾದೆ.
ಬೇಕು ಬೇಡಗಳ ಭೇದಿಸಿ, ಸನ್ಮಾರ್ಗವ ತೋರಿಸಿದೆ.

ಉಳ್ಳಲ್ಲಿ ಸಹಾಯವೆಸಗಿದರೆ ಒಳಿತೆಂದೆ.
ಉಪ್ಪು ತಿಂದಲ್ಲಿಗೆ ವಂಚಕತನ ವಲ್ಲೆ ಎಂದೆ.
ಉಳಿಸಲು ಸುಧರ್ಮ, ಸತ್ಸಂಗಗಳ ಯತ್ನವ ಮಾಡೆಂದೆ.
ಉರಿದು ಬೀಳುವವರಿಗೂ, ಮುಪ್ಪಿದ್ದರೆ, ಕ್ಷಮಿಸೆಂದೆ.


ಅಮ್ಮಾ ನೀ ಮನುಕುಲದ 'ಮಹಾತಾಯಿ'ಯಾದೆ.
ಅಮ್ಮಾ ನೀ ಮಾನವೀಯತೆಯ 'ಮೊದಲ ಪ್ರತಿನಿಧಿ'ಯಾದೆ.
ಅಮ್ಮಾ ನೀ ಸರ್ವಜೀವಿಗಳ ಸಹೃದಯತೆಯ 'ಸಾಕಾರ'ವಾದೆ.
ಅಮ್ಮಾ, ನಾ ನಿನಗೆ ಸದಾ ಚಿರಋಣಿಯಾದೆ.



# ಪದಬಂಧ

**ಶ್ರೀವತ್ಸ ದುಗ್ಲಾಪುರ**

ಸನ್ನಿವೇಲ್, ಕ್ಯಾಲಿಫೋರ್ನಿಯ, *vatsee_AT_hotmail.com*




**ಎಡದಿಂದ ಬಲಕ್ಕೆ:**

೧. ಕಾವ್ಯದಲ್ಲಿ ಬಳಸುವ ರೂಪಕ ಇಲ್ಲಿ ವಿಗ್ರಹವಾಗಿದೆ (೩)
೩. ಇದಕ್ಕಾಗಿ ಭಕ್ತರು ಗಂಟೆಗಟ್ಟಲೆ ದೇವಸ್ಥಾನದಲ್ಲಿ ಸಾಲುಗಟ್ಟಿರುವುದುಂಟು; ರಾಜಕಾರಣಿಗಳು ಸ್ವಕ್ಷೇತ್ರಕ್ಕೆ ಐದು ವರ್ಷಗಳಿಗೊಮ್ಮೆ ಭೇಟಿ ನೀಡುವ ಕ್ರಿಯೆ! (೩)
೫. ಛಾಪಿಸುವಾಗ ಈ ಅಸುರನ ಕಾಟದಿಂದ ಅಕ್ಷರಗಳು ಕೈ-ಕಾಲು ಕಳೆದುಕೊಳ್ಳುತ್ತವೆ (೫)
೮. ಹೆಣ್ಣು ಕೊಟ್ಟವನು; ಪೋಲೀಸರ ಬಗ್ಗೆ ಗೌರವಾದರ ಹುಟ್ಟಿದಾಗಲೂ ಅವರನ್ನು ಹೀಗೆ ಕರೆಯುತ್ತಾರೆ (೨)
೯. ಶಯನಗ್ರಹದ ಅವಿಭಾಜ್ಯ ಅಂಗ; ಅನಂಗಕ್ಕೆ ರಂಗ! (೨)
೧೧. ಈ ಸಂಪಾದನೆಯ ಅಗಲಿಕೆ ಕಷ್ಟ (೩)
೧೨. ಏರುತಿಹುದು, ಹಾರುತಿಹುದು ನೋಡು ನಮ್ಮ ... (೨)
೧೬. ಭೂಮಿಯ ಪಾಪಗಳನ್ನು ತೊಳೆಯಲು ವಿಷ್ಣುವು ಹಲವಾರು ಬಾರಿ ಎತ್ತಿದ ವೇಷಗಳು (೫)
೧೭. ಲದ್ದಿಯಲ್ಲ, ಉಪಯೋಗಕ್ಕೆ ಬಾರದ್ದು (೨)
೧೮. ನೀವು ಮುಂದಿನ ಕಂತಿಗೆ ಕಾಯುವಂತದ್ದು ಇಲ್ಲಿ ಹಿಮ್ಮುಖವಾಗಿ ಹರಿಯುತ್ತಿದೆ (೪)
೨೦. ಸಮುದಾಯವನ್ನು ತಲುಪಲು ಬಳಸುವ ದಾರಿ (೩,೩)
೨೨. ವೇಳೆಯ ಮಹತ್ವವನ್ನು ಅರಿತವ (೬)
೨೫. ಈ ವೇಳಾಪಟ್ಟಿ ನೀರಸವಾದರೆ ನೋಡುಗರ/ಕೇಳುಗರ ಕರ್ಮ! (೪)
೨೭. ದೊಂಬನಾಟದ ತಲೆಕೆಳಗಾಗುವಿಕೆ (೨)
೨೮. ಮಂಜು ಮುಸುಕಿದ ಬೆಟ್ಟ ಆ ಕೊನೆಯಲ್ಲಿದೆ (೫)
೩೧. ಮೂಗಿಗಿಂತ ಇದು ಭಾರವಾಗುವುದು ಸಾಮಾನ್ಯವಾಗಿ ಗಾದೆಯಲ್ಲಿ ಮಾತ್ರ (೨)
೩೨. ಅದ್ವಿತೀಯ, ಸಾಟಿಯಿಲ್ಲದ (೩)
೩೩. ಢಕಾಯತಿಗೂ ಈ ಯೋಗಿಗೂ ಸಂಬಂಧವಿಲ್ಲ! (೨)
೩೪. ನಾಶದ ಅರ್ಥ ಇಲ್ಲಿ ಹಿಂತಿರುಗಿದೆ (೨)
೩೮. ಚರ್ಚೆಗೆ ಎಡೆಯಾದುದು; ಕೊನೆಯಲ್ಲಿರುವುದು ಪದವೇ ಎಂಬುವುದರ ಬಗ್ಗೆ ವಾದ ಮಾಡಬಹುದೇನೋ? (೫)
೩೯. ರಾಯರು ಈ ಪ್ರಯಾಣಕ್ಕೆ ಕುದುರೆಯೇ ವಾಸಿ ಅಂದಾರು (೩)
೪೦. ಕಸ್ತೂರಿಯು ಕಾಸಿಗೆ ಕೊಂಡೆನೆಂದು ಬಿಂಕದಿಂದ ಊರಿಗೆಲ್ಲಾ ಊದಿ ತೋರಿಸಿದ್ದು ಏನನ್ನು? (೩)

**ಮೇಲಿನಿಂದ ಕೆಳಕ್ಕೆ:**

೧. ಕಾವ್ಯದ ಪ್ರತಿಮಾವಳಿಯನ್ನು ಒಂದು ವಿಶಿಷ್ಟವಾದ ರೀತಿಯಲ್ಲಿ ಬಳಸಬೇಕೆನ್ನುವ ಪಂಥದ ಯೋಚನಾಲಹರಿ (೫)
೨. ದಟ್ಟವಾಗಿ ಬೆಳೆದ ಗಿಡಗಳ ಗುಂಪು; ಬಿದುರಿನದ್ದಾದರೆ ಆನೆಗಳಿಗೆ ಇಷ್ಟ (೨)
೪. ವಂಚಕರು ಹಚ್ಚುವ ಬೆಣ್ಣೆಯಂತೆ ನಾಜೂಕು (೨)
೫. ಕರಾರುಪತ್ರ, ಜಾಮೀನುಪತ್ರ (೪)
೬. ಇದನ್ನುಪಯೋಗಿಸಿ ಬಾವಿಯಿಂದ ನೀರೆತ್ತಲು ರಟ್ಟೆಯಲ್ಲಿ ಬಲವಿರಬೇಕು (೨)
೭. ಸಾಂಘಿಕ ಬಾಳುವೆಯನ್ನು ತಿದ್ದುವ ಇವನಲ್ಲಿ ಚಂದ್ರ ಅದಲು ಬದಲಾಗಿದ್ದಾನೆ (೩,೪)
೧೦. ಮದುವೆ ಮುಂತಾದ ಶುಭಕಾರ್ಯದ ಸಂದರ್ಭದಲ್ಲಿ ಮನೆಯ ಮುಂದೆ ಹಾಕುವ ಬಳ್ಳಿಯ ಛಾವಣಿ (೩)
೧೩. ಕೆಳಗೆ ಇಳಿಯುತ್ತಿರುವ (೪)
೧೪. ಈ ಕಲಹಪ್ರೇಮಿಯು ಉತ್ತಮ ವೈಣಿಕನೂ ಹೌದು (೩)
೧೫. ಎಡವು ಇಲ್ಲಿ ತಲೆಕೆಳಕಾಗಿದೆ (೨)
೧೯. ಬರ ಬಂದ ಕಡೆ ಕ್ಷೇಮವೆಂಥದ್ದು? (೨)
೨೦. ಸಮಾನವಾದ ಕಾಲಿನ ವ್ಯಕ್ತಿಯಲ್ಲ! ಒಂದೇ ಕಾಲದ ಕಾವ್ಯ-ನಿರ್ಮಾತೃ (೫,೨)
೨೧. ನೆರವೇರಿಸಬಹುದಾದದ್ದು; ಆದರೆ ಸದ್ಯಕ್ಕೆ ತಲೆಕೆಳಕಾಗಿದೆ (೨)
೨೩. ಈ ಮೇಲ್ವಿಚಾರಣೆಯಿಂದ ಪಾರು ಆಗಲು ನೀವು ಹೀಗೆ ಅಧಿಕಾರ ಚಲಾಯಿಸಬೇಕಾಗಬಹುದು (೪)
೨೪. ಈ ಕಂಪಿನಲ್ಲಿ ಸೊಗವಿದೆ (೩)
೨೬. ವಿಕ್ರಯಿಸಬೇಕಾದರೆ ಇದು ಗೊತ್ತಿರಬೇಕು (೨)
೨೮. ಯಜಮಾನ; ದೊಡ್ಡವನೂ ಹೌದು (೩)
೨೯. ವಿಧವಿಧವೆಂಬ ಅರ್ಥ ಕೊಡುವ ಈ ಪದದಲ್ಲಿ ಹಾವ ತುಂಬಿದೆ (೫)
೩೦. ನಾಡಿನ ಜನಕ್ಕೆ ಸಂಬಂಧಿಸಿದ್ದು; ಸಾಹಿತ್ಯದ ಪ್ರಾಕಾರ (೪)
೩೫. ತೀರಾ ಸಾಮಾನ್ಯವಾದ (೨)
೩೬. ಕೊಳಕು; ಗುಡಿಸಿ ಬಿಸುಡಬಹುದಾದದ್ದು (೨)
೩೭. ಮೌನ ಬಂಗಾರವಾದರೆ ಇದು ಬೆಳ್ಳಿ; ಕೆಲವರು ಆಡಿದರೆ ಮುತ್ತು, ಉಳಿದವರು ಆಡದಿದ್ದರೇ ಒಳಿತು! (೨)



*(ಉತ್ತರಗಳಿಗಾಗಿ ೧೨೭ನೇ ಪುಟವನ್ನು ನೋಡಿ. ಉತ್ತರಗಳನ್ನು ತಲೆಗೆಳಕಾಗಿ ಮುದ್ರಿಸಿರುವುದರಿಂದ, 'ತಿಪ್ಪರಲಾಗ ಹೊಡೆದರೂ ಉತ್ತರ ಸಿಗಲಿಲ್ಲ' ಎಂದು ಮಾತ್ರ ಹೇಳಬೇಡಿ!)*

# ಹೊನ್ನಿನ ಸೇತುವೆ-೨೦೦೪



*ಸಂಪಾದಕರ ಶ್ರದ್ಧೆ ಮತ್ತು ಸಂಸ್ಥಾಪಕರ ನಿಷ್ಠೆ ನಿಸ್ಸಂದೇಹವಾಗಿ ರುಜುವಾತಾಗಿದೆ. ಕೂಟದ ಇತರ ಚಟುವಟಿಕೆಗಳಂತೆ ಸಂಚಿಕೆಯ ಪ್ರಕಟಣೆಯೂ ಒಂದು ಎಂದು ದೃಢವಾಗಿ ನಂಬಿರುವ ಕಾರ್ಯಕಾರೀ ಸಮಿತಿ ಇಲ್ಲದಿದ್ದರೆ ಇಂಥಾ ಕೆಲಸ ಸಾಧ್ಯವಾಗುವುದಿಲ್ಲ.*

**ಡಾ. ಮೈ. ಶ್ರೀ. ನಟರಾಜ**
ಪೊಟೋಮೆಕ್, ಮೇರಿಲ್ಯಾಂಡ್, *mysreena_AT_aol.com*

ಕಳೆದ ವರ್ಷ, ಕೊಲ್ಲಿ ಪ್ರದೇಶದ ಕನ್ನಡ ಕೂಟದವರು ತಮ್ಮ ವಾರ್ಷಿಕ ಸಂಚಿಕೆಯಾದ "ಸ್ವರ್ಣಸೇತು"ವಿನ ಬಿಡುಗಡೆಗಾಗಿಯೇ ಒಂದು ಕಾರ್ಯಕ್ರಮವನ್ನು ಡಿಸೆಂಬರ್ ೧೧, ೨೦೦೪ ರಂದು ಏರ್ಪಡಿಸಿ ನನ್ನನ್ನು ಅತಿಥಿಯಾಗಿ ಆಹ್ವಾನಿಸಿದ್ದರು. ವರ್ಷದಿಂದ ವರ್ಷಕ್ಕೆ ದಾಟಲು ಹೊನ್ನಿನ ಸೇತುವೆ ಕಟ್ಟುವ ಶ್ರೀಮಂತ ಕನ್ನಡಿಗರು ಬಹಳಷ್ಟುಮಂದಿ ಉತ್ತರ ಕ್ಯಾಲಿಫೋರ್ನಿಯಾದ ಕೊಲ್ಲೀ ಪ್ರದೇಶದಲ್ಲಿ ನೆಲೆಸಿದ್ದಾರೆ. ಅವರಲ್ಲನೇಕರನ್ನು ಭೇಟಿಮಾಡುವ ಸದವಕಾಶ ನನಗೆ ಒದಗಿಬಂದದ್ದು ಆವಾಗಲೇ. ಸಭೆ ಎಲ್ಲ ಮುಗಿದಮೇಲೆ, ಸಮಿತಿಯ ಸದಸ್ಯರು ಮತ್ತು ಅವರ ಹಿಂದಿದ್ದು ದುಡಿದ ಅರ್ಧಾಂಗ/ಅರ್ಧಾಂಗಿಯರು ಸಕುಟುಂಬ-ಸಪರಿವಾರ-ಸಮೇತರಾಗಿ ಉಪಾಧ್ಯಕ್ಷ ರವೀಂದ್ರನಾಥ್ ಮತ್ತು ಅವರ ಧರ್ಮಪತ್ನಿ ಸಂಧ್ಯಾ ಅವರ ಮನೆಯಲ್ಲಿ ನೆರೆದು ತಮ್ಮ ಇಡೀ ವರ್ಷದ ಆಗು-ಹೋಗುಗಳನ್ನು ಪುನಃ ಮೆಲಕುಹಾಕಿದ ದೃಶ್ಯ ಸುಂದರವಾಗಿತ್ತು. ಯೋಗೇಶ್ ದೇವರಾಜರ ಮುಂದಾಳತ್ವದಲ್ಲಿ ಸಮಿತಿ ಮಾಡಿದ ಸಾಧನೆಗಳನ್ನು ಪರಸ್ಪರ ಮೆಚ್ಚುಗೆ ಮತ್ತು ಕೃತಜ್ಞತೆಗಳನ್ನು ಅರ್ಪಿಸುತ್ತ, ನೆನಪಿನ ಕಾಣಿಕೆಗಳನ್ನು ಕೊಟ್ಟು ಸಂಭ್ರಮಪಟ್ಟ ಆ ದೃಶ್ಯ ಹೃದಯಂಗಮವಾಗಿತ್ತು.

ಅಂದಿನ ಸಂತೋಷಕೂಟದಲ್ಲಿ, ಹಲವು ಅಚ್ಚರಿಯ ವಿಷಯಗಳು ನನ್ನ ಗಮನವನ್ನು ವಿಶೇಷವಾಗಿ ಸೆಳೆದವು: (೧) ಈ ಕೂಟ ಅಮೇರಿಕದ ಎಲ್ಲ ಕನ್ನಡ ಕೂಟಗಳ ಪೈಕಿ ಅತಿದೊಡ್ಡದಾಗಿ ಬೆಳೆದಿದೆ (ಪ್ರಾಯಶಃ, ಅದು ವಾಷಿಂಗ್‌ಟನ್ನಿನ ಕಾವೇರಿ ಮತ್ತು ನ್ಯೂಯಾರ್ಕ್ ಕನ್ನಡ ಕೂಟಗಳಂಥ ದೊಡ್ಡ ಸಂಘಗಳನ್ನು ಹಿಂದಕ್ಕೆ ಹಾಕಿ ಮುಂದೆ ಸಾಗಿದೆ ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆತವು. (೨) ೨೦೦೪ರಲ್ಲಿ ವಾರ್ಷಿಕ ಚಂದಾ ತೆತ್ತ ಅಥವಾ ಆಜೀವ ಸದಸ್ಯರಾಗಿಬಿಟ್ಟಿರುವ ಕುಟುಂಬಗಳ ಒಟ್ಟು ಸಂಖ್ಯೆ ೬೪೫. (೩) ಅಷ್ಟೇ ಅಲ್ಲ, ಈ ವರುಷ ಹೆಚ್ಚಿದ ಸದಸ್ಯತ್ವ ಶೇಖಡಾ ೬೦, ಒಟ್ಟು ೨೦೦ಕ್ಕೂ ಹೆಚ್ಚು ಆಜೀವ ಸದಸ್ಯರು, ಹಿಂದೆಂದೂ ಆಗಿರದಷ್ಟು ಸಂಖ್ಯೆಯಲ್ಲಿ ಹೊಸ ಸದಸ್ಯರನ್ನು ನೊಂದಾಯಿಸಿದ ಖ್ಯಾತಿ ಅವರದ್ದು. (೪) ಅಲ್ಲಿನ ವಾರ್ಷಿಕ ಆಯ-ವ್ಯಯಗಳೂ ಸಹ ಇತರ ಕೂಟಗಳ ಆಯ-ವ್ಯಯಗಳಿಗಿಂತ ಹೆಚ್ಚಿನ ಮೊಬಲಗನ್ನು ದಾಟಿದೆ. (೬) ಅಲ್ಲಿನ ಜನಪ್ರಿಯ ಸಭಾಕಲಾಪಗಳಿಗೆ ಸುಮಾರು ೮೦೦ ರಿಂದ ೧,೩೦೦ ಜನಗಳು ಸೇರುತ್ತಾರೆ. (ಇವರೆಲ್ಲರಿಗೂ ಮನರಂಜನೆಯೊದಗಿಸುವುದಲ್ಲದೇ ಉಟೋಪಚಾರಗಳನ್ನೂ ನಿರಾಯಾಸವಾಗಿ ನಿಭಾಯಿಸಿಬಿಡುತ್ತಾರೆ). (೭) ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಧಾರ್ಮಿಕ ಮುಂತಾದ ಅನೇಕ ಮಜಲುಗಳಲ್ಲಿ ಕೂಟದ ಸದಸ್ಯರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. (೮) ನವಚೈತನ್ಯಭರಿತರಾದ ಯುವಕ ಯುವತಿಯರು ಆಡಳಿತವರ್ಗ ಸೇರಲು ಮುಂದೆ ಬರುತ್ತಿರುವುದನ್ನು ನೋಡಿದರೆ, ಈ ಕೂಟದ ಭವಿಷ್ಯ ಉಜ್ವಲವಾಗಿದೆ ಎಂದು ನಿರ್ಭಯವಾಗಿ ಹೇಳಬಹುದು.

ಇನ್ನು ನಾನು ಅಲ್ಲಿಗೆ ಭೇಟಿ ಕೊಡಲು ಮುಖ್ಯ ಕಾರಣದ ಬಗ್ಗೆ ಒಂದೆರಡು ಅಂಶಗಳನ್ನು ಅವಲೋಕಿಸೋಣ. ಹಿಂದೆ ಆಯಾ ಸಂವತ್ಸರದ ಹೆಸರಿನಲ್ಲಿ ಹೊರಬರುತ್ತಿದ್ದ ವಾರ್ಷಿಕ ಸಂಚಿಕೆಗೆ ಈಗ "ಸ್ವರ್ಣಸೇತು" ಎಂಬ ಹೆಸರು ಅರ್ಥಪೂರ್ಣವೂ ಅನ್ವರ್ಥನಾಮವೂ ಆಗಿದೆ. ಈ ವರ್ಷದ ಸಂಚಿಕೆ ಸರ್ವಾಂಗಸುಂದರವಾಗಿ ಇದೀಗ ಹೊರಬಂದಿದೆ. ಜನಾರ್ದನಸ್ವಾಮಿ ಅವರು ರೂಪಿಸಿದ ಮುಖಪುಟ ಅತ್ಯಂತ ಆಕರ್ಷಕವಾಗಿದೆ. ಪ್ರಧಾನ ಸಂಪಾದಕ ಡಾ. ರವಿ ಗೋಪಾಲ ರಾವ್ ತುಂಬಾ ಶ್ರದ್ಧೆವಹಿಸಿ ದುಡಿದಿದ್ದಾರೆ ಎಂಬುದಕ್ಕೆ ಸಬೂತಾಗಿ ಇಡೀ ಹೊತ್ತಗೆಯೇ ಇದೆ. ಸಂಪಾದಕಮಂಡಲಿ (ಶ್ರೀಮತಿ ಮಾನಸಾ ವೆಂಕಟಸುಬ್ಬಯ್ಯ, ಶ್ರೀಯುತರುಗಳಾದ ಕೆ. ವಿ. ರಾಮಪ್ರಸಾದ್ ಮತ್ತು ಶ್ರೀವತ್ಸ ದುಗ್ಗಾಪುರ, ಹಾಗು ಕಿರಿಯರ ವಿಭಾಗಕ್ಕೆ ಸಿದ್ಧಾರ್ಥ್ ಸತೀಶ್) ಸಮರ್ಥವಾಗಿ ದುಡಿದು ಒಟ್ಟಾರೆ ಸುಂದರವಾದ ಫಲಿತಾಂಶಕ್ಕೆ ಕಾರಣರಾಗಿದ್ದಾರೆ. ಸ್ಪಷ್ಟವೂ ಸುಂದರವೂ ಆದ ಲಿಪಿಗಳು ('ಬರಹ೬.೦' ಅಳವಡಿಸಿಕೊಂಡಿರುವ 'ನುಡಿ'ಯ ಲಿಪಿ), ಉತ್ತಮ ಮಟ್ಟದ ಲೇಖನಗಳಲ್ಲಿ ಕಂಡುಬರುವ ವಸ್ತುವೈವಿಧ್ಯ, ಸಮಾನ ಗೌರವಕ್ಕೊಳಗಾದ ಗದ್ಯ-ಪದ್ಯಗಳು, (ಕಥನ, ಕವನ, ಮಂಥನ, ನಂದನ, ಸ್ಪಂದನ ಮುಂತಾದ ಆಕರ್ಷಕ ವಿಭಜನೆ), ವರ್ಣಮಯ ಚಿತ್ರಗಳು ಓದಿಗೆ ಸಾಕಷ್ಟು ಹೂರಣವನ್ನೊದಗಿಸುತ್ತವೆ. ಉತ್ತರ ಕ್ಯಾಲಿಫೋರ್ನಿಯದ ಕನ್ನಡಿಗರ ಪೈಕಿ ಹೆಚ್ಚಿನ ಸಂಖ್ಯೆಯಲ್ಲಿರುವ ಬರಹಗಾರರು ಜಾಲತಾಣಗಳಲ್ಲಿ ಅಮೇರಿಕ ಹಾಗೂ ವಿಶ್ವದ ನಾನಾ ಭಾಗಗಳಲ್ಲಿ ಈಗಾಗಲೇ ಓದುಗರಿಗೆ ಪರಿಚಿತರಾಗಿರುವ ಪ್ರಸಿದ್ಧ ಬರಹಗಾರರು. ಅಧ್ಯಕ್ಷರ ಸಂದೇಶ, ಸಾಧನೆಗಳ ಪಕ್ಷಿನೋಟದ ಜೊತೆಗೆ ಹಲವು ಮುಖ್ಯ ಸಮಾರಂಭಗಳ ವರದಿಗಳೂ ವರ್ಷದ ಕಾರ್ಯಕ್ರಮಗಳ ಪರಿಚಯವನ್ನು ನೀಡುತ್ತವೆ.

ಪ್ರಧಾನ ಸಂಪಾದಕ ರವಿ ಗೋಪಾಲ ರಾವ್ ಸಂಪಾದಕೀಯದಲ್ಲಿ ತಮ್ಮ ಈ ವರ್ಷದ ಸಂಚಿಕೆಯಲ್ಲಿ ಸಾಧ್ಯವಾದಷ್ಟು ಅಮೇರಿಕದ ಪರಿಸರದ ವಸ್ತುವೈವಿಧ್ಯಕ್ಕೇ ಹೆಚ್ಚು ಇಂಬುಕೊಟ್ಟಿರುವುದರ ಬಗ್ಗೆ ಗಮನ ಸೆಳೆದಿದ್ದಾರೆ. ಮಕ್ಕಳ ವಿಭಾಗದ ಲೇಖನಗಳೂ ಚೆನ್ನಾಗಿ ಬಂದಿವೆ. ಹೆಚ್ಚಿನ ಸಂಖ್ಯೆಯಲ್ಲಿ ಬಾಲಕ-ಬಾಲಕಿಯರು ಲೇಖನಗಳನ್ನು ಬರೆದಿರುವುದನ್ನು ನೋಡಿದರೆ ಅಭಿಮಾನ ಉಕ್ಕುತ್ತದೆ. ಮಂಜುಳ ವಿಶ್ವನಾಥ್ ಅವರ ಭೀಷ್ಮನ ಪಾತ್ರದ ಚಿಕ್ಕ, ಚೊಕ್ಕ ವಿಶ್ಲೇಷಣೆಯಲ್ಲಿ ಇಡೀ ಮಹಾಭಾರತವೇ ಕಣ್ಮುಂದೆ ಬರುತ್ತದೆ. ವಿಶ್ವನಾಥ್ ಹುಲಿಕಲ್ ಅವರು ತಮ್ಮ ಲೇಖನದಲ್ಲಿ ಭಾಷಾಂತರಮಾಡುವವರ ಸವಾಲುಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡಿದ್ದಾರೆ. ಅಸಿತ ಪ್ರಭುಶಂಕರರವರು ಕೌಟುಂಬಿಕ ದೌರ್ಜನ್ಯ ಮತ್ತು ಹಿಂಸೆಗೆ ಗುರಿಯಾಗುವ ಅಮೇರಿಕದಲ್ಲಿನ ಭಾರತೀಯ ಮಹಿಳೆಯರ ಬಗ್ಗೆ ಲೇಖನವೊಂದನ್ನು ಒದಗಿಸಿ ಕಣ್ತೆರೆಸಿದ್ದಾರೆ. ರಾಮಪ್ರಸಾದ್ ಅವರು ಮಾಡಿದ ಸಂಸ್ಕೃತ ಸುಭಾಷಿತಗಳ ಸರಳ ಕನ್ನಡ ಅನುವಾದವಿದೆ. ಸಂಪಾದಕಮಂಡಲಿಯವರು ಪ್ರಭುಶಂಕರ್ ಅವರೊಂದಿಗೆ ನಡೆಸಿದ ಸಂವಾದ, ಅವರ ದೀರ್ಘಕಾಲದ ಕನ್ನಡ ಸಾರಸ್ವತಲೋಕ ಪರಿಚಯದಿಂದಾಗಿ, ಬಹಳ ವಿಚಾರಪೂರಿತವೂ ಪ್ರಯೋಜನಕಾರಿಯೂ ಆಗಿ ಮೂಡಿಬಂದಿದೆ. ಮಂಗಳಾ ಕುಮಾರ್ ಅವರ ಅನೇಕ ಕಥೆಗಳಿವೆ. ಸಾಕಷ್ಟು ಹಾಸ್ಯಲೇಖನಗಳೂ, ಲಘುಹರಟೆಗಳೂ (ಉದಾ: ಮಧುಕಾಂತ್ ಕೃಷ್ಣಮೂರ್ತಿಯವರ "ಲೈಫೇ ಚಿತ್ರಾನ್ನ"), ಹಲವು ಗಂಭೀರ ಪ್ರಬಂಧಗಳೂ (ಉದಾ: ಮಾನಸಾ ಅವರ "ಭಾಷೆಯ ಸುತ್ತ") ನೀತಿಕತೆಗಳು (ಉದಾ: ಬೆಟ್ಟದಪುರದವರು ಪ್ರಸ್ತುತ ಪಡಿಸಿದ ಬೌದ್ಧಮತಾನುಯಾಯಿಗಳಲ್ಲಿ ಪ್ರಚಲಿತವಿರುವ ಕತೆ "ಇದೇ ಬದುಕು, ಇದೇ ಪ್ರಪಂಚ") ಸರಿಪ್ರಮಾಣದಲ್ಲಿ ಪ್ರಕಟವಾಗಿವೆ. ಇನ್ನು ಕೆಲವು ಹೊಸ ಪ್ರಯೋಗಗಳು (ಉದಾ: ಕೆ.ಆರ್.ಎಸ್. ಮೂರ್ತಿಯವರ "ಪರಮಾಣು ಕವಿತೆ" -- ಒಂದೇ ಅಕ್ಷರದ ಕವಿತೆ ಹೋಗಲೀ ಒಂದಕ್ಷರವೂ ಇಲ್ಲದ ಕವಿತೆಯ ಮಟ್ಟವನ್ನೂ ಇವರು ತಲುಪಿದ್ದಾರೆ!) ಯಕ್ಷಗಾನದ ಸ್ವರೂಪವನ್ನು ವಿವರಿಸುವ ಯತ್ನ ವಸುಧಾ ಹೆಗಡೆಯವರ ಕಿರುಲೇಖನ (ಏನಿದು ಯಕ್ಷಗಾನ?) ದಲ್ಲಿದೆ. "ಕೆಲಸವಿಲ್ಲದ ಗಂಡು ನಾಟ್ ಇನ್ ಡಿಮ್ಯಾಂಡು" - ಸುಧಾ ಶ್ರೀಧರ ಅವರ ಹಾಸ್ಯಪ್ರಧಾನ ಕವಿತೆ, ಕಪ್ಪಿನಿಯ (ಕಪ್ಪಿನಯ್ಯ ಅಲ್ಲ) ಬರೆದ "ಕನ್ನಡಾಂಗ್ಲ-ಸಂಧಿ-ಸಮಾಸ-ಬದ್ಧ (ಅರಿ)ಕವಿತೆ(?)- "ಅಮೇರಿಕದ ಟೂರಿಸ್ಟರು," ರವಿ ಕೃಷ್ಣಾ ರೆಡ್ಡಿಯವರ ವ್ಯಂಗ್ಯಕವಿತೆ "ಅನಾಸಿನ್ ಕವಿ," ಇನ್ನೂ ಹಲವು ಪರಿಚಿತ ಹೆಸರುಗಳು-- ದತ್ತಾತ್ರಿ, ಸಂಧ್ಯಾ, ಮುಂತಾದವರ ಕವಿತೆಗಳು ಕವನವಿಭಾಗವನ್ನು ಶ್ರೀಮಂತಗೊಳಿಸಿವೆ. ಸಮಿತಿಯ ಸದಸ್ಯರ ಸುಂದರ ವರ್ಣಚಿತ್ರಗಳಲ್ಲದೇ ಇತರ ಒಳ್ಳೊಳ್ಳೆ ಛಾಯಾಗ್ರಹಣಗಳು ಕಣ್ಣನ ಸೆಳೆಯುತ್ತವೆ, ಥಟ್ಟನೆ ನೆನೆಪಾಗುವುದು ಪ್ರಕಾಶ್ ಮುನಿಯಪ್ಪನವರ "ಹೂವಿನ ಆಕರ್ಷಣೆ," ಜನಾರ್ದನರ "ಹೂವಿನ ಚೆಲುವು" ಮತ್ತು ಶ್ರೀವತ್ಸರ "ಹಕ್ಕಿಯ ನೆರಳು." ನನ್ನದು ಒಂದು ಪಕ್ಷಿನೋಟವೇ ಹೊರತು, ಎಲ್ಲಾ ಕತೆ-ಕವನ-ಪ್ರಬಂಧಗಳ ಪರಿಚಯ ಮಾಡಿಕೊಡುತ್ತಾ ಹೋದರೆ ಈ ನನ್ನ ಲೇಖನ ದೀರ್ಘವಾಗುತ್ತದೆ. ಸಂಪಾದಕರ ಶ್ರದ್ಧೆ ಮತ್ತು ಸಂಸ್ಥಾಪಕರ ನಿಷ್ಠೆ ನಿಸ್ಸಂದೇಹವಾಗಿ ರುಜುವಾತಾಗಿದೆ.

ಕೂಟದ ಇತರ ಚಟುವಟಿಕೆಗಳಂತೆ ಸಂಚಿಕೆಯ ಪ್ರಕಟಣೆಯೂ ಒಂದು ಎಂದು ದೃಢವಾಗಿ ನಂಬಿರುವ ಕಾರ್ಯಕಾರೀ ಸಮಿತಿ ಇಲ್ಲದಿದ್ದರೆ ಇಂಥಾ ಕೆಲಸ ಸಾಧ್ಯವಾಗುವುದಿಲ್ಲ. ಸ್ವರ್ಣಸೇತು ಬಿಡುಗಡೆ ಕಾರ್ಯಕ್ರಮದ ನಂತರ ರವೀಂದ್ರನಾಥರ ಮನೆಯಲ್ಲಿ ಸೇರಿದ್ದ ಅನೇಕರಲ್ಲಿ ಒಬ್ಬರ ಮಾತು ನನ್ನ ಗಮನ ಸೆಳೆಯಿತು. ಹಣಕಾಸಿನ ಚರ್ಚೆಗೇ ಪ್ರಾಮುಖ್ಯತೆ ಸಿಗುತ್ತಿದ್ದುದನ್ನು ಕೇಳಿ ಸಾಕಾಗಿ, "ಸಂಸ್ಕೃತಿ-ಸಾಹಿತ್ಯಗಳ ಬೆಳವಣಿಗೆಯ ಧ್ಯೇಯವನ್ನೇ ಇಟ್ಟುಕೊಂಡಿರುವ ಕನ್ನಡಕೂಟವೊಂದರ ಸಾಧನೆಗಳನ್ನು ಕೇವಲ ದುಡ್ಡಿನ ಅಳತೆಗೋಲಿನಿಂದ ಅಳೆಯಬಾರದು" ಎಂಬ ಚೇತಾವನಿಯಿತ್ತು ಅವರ ಮಾತಿನಲ್ಲಿ. ಸ್ವರ್ಣಸೇತುವಿನಂಥ ಒಂದು ಸಂಚಿಕೆಯನ್ನು ಪ್ರತಿ ವರ್ಷ ಬಿಡುಗಡೆ ಮಾಡುವುದೆಂದರೆ ಅದೇನು ಹುಡುಗಾಟವಲ್ಲ. ವರ್ಷವಿಡೀ ಆಡಿದ ನಾಟಕಗಳು, ಕುಣಿದ ನೃತ್ಯಗಳು, ಹಾಡಿದ ಹಾಡುಗಳು, ಆಹ್ವಾನಿಸಿ ಮಾಡಿಸಿದ ಭಾಷಣಗಳು, ಮಾಡಿದ ಊಟಗಳು, ಬರೆದ/ಓದಿದ ಲೇಖನಗಳು, ಇದೆಲ್ಲ ಸಾಧ್ಯವಾಗುವಂತೆ ಹಣ ಕೂಡಿಸಿದ ಯೋಜನೆಗಳು ಇವನ್ನೆಲ್ಲ ಮೊತ್ತವಾಗಿ ನೋಡಿದರೆ, ಪ್ರಚಂಡವಾದ ಸಾಧನೆಯನ್ನೇ ಮಾಡಿದೆ ಉತ್ತರ ಕ್ಯಾಲಿಫೋರ್ನಿಯದ ಕನ್ನಡ ಕೂಟ, ಸದಸ್ಯತ್ವವನ್ನು ಇಮ್ಮಡಿಸಿ ವಿಕ್ರಮವನ್ನೇ ಸಾಧಿಸಿದೆ ಎನ್ನಲು ಅಡ್ಡಿಯಿಲ್ಲ.

ಸ್ವರ್ಣಸೇತು ಬಿಡುಗಡೆಯ ಸರಳ ಸಮಾರಂಭವನ್ನೇ ತೆಗೆದುಕೊಳ್ಳಿ. ಅಲ್ಲಿ ಒಂದಿಷ್ಟು ಭಾವಗೀತೆ; ಒಂದಿಷ್ಟು ಕವನ ವಾಚನ/ಗಾಯನ; ಕನ್ನಡ ಭಾಷಣಗಳ ಜೊತೆಗೆ, ಸಾಹಿತ್ಯದ "ಕ್ವಿಜ್"; ಇವೆಲ್ಲ ತುಂಬ ಅರ್ಥಪೂರ್ಣವಾಗಿದ್ದವು. ರಾಮಪ್ರಸಾದ್ ಮತ್ತು ಪೂರ್ಣಿಮಾ ತಯಾರಿಸಿದ ವೈವಿಧ್ಯಮಯ (ಒಂದಿಷ್ಟು ಮನರಂಜನೆಯನ್ನೂ ಒದಗಿಸುವ, ಉದಾ:- "ಇಡ್ಲಿ ಎಂಬ ಶಬ್ದ

ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲು ಎಲ್ಲಿ ಬಳಕೆಯಾಗಿದೆ?" ಇತ್ಯಾದಿ, ಅದರಲ್ಲೂ, "ಸಿಡಿಗುಂಡು" ಪ್ರಶ್ನೆಗಳು); ಶ್ರೀಮತಿ ಮಂಗಳಾ ಕುಮಾರ್ ಅವರ ಸಿಹಿಧ್ವನಿಯಲ್ಲಿ ಮಿಂಚಿದ, ಸಿರಿಗನ್ನಡದಲ್ಲಿ ನಡೆದ ಸುಂದರ ನಿರ್ವಹಣೆ; ಇವೆಲ್ಲ ಕನ್ನಡ ಕೂಟವೊಂದನ್ನು ಅಳತೆ ಮಾಡಲು ಉಪಯೋಗಿಸಬಹುದಾದ ಅಳತೆಗೋಲುಗಳು. ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟವು ಇನ್ನು ಮುಂದೆಯೂ ಉತ್ತಮ ಕೆಲಸಗಳನ್ನು ಸಾಧಿಸಲಿ. ಸಿರಿಗನ್ನಡಂ ಗೆಲ್ಗೆ!

*ವಿ.ಸೂ. thatskannada.comನಲ್ಲಿ "ಜಾಲತರಂಗ" ಎಂಬ ಶೀರ್ಷಿಕೆಯ ಅಂಕಣದಲ್ಲಿ ಇನ್ನೂ ಕೆಲವು ವಿಷಯಗಳೊಡನೆ ಕೊಂಚ ವಿವರವಾಗಿ ಪ್ರಕಟವಾಗಿದ್ದ ಡಿಸೆಂಬರ್ ೨೯, ೨೦೦೪ರ ನನ್ನ ಲೇಖನವನ್ನು ೨೦೦೫ರ ಸ್ವರ್ಣಸೇತುವಿಗಾಗಿ ಅಳವಡಿಸಿಕೊಳ್ಳಲಾಗಿದೆ.*

◈



# ಕ್ರ್ಯಾನ್‌ಬೆರಿ ತೊಕ್ಕು


**ಸಂಧ್ಯಾ ರವೀಂದ್ರನಾಥ್**

ಮಿಲ್ಪೀಟಸ್, ಕ್ಯಾಲಿಫೋರ್ನಿಯ, *divyakrithi_AT_hotmail.com*


**ಬೇಕಾಗುವ ಪದಾರ್ಥಗಳು:**



- ೧ ಪ್ಯಾಕೆಟ್ ಕ್ರ್ಯಾನ್‌ಬೆರಿಗಳು
- ೧೦-೧೨ ಕೆಂಪು ಮೆಣಸಿನ ಕಾಯಿ
- ೧/೨ ಚಮಚ ಮೆಂತ್ಯ
- ೧/೪ ಚಮಚ ಅರಿಶಿನ
- ೧/೨ ಚಮಚ ಸಾಸಿವೆ
- ಉಪ್ಪು ರುಚಿಗೆ ತಕ್ಕಷ್ಟು
- ೪-೫ ಚಮಚ ಎಣ್ಣೆ
- ಕೆಲವು ಎಸಳು ಕರಿಬೇವು
- ಸ್ವಲ್ಪ ಇಂಗು

ಕ್ರ್ಯಾನ್‌ಬೆರಿಗಳು ಅಕ್ಟೋಬರ್, ನವೆಂಬರ್ ಕಾಲದಲ್ಲಿ ಸಿಗುತ್ತವೆ. ತುಂಬ ಹುಳಿಯಾಗಿರುತ್ತವೆ. ಒಳಗೆ ಬೀಜ ಇರುವುದಿಲ್ಲ.

**ವಿಧಾನ:**

- ಕ್ರ್ಯಾನ್‌ಬೆರಿಗಳನ್ನು ತೊಳೆಯಿರಿ.
- ಮೆಂತ್ಯ ಮತ್ತು ಮೆಣಸಿನಕಾಯಿಯನ್ನು ಬೇರೆ ಬೇರೆಯಾಗಿ ಹುರಿದು, ಪುಡಿ ಮಾಡಿಟ್ಟುಕೊಳ್ಳಿ.
- ಬಾಣಲೆಯಲ್ಲಿ ಎಣ್ಣೆ ಕಾಯಿಸಿ, ಸಾಸಿವೆ ಒಗ್ಗರಣೆ ಮಾಡಿಕೊಳ್ಳಿ. ಅರಿಶಿನ, ಇಂಗು, ಕರಿಬೇವು ಎಲೆಗಳನ್ನು ಹಾಕಿ.
- ಇದಕ್ಕೆ ಕ್ರ್ಯಾನ್‌ಬೆರಿಗಳನ್ನು ಹಾಕಿ. ಮರದ ಸೌಟಿನಿಂದ ಬೆರೆಸಿ. ಮುಚ್ಚಳ ಮುಚ್ಚಿಡಿ. ಅಗಾಗ ಮುಚ್ಚಳ ತೆಗೆದು ಕೆದಕುತ್ತಾ ಇರಿ. ೫-೬ ನಿಮಿಷದಲ್ಲಿ ಕ್ರ್ಯಾನ್‌ಬೆರಿಗಳು ಬೆಂದು ಮೆತ್ತಗಾಗುತ್ತವೆ. ಸೌಟಿನ ಸಹಾಯದಿಂದ ಉಂಡೆಯಾಗಿ ಉಳಿದಿರುವ ಬೆರಿಗಳನ್ನೂ ಮ್ಯಾಶ್ ಮಾಡಿ.
- ಪುಡಿ ಮಾಡಿರುವ ಮೆಂತ್ಯ ಮೆಣಸಿನ ಕಾಯಿ ಪುಡಿ ಸೇರಿಸಿ. ಉಪ್ಪು ಹಾಕಿ ಚೆನ್ನಾಗಿ ಬೆರೆಸಿ. ಎಲ್ಲ ಕ್ರ್ಯಾನ್‌ಬೆರಿಗಳು ಮೆತ್ತಗಾಗಿ ಹೊಂದಿಕೊಳ್ಳುವಂತೆ ತೊಳಸುತ್ತಾ ಇರಿ.
- ೮-೧೦ ನಿಮಿಷದ ನಂತರ, ಒಲೆಯಿಂದ ಕೆಳಗಿಳಿಸಿ. ಆರಿದ ಮೇಲೆ, ಒಂದು ಬಾಟಲಿನಲ್ಲಿ ತೆಗೆದಿಡಿ.
- ಅನ್ನ, ಚಪಾತಿ, ದೋಸೆ ಜೊತೆ ತೊಕ್ಕನ್ನು ತಿಂದು ಆನಂದಿಸಿ!

◈

**ನಿಮ್ಮ ಪೆಟ್ಟಿಗೆ (ಎನ್.ಆರ್.ಐ ಗಳಿಗೆ)**

ಇಲ್ಲಿ ಡಾಲರ್ ಚೆಲ್ಲಿ ತುಂಬಿದಿರೆರಡು ಪೆಟ್ಟಿಗೆ
ಅಲ್ಲಿ ರೂಪಾಯಿ ತೂರಿ ತುಂಬಿದಿರಿ ಅವೇ ಎರಡು ಪೆಟ್ಟಿಗೆ
ಬಂದು ಮತ್ತಿಲ್ಲಿ ಮೂಲೆಗೊರಗಿಸಿದಿರಿ ಖಾಲಿ ಪೆಟ್ಟಿಗೆ.

★

**ಖೆಡ್ಡ (ನಮಗೆಲ್ಲ)**

ಇರಬಹುದು ಬಾಳೊಂದು ಏರಿಳಿವ ಗುಡ್ಡ
ನಿಜ ಹೇಳೆ ಬಾಳು ಬರಿ ಖೆಡ್ಡ
ಇದ ತಿಳಿಯದಲೆ ನಾನಾದೆನತಿ ದಡ್ಡ.

★

--ಕಡೂರು ರಾಮಸ್ವಾಮಿ

# ಪ್ರೇಮ


**ಪುಷ್ಪಾ ಸುಬ್ಬರಾವ್**

ಪಾಲೊ ಅಲ್ಟೊ, ಕ್ಯಾಲಿಫೋರ್ನಿಯ, *pushpa_subbarao_AT_yahoo.com*


ಯೌವನದ ಸರಸ
ನಸುನಗೆಯ ಸನಿಹದಲಿ
ನೋಟಕ್ಕೆ ನೋಟ ಬೆರೆತು
ಮಿಂಚೊಂದು ದೇಹದಲಿ ಹರಿದಾಗ...

ಒಮ್ಮೆ ನೋಡಿದರೆ ಇನ್ನೊಮ್ಮೆ
ಇನ್ನೊಮ್ಮೆ ನೋಡಿದರೆ ಮತ್ತೊಮ್ಮೆ
ನೋಡಬೇಕೆನುವ ದಾಹದಲಿ
ಸರಕ್ಕನೆ ತಿರುಗಿದಾಗ...

ಕೈಗೆ ಕೈ ತಾಕಿ
ಮೈಗೆ ಮೈ ಸೋಕಿ
ಮಂಜು ಕರಗಿ ದಡದಡನೆ ಹರಿವ ಜಲಪಾತದಂತೆ
ಈ... ಬಡ ಹೃದಯ ಡವಡವನೆ ಚಡಪಡಿಸಿದಂತೇ...

ಆ.. ಸನಿಹವೆ ಚಿರವಾಗಲೆನುವ
ಆಶೆಯ ಬೇಗುದಿಯೊಂದು
ಹರಡಿ ಕಾಡ್ಗಿಚ್ಚಿನಂತೆ
ಅಪ್ಪಿ ಮೈಮನವೆತ್ತ...

ಅರಿತರೂ ಅರಿವಾಗದಂತೆ
ನೀನಿತ್ತ ಚುಂಬನದಲ್ಲಿ
ನನ್ನೇ ನಾ ಮರೆತಾಗ...
ಅರಿವಾಯಿತು ಅದೇ ಪ್ರೇಮ!